07 June 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

info.varthaman@gmail.com

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 191 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

**ಭಾವನಾಂತರಂಗ**

ಹಣವು ಕರೆದುಕೊಂಡು ಹೋಗದ ಎತ್ತರಕ್ಕೆ ಒಳ್ಳೆಯ ಸಂಸ್ಕಾರಗಳು ಮಾತ್ರ ಕರೆದುಕೊಂಡು ಹೋಗಬಲ್ಲವು!

ಸ್ನೇಹಾ ಆನಂದ್!


ಮೂವರು ಶಾಸಕರಿಗೆ ಸಿಎಂ ಆಹ್ವಾನ: ಶಾಸಕ ಇಕ್ಬಾಲ್ ಹುಸೇನ್ ಹೇಳಿಕೆ — ಪುಟ ಸಂ. 2


ಜೂ.21ರಂದು ವಿಶ್ವ ಯೋಗ ದಿನ: ಜಿಲ್ಲಾಧಿಕಾರಿ ಡಾ.ಕುಮಾರ — ಪುಟ ಸಂ. 3


ಎಲ್ಲಿಹೋದರು ಹೀಗೆ ಪಾಠ ಮಾಡುವ ಗುರುಗಳು — ಪುಟ ಸಂ. 6

# ರೆಡ್ಡಿ ರಾಜೀನಾಮೆ ಪ್ರಹಸನ ಅಂತ್ಯ

## ಜಲಸಂಪನ್ಮೂಲ ಖಾತೆಯಲ್ಲಿ ಮುಂದುವರಿಕೆ: ರಾಮಲಿಂಗಾರೆಡ್ಡಿ ಸ್ಪಷ್ಟನೆ

**ಬೆಂಗಳೂರು:** ಕಾಂಗ್ರೆಸ್ ಹೈಕಮಾಂಡ್ ಮನವೊಲಿಕೆ ಬಳಿಕ ಸಚಿವ ಸ್ಥಾನಕ್ಕೆ ನೀಡಿದ್ದ ರಾಜೀನಾಮೆಯನ್ನು ರಾಮಲಿಂಗಾರೆಡ್ಡಿ ವಾಪಸ್ ಪಡೆದಿದ್ದಾರೆ.

ರಾಜೀನಾಮೆ ವಾಪಸ್ ಕುರಿತು ಮಾಧ್ಯಮಗಳ ಜೊತೆ ಮಾತನಾಡಿದ ಅವರು, ನಿನ್ನೆ ಸಿಎಂ ಜೊತೆ ಎಲ್ಲಾ ಮಾತನಾಡಿದ್ದೇನೆ. ಅವರು ರಾಜೀನಾಮೆ ಅಂಗೀಕಾರ ಮಾಡಲ್ಲ ಎಂದಿದ್ದರು. ಸದ್ಯಕ್ಕೆ ಯಾವ ಗೊಂದಲವೂ ಇಲ್ಲ ಎಂದು ತಿಳಿಸಿದರು.

ನಾನಾಗಿ ಯಾವ ಖಾತೆಯನ್ನೂ ಕೇಳಿಲ್ಲ. ನೋಡೋಣ ಯಾವ ಖಾತೆ ಕೊಡ್ತಾರೆ ಅಂತ. ಮುಂದೆ ಅವಕಾಶ ಮಾಡಿಕೊಡ್ತೇವೆ ಅಂದಿದ್ದಾರೆ. ಮುಂದೆ ಏನಾಗುತ್ತದೆಂದು ನೋಡೋಣ ಎಂದರು.

ನೀವು ಸಚಿವ ಸ್ಥಾನಕ್ಕೆ ನೀಡಿದ ರಾಜೀನಾಮೆ ವಾಪಾಸ್ ಪಡೆಯಿರಿ. ಈ ವಿಚಾರ ರಾಹುಲ್ ಗಾಂಧಿ ಜೊತೆ ಚರ್ಚೆ ನಡೆಸಿ ನಿಮಗೆ ತಿಳಿಸುತ್ತೇನೆ. ಹೈಕಮಾಂಡ್ ಹೇಳುವ ಖಾತೆಯಲ್ಲಿ ನೀವು ಮುಂದುವರಿಯಬೇಕಾಗುತ್ತದೆ ಎಂದು ಸುರ್ಜೇವಾಲ ತಿಳಿಸಿದರು. ಅವರ ಸೂಚನೆ ಮೇರೆಗೆ ರಾಮಲಿಂಗಾರೆಡ್ಡಿ ರಾಜೀನಾಮೆ ಹಿಂಪಡೆದಿದ್ದಾರೆ.





### ಸಮಸ್ಯೆ ಬಗೆಹರಿದಿದೆ: ಡಿಕೆಶಿ

**ಬೆಂಗಳೂರು:** ರಾಮಲಿಂಗಾರೆಡ್ಡಿ ಅವರು ರಾಜೀನಾಮೆಯನ್ನು ವಾಪ್‌ನಲ್ಲಿ ಕಳಿಸಿಕೊಟ್ಟಿರುವುದು ನಿಜ. ಆದರೆ, ಯಾವುದೇ ಕಾರಣಕ್ಕೂ ಅವರ ರಾಜೀನಾಮೆ ಅಂಗೀಕರಿಸುವುದಿಲ್ಲ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ವಿಧಾನಸೌಧದಲ್ಲಿ ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ರಾಮಲಿಂಗಾರೆಡ್ಡಿ ಜೊತೆ ಮಾತನಾಡಿದ್ದೇನೆ. ಎಲ್ಲ ಸಮಸ್ಯೆ ಬಗೆಹರಿಸಲಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ರಾಮಲಿಂಗಾರೆಡ್ಡಿ ಅವರನ್ನು ಶುಕ್ರವಾರ ರಾತ್ರಿ ಭೇಟಿ ಮಾಡಿದ ವಿಚಾರವಾಗಿ ಕೇಳಿದಾಗ, ಅನಗತ್ಯವಾಗಿ ತಲೆಕೆಡಿಸಿಕೊಂಡು ನೀವು (ಮಾಧ್ಯಮಗಳು) ಏನೇನೋ ಕಥೆ ಕಟ್ಟಬೇಡಿ. ಈಗ ಆ ವಿಚಾರ ಬಗೆಹರಿಸಲಾಗಿದೆ ಎಂದು ಗರಂ ಆಗಿ ಪ್ರತಿಕ್ರಿಯೆ ನೀಡಿದರು.

ಸಿದ್ದರಾಮಯ್ಯ ಅವರ ಸರ್ಕಾರದ ವಿರುದ್ಧ ಜನರ ಆಕ್ರೋಶದ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಮುಖ್ಯಮಂತ್ರಿ

ಪುಟ 2ಕ್ಕೆ

### ಹೈಕಮಾಂಡ್ ಸಫಲ: ಸುರ್ಜೇವಾಲ ಘೋಷಣೆ



**ಬೆಂಗಳೂರು:** ರಾಮಲಿಂಗಾರೆಡ್ಡಿ ಮನವೊಲಿಸುವಲ್ಲಿ ಸಫಲರಾಗಿದ್ದೇವೆ. ಸಚಿವ ಸ್ಥಾನಕ್ಕೆ ಕೊಟ್ಟ ರಾಜೀನಾಮೆ ವಾಪಸ್ ಪಡೆದಿದ್ದಾರೆ ಎಂದು ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲ ತಿಳಿಸಿದ್ದಾರೆ.

ರಾಮಲಿಂಗಾರೆಡ್ಡಿ ಜೊತೆ ಖಾಸಗಿ ಹೋಟೆಲ್‌ನಲ್ಲಿ ಶನಿವಾರ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸುರ್ಜೇವಾಲ, ರಾಮಲಿಂಗಾರೆಡ್ಡಿ ಅವರು ರಾಜೀ ನಾಮೆ ವಾಪಸ್ ಪಡೆದಿದ್ದಾರೆ. ಸಚಿವ ಸಂಪು ಟದಲ್ಲಿ ಮುಂದುವರಿದು ಕೆಲಸ ಮಾಡುತ್ತಾರೆ ಎಂದು ಸ್ಪಷ್ಟಪಡಿಸಿದರು. ನಿಮ್ಮ ಯಾವುದೇ ಪ್ರಶ್ನೆಗೆ ಇಂದು ಉತ್ತರ ಕೊಡಲ್ಲ. ಬಿಜೆಪಿ ಸಾಕಷ್ಟು ಗೊಂದಲ ನಿರ್ಮಾಣ ಮಾಡಿದೆ. ವಿದ್ಯಾರ್ಥಿ ಸಂಘಟನೆಯಿಂದಲೂ ಬಿ.ಕೆ.ಹರಿಪ್ರಸಾದ್ ಜೊತೆ ರಾಮಲಿಂಗಾರೆಡ್ಡಿ ಇದ್ದರು. ರಾಮಲಿಂಗಾರೆಡ್ಡಿ ಅವರು 8 ಬಾರಿ ಶಾಸಕರಾಗಿದ್ದಾರೆ. ಪಕ್ಷಕ್ಕೆ ಅವರ ಅನುಭವ ಮೌಲ್ಯಯುತವಾಗಿದೆ ಎಂದು ತಿಳಿಸಿದರು. ನಾನು, ಸಿಎಂ ಡಿ.ಕೆ.ಶಿವಕುಮಾರ್, ಮಾಜಿ ಸಿಎಂ ಸಿದ್ದರಾಮಯ್ಯ, ಬಿ.ಕೆ.ಹರಿಪ್ರಸಾದ್ ನಾಲ್ಕು ಜನರೂ ರಾಮಲಿಂಗಾರೆಡ್ಡಿ ಜೊತೆ ಮಾತನಾ ಡಿದ್ದೇವೆ. ರಾಜೀನಾಮೆ ವಾಪಾಸ್ ಪಡೆಯಲು ಹೇಳಿದ್ದೆವು.

ಪುಟ 2ಕ್ಕೆ

# ‘ಅಸ್ತಿತ್ವ’ಕ್ಕಾಗಿ ಸುಮಲತಾ ಯತ್ನ

## ಬಿಜೆಪಿಯಿಂದ ರಾಜ್ಯಸಭಾ ಟಿಕೆಟ್ ಪಡೆಯಲು ತೆರೆಮರೆ ಕಸರತ್ತು



**ಮಂಡ್ಯ:** ಮಂಡ್ಯ ಮಾಜಿ ಸಂಸದೆ ಸುಮಲತಾ ಅಂಬರೀಶ್ ಮತ್ತೆ ಸಕ್ರಿಯ ರಾಜಕಾರಣಕ್ಕೆ ಎಂಟ್ರಿ ಕೊಡಲು ತೆರೆಮರೆಯಲ್ಲಿ ಕಸರತ್ತು ನಡೆಸುತ್ತಿದ್ದಾರೆ. ರಾಜ್ಯಸಭಾ ಚುನಾವಣೆ ಹಿನ್ನೆಲೆಯಲ್ಲಿ ತಮಗೆ ಟಿಕೆಟ್ ಸಿಗಲೇಬೇಕು ಎಂದು ಬೆಂಬಲಿಗರ ಮೂಲಕ ಬಿಜೆಪಿ ವರಿಷ್ಠರ ಮೇಲೆ ತೀವ್ರ ಒತ್ತಡ ಹೇರಲು ಸುಮಲತಾ ಮುಂದಾಗಿದ್ದಾರೆ.

ಮಂಡ್ಯ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಸುಮಲತಾ ಅವರು ಯಾವುದೇ ಪ್ರಮುಖ ಕಾರ್ಯಕ್ರಮ ಅಥವಾ ಪಕ್ಷದ ಚಟುವಟಿಕೆಗಳಲ್ಲಿ ಕಾಣಿಸಿಕೊಂಡಿರಲಿಲ್ಲ. ಆದರೆ, ಈಗ ರಾಜ್ಯಸಭಾ ಚುನಾವಣೆ ಹತ್ತಿರ ಬರುತ್ತಿದ್ದಂತೆ ರಾಜಕೀಯ ಅಸ್ತಿತ್ವಕ್ಕಾಗಿ ಅವರ ಹೋರಾಟ ಮತ್ತೆ ಮುಂಚೂಣಿಗೆ ಬಂದಿದೆ.

ಕಳೆದ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಬಿಜೆಪಿ ಹೈಕಮಾಂಡ್ ಸೂಚನೆ ಮೇರೆಗೆ ಸುಮಲತಾ ಮಂಡ್ಯ ಕ್ಷೇತ್ರವನ್ನು ಎಚ್.ಡಿ ಕುಮಾರಸ್ವಾಮಿಗೆ ಬಿಟ್ಟುಕೊಟ್ಟಿದ್ದರು. ಆ ಸಮಯದಲ್ಲಿ ಬಿಜೆಪಿ ನಾಯಕರು ಸುಮಲತಾ ಅವರಿಗೆ ಮುಂದಿನ ದಿನಗಳಲ್ಲಿ ಸೂಕ್ತ ಗೌರವ ಹಾಗೂ ಉನ್ನತ ಸ್ಥಾನಮಾನ ನೀಡುವುದಾಗಿ ಭರವಸೆ ನೀಡಿದ್ದರು ಎನ್ನಲಾಗಿದೆ.

ಆದರೆ ಕ್ಷೇತ್ರ ತ್ಯಾಗ ಮಾಡಿದ ಬಳಿಕ ಬಿಜೆಪಿಯು ಸುಮಲತಾ ಅವರನ್ನು ಸಂಪೂರ್ಣವಾಗಿ ಮೂಲೆಗುಂಪು ಮಾಡಿದೆ ಎನ್ನುವುದು ಬೆಂಬಲಿಗರ ಆರೋಪ.

ಈಗ ಸುಮಲತಾ ಬೆಂಬಲಿಗರು, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಭೇಟಿಯಾಗಿ ರಾಜ್ಯಸಭೆ ಟಿಕೆಟ್ ನೀಡುವಂತೆ ಮನವಿ ಸಲ್ಲಿಸಿದ್ದಾರೆ.

ಇಷ್ಟು ದಿನ ರಾಜಕೀಯದಿಂದ ದೂರ ಉಳಿದಿದ್ದ ಸುಮಲತಾ ಈಗ ಬೆಂಬಲಿಗರ ಮೂಲಕ ಪದೇ ಪದೇ ಒತ್ತಾಯ ಮಾಡಿಸುವ ತಂತ್ರದೊಂದಿಗೆ ಮರಳಿ ರಾಜಕೀಯ ಅಸ್ತಿತ್ವ ಪಡೆಯಲು ಹರಸಾಹಸ ಪಡುತ್ತಿದ್ದಾರೆ.

## ವಿಧಾನ ಪರಿಷತ್‌ಗೆ ಐವರು ನಾಮಪತ್ರ ಸಲ್ಲಿಕೆ

**ಬೆಂಗಳೂರು:** ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ನಡೆಯಲಿರುವ ಚುನಾವಣೆಗೆ ನಮ್ಮ ಪಕ್ಷದ ಎಲ್ಲ ಐವರು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ. ರಾಜ್ಯಸಭೆ ಚುನಾವಣೆಗೆ ಮೂವರು ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಶುಕ್ರವಾರ ನಾಮಪತ್ರ ಸಲ್ಲಿಸಿದ್ದರು. ಕಾಂಗ್ರೆಸ್ ರಾಷ್ಟ್ರೀಯ ವಕ್ತಾರರಾದ ಪವನ್ ಖೇರಾ ಅವರನ್ನು ಕರ್ನಾಟಕದಿಂದ ಕಣಕ್ಕೆ ಇಳಿಸಲಾಗಿದೆ. ಜೊತೆಗೆ ಎಐಸಿಸಿ ಕಾರ್ಯದರ್ಶಿ ಮನ್ಸೂರ್ ಅಲಿ ಖಾನ್ ಅವರಿಗೂ ಅವಕಾಶ ನೀಡಲಾಗಿದೆ. ವಿಧಾನ ಪರಿಷತ್ ಚುನಾವಣೆಯ ಎಲ್ಲ ಐದು ಸ್ಥಾನಗಳಿಗೆ ಕೆಪಿಸಿಸಿ ಅಧ್ಯಕ್ಷರೂ ಸೇರಿದಂತೆ

ಪುಟ 2ಕ್ಕೆ

## ರಾಜಕೀಯದಲ್ಲಿ ಮಳೆ, ಗುಡುಗು, ಸಿಡಿಲು ಸಾಮಾನ್ಯ



**ಬೆಂಗಳೂರು:** ನಮ್ಮ ಕುಟುಂಬದ ಸಮಸ್ಯೆ ನಾವು ಬಗೆಹರಿಸಿಕೊಳ್ಳುತ್ತೇವೆ. ನಾನು ಮುಖ್ಯಮಂತ್ರಿ, ರಾಮಲಿಂಗಾರೆಡ್ಡಿ ಅವರು ಸಚಿವರು. ಆದರೂ ನಾವೆಲ್ಲರೂ ಸ್ನೇಹಿತರು ಎಂದು ಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ರಾಮಲಿಂಗಾರೆಡ್ಡಿ ಅವರ ಜತೆ ಶುಕ್ರವಾರ ತಡರಾತ್ರಿವರೆಗೂ ಸಮಾಲೋಚನೆ ನಡೆಸಿದ ಬಳಿಕ ಖಾಸಗಿ ಹೊಟೇಲ್ ಬಳಿ ಮಾಧ್ಯಮಗಳ ಪ್ರಶ್ನೆಗೆ ಡಿ.ಕೆ.ಶಿವಕುಮಾರ್ ಪ್ರತಿಕ್ರಿಯೆ ನೀಡಿದರು. ರಾಮಲಿಂಗಾರೆಡ್ಡಿ ಅವರ ಮುನಿಸು ಶಮನವಾಗಿದೆಯೇ ಎಂದು ಕೇಳಿದಾಗ ಹೀಗೆ ಉತ್ತರಿಸಿದರು.

ರಾಮಲಿಂಗಾರೆಡ್ಡಿ ಅವರು ಪಕ್ಷದ ಹಿರಿಯರು, ಬೆಂಗಳೂರಿನಲ್ಲಿ ಪಕ್ಷ ಉಳಿಸುತ್ತಿರುವವರು. ಪಕ್ಷ ಬೆಳೆಸಲು ಕೆಲಸ ಮಾಡುತ್ತಿರುವವರು ಎಂದರು. ಅದೇ ಖಾತೆಯಲ್ಲೇ ಮುಂದುವರೆಯುತ್ತಾರೆಯೇ ಎಂದು ಕೇಳಿದಾಗ, ನಾವು ಖಾತೆ ವಿಚಾರವಾಗಿ ಏನು ಮಾತನಾಡಿದ್ದೇವೆ, ಬೇರೆ ಯಾವ ವಿಚಾರ ಮಾತನಾಡಿದ್ದೇವೆ ಎಂದೆಲ್ಲಾ ಮಾಧ್ಯಮಗಳ ಮುಂದೆ ಹೇಳಲು ಆಗುತ್ತದೆಯೇ ಎಂದು ಮರು ಪ್ರಶ್ನಿಸಿದರು.

ಇಂತಹ ಬೆಳವಣಿಗೆಗಳ ಬಗ್ಗೆ ಕೇಳಿದಾಗ, ಇದೆಲ್ಲಾ ಆಗುತ್ತಿರಬೇಕು. ಮಳೆ, ಗುಡುಗು, ಸಿಡಿಲು, ಸೂರ್ಯ ಮುಳುಗುವುದು, ಹುಟ್ಟುವುದು ಸಹಜ ಎಂದು ಹೇಳಿದರು.

ರಾಮಲಿಂಗಾರೆಡ್ಡಿ ಅವರು ಖಾತೆ ಬದಲಾವಣೆಗೆ ಒಪ್ಪಿಕೊಂಡಿದ್ದಾರೆಯೇ ಎಂಬ ಪ್ರಶ್ನೆಗೆ ಅವರು ಪಕ್ಷ ಬಿಟ್ಟು ಹೋಗುತ್ತಾರೆಯೇ? ಹಾಗೆಂದು ನಿಮಗೆ ಹೇಳಿದ್ದಾರೆಯೇ? ಅವರು ತಮ್ಮ ನೋವನ್ನು ಹೇಳಿಕೊಂಡಿದ್ದಾರೆ. ಒಂದಷ್ಟು ತಪ್ಪು ಸಂವಹನ ಆಗಿದೆ. ಸರಿಪಡಿಸುತ್ತೇವೆ ಎಂದು ಹೇಳಿದರು.

# ನೀಟ್ ಹಗರಣ: ಬೀದಿಗಿಳಿದ ‘ಕಾಕ್ರೋಚ್’

## ದೆಹಲಿಯಲ್ಲಿ ಯುವಜನರು, ವಿದ್ಯಾರ್ಥಿಗಳ ಬೃಹತ್ ಪ್ರತಿಭಟನೆ




**ನವದೆಹಲಿ:** ನೀಟ್ ಪರೀಕ್ಷೆ ಪ್ರಶ್ನೆಪತ್ರಿಕೆ ಸೋರಿಕೆ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ ಅಕ್ರಮಗಳ ವಿರುದ್ಧ ವಿದ್ಯಾರ್ಥಿಗಳ ಆಕ್ರೋಶ ದೇಶದ ಎಲ್ಲೆಡೆ ಭುಗಿಲೆದ್ದಿದೆ.

ಕಾಕ್ರೋಚ್ ಜನತಾ ಪಾರ್ಟಿ ಪ್ರತಿಭಟನಾ ಕರೆಗೆ ಶಾಲಾ–ಕಾಲೇಜು ವಿದ್ಯಾರ್ಥಿಗಳು, ಯುವಕರು ಮತ್ತು ಪೋಷಕರು ಸೇರಿದಂತೆ ಸಾವಿರಾರು ಮಂದಿ ಬೆಂಬಲ ವ್ಯಕ್ತಪಡಿಸಿ ದೆಹಲಿಯ ಜಂತರ್ ಮಂತರ್‌ನಲ್ಲಿ ಧರಣಿ ನಡೆಸಿದರು.

ಕಾಕ್ರೋಚ್ ಜನತಾ ಪಾರ್ಟಿ ಸಂಘಟನೆ ಬೆಂಬಲಿಗರು ಜಿರಳೆ ಮುಖವಾಡ ಧರಿಸಿ, ಕೈಯಲ್ಲಿ ಹೂವು, ಪುಸ್ತಕಗಳು ಹಾಗೂ ತ್ರಿವರ್ಣ ಧ್ವಜ ಹಿಡಿದು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ವಿದ್ಯಾರ್ಥಿಗಳು ತಮ್ಮ ಪೋಷಕರೊಂದಿಗೆ ಆಗಮಿಸಿದ್ದರು. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಸಂಘಟನೆ ಸಂಸ್ಥಾಪಕ ಅಭಿಜೀತ್ ದಿಪ್ಕೆ ಪ್ರತಿಭಟನೆಯನ್ನು ಶಾಂತಿಯುತವಾಗಿ ನಡೆಸುವಂತೆ ಕರೆ ನೀಡಿದ್ದರು. ಪೊಲೀಸರಿಗೆ ಹೂ ನೀಡಿ ಗೌರವ ಸೂಚಿಸಬೇಕು. ಪ್ರೀತಿ ಮತ್ತು ಶಾಂತಿ ಮಾರ್ಗದಲ್ಲಿ ಹೋರಾಟ ನಡೆಸಬೇಕು ಎಂದು ಸಾಮಾಜಿಕ ಜಾಲತಾಣದ ಮೂಲಕ ಮನವಿ ಮಾಡಿದ್ದರು.

ದೆಹಲಿ ಪೊಲೀಸರು ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಲು ಅನುಮತಿ ನೀಡಿದ ಹಿನ್ನೆಲೆಯಲ್ಲಿ ಪ್ರತಿಭಟನಾಕಾರರು ನೇರವಾಗಿ ಅಲ್ಲಿಗೆ ತೆರಳಿದರು. ಕಾಕ್ರೋಚ್‌ಗಳು ಬರುತ್ತಿವೆ, ಧರ್ಮೇಂದ್ರ ಪ್ರಧಾನ ಹೊರಟು ಹೋಗುತ್ತಿದ್ದಾರೆ ಎಂಬ ಘೋಷಣೆಗಳನ್ನು ಕೂಗಲಾಯಿತು. ಕೇಂದ್ರ ಶಿಕ್ಷಣ ಸಚಿವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಪುಟ 2ಕ್ಕೆ

# ಹೆಚ್ಚುವರಿ ಖಾತೆ ನೀಡುವ ವಿಚಾರ ಗೊತ್ತಿಲ್ಲ: ರೆಡ್ಡಿ



**ಬೆಂಗಳೂರು:** ನೀರಾವರಿ ಖಾತೆಯ ಜೊತೆಗೆ ಹೆಚ್ಚುವರಿ ಖಾತೆ ನೀಡುವ ಸಾಧ್ಯತೆ ಇದೆ ಎಂಬ ವರದಿಗಳ ಕುರಿತು ಪ್ರತಿಕ್ರಿಯಿಸಲು ರಾಮಲಿಂಗಾರೆಡ್ಡಿ ನಿರಾಕರಿಸಿದರು. ಆ ವಿಷಯದ ಬಗ್ಗೆ ನಾನು ಮಾತನಾಡಲು ಇಷ್ಟಪಡುವುದಿಲ್ಲ ಎಂದು ಪುನಃ ಪುನಃ ಕೇಳಿದ ಪ್ರಶ್ನೆಗೆ ಉತ್ತರಿಸಿದರು.

ಅಂತೆಯೇ ತಮಗೆ ಯಾವುದೇ ಪರ್ಯಾಯ ಪ್ರಸ್ತಾವನೆ ನೀಡಲಾಗಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ತಮ್ಮ ಅಭಿಪ್ರಾಯವನ್ನು ಈಗಾಗಲೇ ಪಕ್ಷದ ನಾಯಕತ್ವಕ್ಕೆ ತಿಳಿಸಿರುವುದಾಗಿ ಹೇಳಿದರು.

ನಿನ್ನೆ ನಡೆದ ಮಾತುಕತೆಯಲ್ಲಿ ನನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸಿದ್ದೇನೆ. ನಾನು ಯಾವುದೇ ಹುದ್ದೆ ಅಥವಾ ಖಾತೆಗಾಗಿ ಕೇಳಿಕೊಂಡಿಲ್ಲ. ಅವರೇ ನನಗೆ ಆಫರ್ ಮಾಡಿದ್ದರು. ನಂತರ ಅನಿವಾರ್ಯ ಕಾರಣಗಳಿಂದ ಪರಿಸ್ಥಿತಿ ಬದಲಾಯಿತು ಎಂದು ಹೇಳಿದರು.

ಇಬ್ಬರೂ ನಾಯಕರು ತಮ್ಮ ರಾಜೀನಾಮೆಯನ್ನು ಮುಂದುವರಿಸದಂತೆ ಮನವಿ ಮಾಡಿದ್ದಾರೆ. ಇಬ್ಬರೂ ನನ್ನ ರಾಜೀನಾಮೆಯನ್ನು ಅಂಗೀಕರಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ಪುಟ 2ಕ್ಕೆ

### ಖಾತೆಗಾಗಿ ಲಾಬಿ ನಡೆಸಿಲ್ಲ

**ನಾನು ಎಂದಿಗೂ ಸಚಿವ ಸ್ಥಾನ ಅಥವಾ ನಿರ್ದಿಷ್ಟ ಖಾತೆಗಾಗಿ ಲಾಬಿ ನಡೆಸಿಲ್ಲ ಎಂದು ಪುನರುಚ್ಚರಿಸಿದ ಅವರು, ಈಗ ಮಾತ್ರವಲ್ಲ 1993ರಲ್ಲಿ ಮೊದಲ ಬಾರಿಗೆ ಸಚಿವನಾದಾಗಲೂ ನಾನು ಯಾವುದೇ ಮುಖ್ಯಮಂತ್ರಿ ಯನ್ನು ಸಂಪರ್ಕಿಸಿ ಖಾತೆ ಕೇಳಿಕೊಂಡಿರಲಿಲ್ಲ ಎಂದರು. ಮುಖ್ಯಮಂತ್ರಿ ಹಾಗೂ ಸುರ್ಜೇವಾಲಾ ನಡುವಿನ ಮಾತುಕತೆಯಿಂದ ಸಕಾರಾತ್ಮಕ ಫಲಿತಾಂಶ ನಿರೀಕ್ಷಿಸು ತ್ತೀರಾ ಎಂಬ ಪ್ರಶ್ನೆಗೆ, ಗೊತ್ತಿಲ್ಲ. ನಂತರ ಕರೆ ಮಾಡಿ ವಿಚಾರಿಸುತ್ತೇನೆ ಎಂದು ಉತ್ತರಿಸಿದರು.**

## ಟಿವಿಕೆ ಸೇರಿದ ಎಐಎಡಿಎಂಕೆಯ ನಾಲ್ವರು ಮಾಜಿ ಸಚಿವರು

**ಚೆನ್ನೈ:** ಆಂತರಿಕ ಬಿಕ್ಕಟ್ಟು ಎದುರಿಸುತ್ತಿರುವ ಎಐಎಡಿಎಂಕೆ ಪಕ್ಷಕ್ಕೆ ಮತ್ತೊಂದು ಹಿನ್ನಡೆಯಾಗಿದೆ. ಪಕ್ಷದ ನಾಲ್ವರು ಮಾಜಿ ಸಚಿವರು ಶನಿವಾರ ಆಡಳಿತಾರೂಢ ತಮಿಳಿಗ ವೆಟ್ರಿ ಕಳಗಂ (ಟಿವಿಕೆ) ಪಕ್ಷಕ್ಕೆ ಸೇರ್ಪಡೆ ಆಗಿದ್ದಾರೆ.

ಎಐಎಡಿಎಂಕೆ ಮುಖಂಡರಾದ ಉಡುಮಲೈ ಕೆ.ರಾಧಾಕೃಷ್ಣನ್, ಎಂ.ಸಿ. ಸಂಪತ್, ಕಡಂಬೂರ್ ಸಿ.ರಾಜು ಮತ್ತು ಎನ್. ಆರ್.ಶಿವಪತಿ ಟಿವಿಕೆ ಸೇರಿದ್ದಾರೆ. ಉಡುಮಲೈ ರಾಧಾಕೃಷ್ಣನ್ ಅವರು ಉಡುಮಲಪೇಟೆ ಕ್ಷೇತ್ರದಲ್ಲಿ ಸ್ಪರ್ಧಿಸಿ ಸೋತಿದ್ದರು. ಸಂಪತ್ ಕಡಲೂರು ವಿಧಾನಸಭಾ ಕ್ಷೇತ್ರದಲ್ಲಿ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟಿದ್ದರು. ಕಡಂಬೂರ್ ರಾಜು ಕೂಡ ಕೋವಿಲ್ಪಟ್ಟಿ ಕ್ಷೇತ್ರದಲ್ಲಿ ಸೋಲನುಭವಿಸಿದ್ದರು. ಕೆ.ಎ.ಸೆಂಗೊಟ್ಟೈಯನ್ ಎಐಎಡಿಎಂಕೆ ತೊರೆದು ಟಿವಿಕೆ ಸೇರಿದ ಮೊದಲ ಪ್ರಮುಖ ನಾಯಕ. ಚುನಾವಣೆಗೂ ಮುನ್ನವೇ ವಿಜಯ್ ಬೆನ್ನಿಗೆ ನಿಂತಿದ್ದರು.

# ಮೋದಿಯನ್ನು ಸಿಎಂ ಮಾಡಿದ್ದು ಯಾರು?

## ಪಂಚಾಯಿತಿ ಚುನಾವಣೆಗೂ ಸ್ಪರ್ಧಿಸಿರಲಿಲ್ಲ: ಬಿ.ಕೆ.ಹರಿಪ್ರಸಾದ್



**ಬೆಂಗಳೂರು:** ಕನಿಷ್ಠ ಪಂಚಾಯಿತಿ ಚುನಾವಣೆಯಲ್ಲೂ ಸ್ಪರ್ಧಿಸದೇ ಇದ್ದ ನರೇಂದ್ರ ಮೋದಿ ಅವರನ್ನು ಗುಜರಾತ್‌ನಲ್ಲಿ ಮುಖ್ಯಮಂತ್ರಿ ಮಾಡಿದವರು ಯಾರು ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಪ್ರಶ್ನಿಸಿದ್ದಾರೆ.

ಕಾಂಗ್ರೆಸ್ ಪಕ್ಷದಲ್ಲಿ ಪೇಮೆಂಟ್ ಕೊಟ್ಟು ಅಧ್ಯಕ್ಷರಾಗುವುದು ರೂಢಿ ಇಲ್ಲ. ಕೊಲೆ ಕೇಸ್‌ನಲ್ಲಿ ಗಡೀಪಾರಾದವರು, ಪೋಕ್ಸೋ ಆರೋಪಿಗಳು, ಕ್ರಿಮಿನಲ್‌ಗಳು ಹಾಗೂ ಜೈಲುವಾಸಿಗಳನ್ನು ಅಧ್ಯಕ್ಷರನ್ನಾಗಿ ಮಾಡುವ ಕೆಟ್ಟ ಪರಂಪರೆಯೂ ನಮ್ಮಲ್ಲಿ ಇಲ್ಲ ಎಂದು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿ ತಿರುಗೇಟು ನೀಡಿದ್ದಾರೆ.

ಮೋದಿ ಯಾವ ಜನರಿಂದ ಆಯ್ಕೆಯಾಗಿ ಮುಖ್ಯಮಂತ್ರಿಯಾಗಿದ್ದರು ಎನ್ನುವ ಇತಿಹಾಸವಾದರೂ ಬಿಜೆಪಿಗೆ ನೆನಪಿದೆಯೇ? ಯಾವ ಚುನಾವಣೆಯನ್ನೂ ನಡೆಸದೇ, ಕನಿಷ್ಠ ಪಕ್ಷ ಆರ್‌ಎಸ್‌ಎಸ್ ಸಂಘಪರಿವಾರದಲ್ಲೇ ಚುನಾವಣೆ ಎದುರಿಸದ ಮೋಹನ್ ಭಾಗವತ್ ಅವರನ್ನು ಯಾವ ಜನರು

ಪುಟ 2ಕ್ಕೆ

## ಸಂವಹನ ಕೊರತೆಯಿಂದ ತಪ್ಪು ತಿಳುವಳಿಕೆ: ಬಿ.ಕೆ. ಹರಿಪ್ರಸಾದ್

**ಬೆಂಗಳೂರು:** ರಾಮಲಿಂಗಾರೆಡ್ಡಿ ಅವರ ವಿಷಯದಲ್ಲಿ ಗಂಭೀರವಾದ ಸಮಸ್ಯೆ ಏನೂ ಇಲ್ಲ. ಸಂವಹನ ಕೊರತೆಯಿಂದ ತಪ್ಪು ತಿಳುವಳಿಕೆ ಆಗಿದೆ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಹೇಳಿದರು.

ಶಾಸಕರ ಭವನದಲ್ಲಿ ಶನಿವಾರ ರಾಮಲಿಂಗಾರೆಡ್ಡಿ ತಮ್ಮನ್ನು ಭೇಟಿ ಮಾಡಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಹರಿಪ್ರಸಾದ್, ರಾಮಲಿಂಗಾ ರೆಡ್ಡಿಯವರು ಬೆಂಗಳೂರು ನಗರದ ಆಧಾರಸ್ತಂಭವಾಗಿ ಅಜಾತಶತ್ರು ಎನಿಸಿಕೊಂಡಿದ್ದಾರೆ. ಅವರ ಜೊತೆ ನಾನು ಮತ್ತು ಮುಖ್ಯಮಂತ್ರಿ ಇಬ್ಬರೂ ಮಾತನಾಡಿದ್ದೇವೆ ಎಂದರು.

ಅವರ ರಾಜೀನಾಮೆ ಅಂಗೀಕಾರ ಆಗುವುದಿಲ್ಲ. ಅವರು ರಾಜೀನಾಮೆ ವಾಪಸ್ ಪಡೆದುಕೊಳ್ಳುತ್ತಾರೆಂಬ ವಿಶ್ವಾಸ ಇದೆ. ರಾಮಲಿಂಗಾರೆಡ್ಡಿ ಎಂದೂ ಪಕ್ಷಕ್ಕೆ ಹಾನಿ ಆಗುವಂತಹ ಕೆಲಸ ಮಾಡುವುದಿಲ್ಲ. ಜಿಬಿಎ ನಗರಪಾಲಿಕೆಗಳ ಚುನಾವಣೆಗೆ ಪಕ್ಷವನ್ನು ಅವರು ಬಲಪಡಿಸುತ್ತಾರೆಂಬ ನಂಬಿಕೆ ಇದೆ. ಅವರು ಕಳಂಕರಹಿತ ರಾಜಕಾರಣ ಎಂದೂ ಹರಿಪ್ರಸಾದ್ ಬಣ್ಣಿಸಿದರು.

## ಎಚ್ಚೆನ್ ನ್ಯಾಷನಲ್ ಕಾಲೇಜು ಕನ್ನಡದ ಪ್ರೀತಿ ಕಲಿಸಿತು



**ಬೆಂಗಳೂರು:** ‘ನನಗೆ ಕನ್ನಡದ ಪ್ರೀತಿ ಬೆಳೆಸಿದ್ದೇ ಎಚ್ಚೆನ್ ನ್ಯಾಷನಲ್ ಕಾಲೇಜು. ಅಲ್ಲಿಯ ಕನ್ನಡದ ವಾತಾವರಣ ನನಗೆ ಪ್ರೇರಣೆ ನೀಡಿತು.’ ಇದು ಹಿರಿಯ ಪತ್ರಕರ್ತ ಉದಯಕುಮಾರ್ ಮನದಮಾತು. ಖಾದ್ರಿಶಾಮಣ್ಣ ಪತ್ರಿಕೋದ್ಯಮ ಪ್ರಶಸ್ತಿಗೆ ಆಯ್ಕೆಯಾದ ಸಂದರ್ಭದಲ್ಲಿ ’ವರ್ತಮಾನ’ದೊಂದಿಗೆ ಮನಬಿಚ್ಚಿ ಮಾತನಾಡಿದ ಅವರು ಒಟ್ಟಾರೆ ಹೇಳಿದ್ದಿಷ್ಟು.


ಆಂಧ್ರಪ್ರದೇಶದ ಗಡಿಗೆ ತಾಗಿಕೊಂಡ ಪುಟ್ಟ ಹಳ್ಳಿ ಅಂಕಾಲಮಡುಗು. ಚಿಂತಾಮಣಿ ತಾಲ್ಲೂಕಿನ ಕಟ್ಟಕಡೆಯ ಗ್ರಾಮ. ಊರಿನ ಎಲ್ಲರ ಮನೆಮಾತು ತೆಲುಗು. ಆದರೆ, ಮಕ್ಕಳ ಶಾಲಾ ಕಲಿಕೆ ಮಾತ್ರ ಕನ್ನಡದಲ್ಲಿ. ಪರಿಸರ ಭಾಷೆ ತೆಲುಗು ಎಂಬ ಕಾರಣಕ್ಕೋ ಏನೊ ಕನ್ನಡ ಒಂದು ಬಗೆಯಲ್ಲಿ ಕಬ್ಬಿಣದ ಕಡಲೆ. ಕೃಷಿಯನ್ನೇ ಅಪ್ಪಿಕೊಂಡ ಗ್ರಾಮ. ಹೊಲ–ಗದ್ದೆ, ದನ–ಕರು, ಕುರಿ–ಮೇಕೆ ಜೊತೆ ಬೆಸೆದುಕೊಂಡ ಬದುಕು. ಶಾಲೆಯಲ್ಲಿದ್ದಾಗಷ್ಟೇ ಸ್ಲೇಟು–ಬಳಪ, ಪುಸ್ತಕ– ಪೆನ್ಸಿಲ್ ಸಹವಾಸ. ಊರಿನಲ್ಲಿ ಇದ್ದದ್ದು ಒಂದೇ ಸರ್ಕಾರಿ ಶಾಲೆ. ಆ ಶಾಲೆಗೆ ಇದ್ದದ್ದು ಒಬ್ಬರೇ ಮೇಷ್ಟು. ಹೋದ ಪುಟ್ಟ, ಬಂದ ಪುಟ್ಟ ಎಂಬ ನಾಣ್ಣುಡಿಯನ್ನು ಹೋಲುವಂಥ ಕಲಿಕೆ. ಅಂತಹ ಗಡಿಗ್ರಾಮದಲ್ಲಿ ಹುಟ್ಟಿ–ಬೆಳೆದ ಹುಡುಗ ಪ್ರಜಾವಾಣಿ ಅಂತಹ ಪತ್ರಿಕೆಯ ಸಂಪಾದಕೀಯ ಪುಟ ನಿರ್ವಹಣೆ ಜವಾಬ್ದಾರಿ ನಿಭಾಯಿಸಿದ್ದು ಎದೆಗೆ ಬಿದ್ದ ಅಕ್ಷರದ ಮಹಿಮೆಯಲ್ಲದೆ ಬೇರೇನೂ ಅಲ್ಲ!

ಪತ್ರಿಕೆಗಳಲ್ಲಿನ ಬರವಣಿಗೆಯನ್ನು ಅವಸರದ ಸಾಹಿತ್ಯ ಎಂದು ಕರೆಯುವುದುಂಟು. ಪತ್ರಕರ್ತರ ಬರಹಕ್ಕೆ ಬಲ ತುಂಬುವುದು ಭಾಷೆ. ದ್ವಿಭಾಷಾ ಪರಿಸರದಿಂದ ಒಡಮೂಡಿದ ಕನ್ನಡ– ತೆಲುಗು ಸಂಗಮವು ಸಾಹಿತ್ಯ, ಸಂಸ್ಕೃತಿ ಹಾಗೂ ಸಮಕಾಲೀನ ವಿದ್ಯಮಾನಗಳ ಗ್ರಹಿಕೆ ಮತ್ತು ಅರಿವಿನ ವಿಸ್ತರಣೆಗೆ ಬೇರೆ ಬೇರೆ ನೆಲೆಗಳಲ್ಲಿ ಆಸರೆಯಾಗಿ ಒದಗಿಬಂದಿತು. 1992 ರಲ್ಲಿ ವೃತ್ತಿ ಜೀವನ ಆರಂಭ. ಅದಕ್ಕೆ ಮುನ್ನ ಬೆಂಗಳೂರು ವಿಶ್ವವಿದ್ಯಾಲಯದ ಸಮಾಜ ಕಾರ್ಯ ವಿಭಾಗದಲ್ಲಿ ಸ್ನಾತಕೋತ್ತರ ಪದವಿ (ಎಂಎಸ್ ಡಬ್ಲ್ಯು) ಹಾಗೂ ಪತ್ರಿಕೋದ್ಯಮ ವಿಭಾಗದಲ್ಲಿ ಬಿ.ಎಸ್. ಕಮ್ಯೂನಿಕೇಷನ್ ಪದವಿ ಪೂರೈಕೆ.

ಪುಟ 2ಕ್ಕೆ

# ಕಾನೂನು ಉಲ್ಲಂಘಿಸಿದರೆ ಕಠಿಣ ಕ್ರಮ

## ಪೊಲೀಸ್ ಅಧಿಕಾರಿಗಳಿಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಸೂಚನೆ



**ಬೆಂಗಳೂರು:** ಕಾನೂನು ಉಲ್ಲಂಘಿಸುವವರ ವಿರುದ್ಧ ಯಾವುದೇ ಮುಲಾಜಿಲ್ಲದೆ ಕಠಿಣ ಕ್ರಮಕೈಗೊಳ್ಳಲಾಗುವುದು ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಎಚ್ಚರಿಕೆ ನೀಡಿದರು.

ಬೆಂಗಳೂರಿನ ಪೊಲೀಸ್ ಪ್ರಧಾನ ಕಚೇರಿಯಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾನೂನು ಮತ್ತು ಸುವ್ಯವಸ್ಥೆ, ಮಾದಕ ವಸ್ತುಗಳ ಹಾವಳಿ, ಮಹಿಳೆಯರ ಸುರಕ್ಷತೆ ಹಾಗೂ ಸಂಚಾರ ನಿರ್ವಹಣೆ ಸೇರಿದಂತೆ ಹಲವು ಮಹತ್ವದ ವಿಷಯಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದಿರುವುದಾಗಿ ತಿಳಿಸಿದರು.

ನಗರದಲ್ಲಿ ಕಾನೂನು ಸುವ್ಯವಸ್ಥೆ ಮತ್ತಷ್ಟು ಬಲಪಡಿಸಲು ಅಗತ್ಯ ಸಲಹೆಗಳು ಹಾಗೂ ನಿರ್ದೇಶನಗಳನ್ನು ಅಧಿಕಾರಿಗಳಿಗೆ ನೀಡಲಾಗಿದೆ. ಮಾದಕ ವಸ್ತುಗಳ ಜಾಲವನ್ನು ಮಟ್ಟಹಾಕುವುದು, ಮಹಿಳೆಯರ ಭದ್ರತೆಗೆ ಹೆಚ್ಚಿನ ಆದ್ಯತೆ ನೀಡುವುದು ಹಾಗೂ ಟ್ರಾಫಿಕ್ ಸಮಸ್ಯೆಗಳನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಹರಡುತ್ತಿರುವ ನಕಲಿ ಸುದ್ದಿಗಳು ಮತ್ತು ಪ್ರಚೋದನಕಾರಿ ವಿಷಯಗಳ ಬಗ್ಗೆ ಮಾಹಿತಿ ತಂತ್ರಜ್ಞಾನ (ಐಟಿ) ಇಲಾಖೆ ಹಾಗೂ ಪೊಲೀಸ್ ಇಲಾಖೆ ಜಂಟಿಯಾಗಿ ಪರಿಶೀಲನೆ ನಡೆಸುತ್ತಿವೆ. ದ್ವೇಷ, ಅಶಾಂತಿ ಮತ್ತು ಉದ್ವಿಗ್ನತೆಯನ್ನು ಸೃಷ್ಟಿಸುವ ಉದ್ದೇಶದಿಂದ ಸಾಮಾಜಿಕ ಜಾಲತಾಣಗಳನ್ನು ದುರುಪಯೋಗಪಡಿಸಿಕೊಳ್ಳುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ವಿವಿಐಪಿ ಸಂಚಾರದ ವೇಳೆ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ಕುರಿತೂ ಸಭೆಯಲ್ಲಿ ಚರ್ಚೆ ನಡೆದಿದೆ. ಜನರ ಸಂಚಾರಕ್ಕೆ ಉಂಟಾಗುವ ಅಡಚಣೆಗಳನ್ನು ಕಡಿಮೆ ಮಾಡುವ ಮಾರ್ಗಗಳ ಬಗ್ಗೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಹೇಳಿದರು. ಆದರೆ, ಈ ಸಂಬಂಧ ಹೊಸ ವ್ಯವಸ್ಥೆಗಳನ್ನು ಜಾರಿಗೆ ತರಲು ಸ್ವಲ್ಪ ಸಮಯ ಬೇಕಾಗಬಹುದು ಎಂದು ಸ್ಪಷ್ಟಪಡಿಸಿದರು.

ಸಾರ್ವಜನಿಕರ ಸುರಕ್ಷತೆ, ಕಾನೂನು ಸುವ್ಯವಸ್ಥೆ ಮತ್ತು ನಗರ ಸಂಚಾರ ವ್ಯವಸ್ಥೆ ಸುಧಾರಣೆಗೆ ಸರ್ಕಾರ ಹೆಚ್ಚಿನ ಒತ್ತು ನೀಡುತ್ತಿದೆ. ಎಲ್ಲ ಇಲಾಖೆಗಳ ಸಮನ್ವಯದೊಂದಿಗೆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಲಾಗುತ್ತಿದೆ ಎಂದು ಖರ್ಗೆ ತಿಳಿಸಿದರು.

## ಮೊದಲ ಪುಟದಿಂದ

### ಮೋದಿ ಸಿಎಂ ಮಾಡಿದ್ದು ಯಾರು?

ಆಯ್ಕೆ ಮಾಡಿದ್ದಾರೆ? 'ಜೀ'ಗಳನ್ನು ಚುನಾವಣಾ ಚಾಣಕ್ಯ ಎಂದು 'ಹುಜೂರ್' ಎನ್ನುವ ಬಿಜೆಪಿ ಕರ್ನಾಟಕದಲ್ಲಿ ಎಂದೂ ಸ್ವಂತ ಬಲದಲ್ಲಿ ಅಧಿಕಾರಕ್ಕೆ ಬಂದಿಲ್ಲ, ಬರುವುದೂ ಇಲ್ಲ ಎಂದು ವಾಗ್ದಾಳಿ ನಡೆಸಿದ್ದಾರೆ.

ಹೌದು ಆರ್ ಎಸ್ ಎಸ್ ಮತ್ತು ಬಿಜೆಪಿ ಪ್ರತಿಪಾದಿಸುವ ನಕಲಿ ಹಿಂದೂತ್ವವನ್ನು ವಿರೋಧಿಸುತ್ತಲೇ ಇದ್ದೇನೆ. ವಿರೋಧಿಸುತ್ತಲೇ ಇರುತ್ತೇನೆ. ನಕಲಿ ದೇಶಪ್ರೇಮಿಗಳ ಆಟ ಇನ್ನೂ ರಾಜ್ಯದಲ್ಲಿ ನಡೆಯಲ್ಲ ಎಂದು ಕಿಡಿಕಾರಿದ್ದಾರೆ.

ಬಿಜೆಪಿಯ ಪಾಕಿಸ್ತಾನ ಮೇಲಿನ ಪ್ರೀತಿಯಂತೂ ನಿನ್ನೆ ಮೊನ್ನೆಯದಲ್ಲ. ಅದಕ್ಕೆ ಬಹುದೊಡ್ಡ ಇತಿಹಾಸವೇ ಇದೆ. ದ್ವಿರಾಷ್ಟ್ರ ಸಿದ್ಧಾಂತ ಪ್ರತಿಪಾದಿಸಿದ ಸಾವರ್ಕರ್ ಇಂದ ಹಿಡಿದು ಇಂದಿನ ರಸಬಾಳೆ, ಹೊಸಬಾಳೆಯ 'ಪಾಕಿಸ್ತಾನದೊಂದಿಗೆ ಮಾತುಕತೆ ಬಾಗಿಲು ಮುಚ್ಚಬಾರದು' ಎನ್ನುವವರೆಗೂ ಮುಂದುವರೆಯುತ್ತಲೇ ಇದೆ ಎಂದು ಬಿ.ಕೆ.ಹರಿಪ್ರಸಾದ್ ವ್ಯಂಗ್ಯವಾಡಿದ್ದಾರೆ.

### ಹೈಕಮಾಂಡ್ ಸಫಲ: ಸುರ್ಜೇವಾಲ ಘೋಷಣೆ

ಅವರು ನಮ್ಮ ಜೊತೆ ಕೆಲಸ ನಿರಂ ತರವಾಗಿ ಮುಂದುವರಿಸಲಿದ್ದಾರೆ ಎಂದರು.

ರಾಮಲಿಂಗಾರೆಡ್ಡಿ ತಮ್ಮ ರಾಜೀನಾಮೆ ವಾಪಸ್ ಪಡೆದುಕೊಂಡಿದ್ದಾರೆ.

ನಮ್ಮ ಕ್ಯಾಬಿನೆಟ್‌ನಲ್ಲಿ ಮುಂದುವರಿಯುತ್ತಾರೆ. ಬಿಜೆಪಿ ಇದನ್ನ ಇಟ್ಟುಕೊಂಡು ಸಂಭ್ರಮ ಮಾಡಿದ್ದಾರೆ ಎಂದು ಗೊಂದಲದ ಬಗ್ಗೆ ಸ್ಪಷ್ಟೀಕರಣ ನೀಡಿದರು.

### ಸಮಸ್ಯೆ ಬಗೆಹರಿದಿದೆ: ಡಿಕೆಶಿ

ಬದಲಾವಣೆಯಾಗಿದೆ ಎಂಬ ಪ್ರಧಾನಿ ನರೇಂದ್ರ ಮೋದಿ ಅವರ ಹೇಳಿಕೆ ಬಗ್ಗೆ ಕೇಳಿದಾಗ, ಮೋದಿಯವರು ನನಗೆ ಶುಭ ಕೋರಿದ್ದಾರೆ. ಅವರಿಗೆ ನಾನು ಧನ್ಯವಾದ ಅರ್ಪಿಸುತ್ತೇನೆ. ನಾನು ಗೌರವಯುತವಾಗಿ ಹೋಗಿ ಅವರನ್ನು ಭೇಟಿ ಮಾಡುವೆ. ಅವರು ರಾಜಕಾರಣ ಮಾಡುವುದು ಬೇಡ. ನಾವು ರಾಜಕಾರಣ ಮಾಡುವುದು ಬೇಡ. ರಾಜ್ಯದ ಜನತೆಯ ಹಿತಕ್ಕಾಗಿ ನಾವು ಎಲ್ಲರೂ ಸೇರಿ ಏನು ಕೆಲಸ ಮಾಡಬೇಕೊ ಅದನ್ನು ಮಾಡೋಣ ಎಂದು ಡಿಕೆಶಿ ಹೇಳಿದರು.

### ನೀಟ್ ಹಗರಣ: ಬೀದಿಗಿಳಿದ 'ಕಾಕ್ರೋಚ್ಸ್'

ಪ್ರತಿಭಟನೆಯ ಹಿನ್ನೆಲೆ ದೆಹಲಿ ನಗರಾದ್ಯಂತ ಭದ್ರತೆ ಬಿಗಿಗೊಳಿಸಲಾಗಿದೆ. ಹೆಚ್ಚುವರಿ ಪೊಲೀಸ್ ಮತ್ತು ಅರೆಸೈನಿಕ ಪಡೆಗಳನ್ನು ನಿಯೋಜಿಸಲಾಗಿದೆ.

### ಹೆಚ್ಚುವರಿ ಖಾತೆ ನೀಡುವ ವಿಚಾರ ಗೊತ್ತಿಲ್ಲ: ರೆಡ್ಡಿ

ನನ್ನ ಅಭಿಪ್ರಾಯವನ್ನು ಅವರಿಗೆ ತಿಳಿಸಿ ನಾನು ಹಿಂದಿರುಗಿದ್ದೇನೆ ಎಂದರು.

ಸಿದ್ದರಾಮಯ್ಯ ಹಾಗೂ ಮುಖ್ಯಮಂತ್ರಿ ಈಗಾಗಲೇ ಭೇಟಿಯಾಗಿದ್ದಾರೆ. ನಿನ್ನೆ ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಿದ ವಿಷಯಗಳನ್ನೆಲ್ಲ ಅವರಿಗೆ ತಿಳಿಸಲಾಗುತ್ತದೆ. ನಂತರ ಅವರು ನಿರ್ಧಾರ ಕೈಗೊಳ್ಳುತ್ತಾರೆ ಎಂದರು.

ಈ ಬೆಳವಣಿಗೆಗಳಿಂದ ತಾಳ್ಮೆ ಕಳೆದುಕೊಂಡಿದ್ದೀರಾ ಎಂಬ ಪ್ರಶ್ನೆಗೆ, ಈಗಲೂ ನಾನು ತಾಳ್ಮೆ ಕಳೆದುಕೊಂಡಿಲ್ಲ. ತಾಳ್ಮೆ ಕಳೆದುಕೊಂಡಿದ್ದರೆ ನಿಮ್ಮೊಂದಿಗೆ ಇಷ್ಟು ಶಾಂತವಾಗಿ ಮಾತನಾಡುತ್ತಿದ್ದೇನಾ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಶಿವಕುಮಾರ್ ಅವರೊಂದಿಗೆ ನಿನ್ನೆ ರಾತ್ರಿ ಹೋಟೆಲ್‌ನಲ್ಲಿ ಸುದೀರ್ಘವಾಗಿ ಚರ್ಚೆ ನಡೆಸಿದ್ದೇನೆ. ಡಿ.ಕೆ.ಶಿವಕುಮಾರ್ ಅವರು ನನ್ನ ಮನೆಗೆ ಬರುತ್ತೇನೆ ಎಂದಿದ್ದರು. ಆದರೆ ನಾನು ಮನೆಯಲ್ಲಿರಲಿಲ್ಲ. ನಂತರ ನಾವು ನಿನ್ನೆ ರಾತ್ರಿ ಹೋಟೆಲ್‌ನಲ್ಲಿ ಭೇಟಿಯಾಗಿ ಎಲ್ಲ ವಿಷಯಗಳ ಬಗ್ಗೆ ಚರ್ಚೆ ಮಾಡಿದೆವು. ಇಂದು ಕೂಡ ನಿನ್ನೆ ಚರ್ಚಿಸಿದ ವಿಷಯಗಳ ಬಗ್ಗೆ ಸುರ್ಜೇವಾಲಾ ಅವರೊಂದಿಗೆ ಮಾತನಾಡಿದ್ದೇನೆ ಎಂದು ರೆಡ್ಡಿ ಹೇಳಿದರು.

### ವಿಧಾನ ಪರಿಷತ್‌ಗೆ ಐವರು ನಾಮಪತ್ರ ಸಲ್ಲಿಕೆ

ಕಾಂಗ್ರೆಸ್ ಕಾರ್ಯಕರ್ತರಿಗೆ ಅವಕಾಶ ನೀಡಲಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

## ಸಾರಿಗೆ ಇಲಾಖೆ ನಡೆ ಖಂಡಿಸಿ ರೈತರ ಪ್ರತಿಭಟನೆ



ಮೈಸೂರು: ಅಪಘಾತದಿಂದ ಕೈ ಕಳೆದುಕೊಂಡಿರುವ ಬಾಲಕನಿಗೆ, ಸೂಕ್ತ ಪರಿಹಾರ ನೀಡುವಂತೆ ಒತ್ತಾಯಿಸಿ ಸಾಮೂಹಿಕ ನಾಯಕತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯಿಂದ ಮೈಸೂರು ಸಾರಿಗೆ ವಿಭಾಗೀಯ ಸಾರಿಗೆ ಕಚೇರಿ ಬಳಿ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಜೂ.4ರಂದು ನಂಜನಗೂಡು ತಾಲೂಕಿನ ಹಲ್ಲಹಳ್ಳಿ ಬಸ್ ನಿಲ್ದಾಣದಲ್ಲಿ ಚಾಲಕನ ನಿರ್ಲಕ್ಷ್ಯದಿಂದ ತರಗನಹಳ್ಳಿ ಗ್ರಾಮದ ಬಾಲಕನ ಮೇಲೆ ಬಸ್ ಚಕ್ರ ಹರಿದು ಕೈ ತುಂಡಾಗಿದ್ದು, ಈ ಕೂಡಲೇ ಚಾಲಕ ಮತ್ತು ಹಲ್ಲಹಳ್ಳಿ ಡಿಪೋ ಮ್ಯಾನೇಜರ್ ಅಮಾನತಿಗೆ ಆಗ್ರಹಿಸಿದ ಪ್ರತಿಭಟನಕಾರರು ಚಿಕಿತ್ಸೆಯ ವೆಚ್ಚ ಭರಿಸಲು ಇಲಾಖೆ ಮುಂದಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಾಲಕ ತಂದೆ ಮಾತನಾಡಿ, ನನ್ನ ಮಗನ ಭವಿಷ್ಯ ಸಂಪೂರ್ಣ ಹಾಳಾಯಿತು. ಜೀವನ ಪೂರ್ತಿ ನನ್ನ ಮಗನಿಗೆ ಕೈ ಬರುವುದಿಲ್ಲ. ಎರಡು ದಿನಕ್ಕೆ ಮಗನ ಚಿಕಿತ್ಸೆ ವೆಚ್ಚ ಎರಡೂವರೆ ಲಕ್ಷವಾಗಿದೆ. ನನಗೆ ದುಡ್ಡು ಎಷ್ಟಾದರು ಖರ್ಚಾಗಲಿ. ನನ್ನ ಮಗ ಮೊದಲಿನಂತೆ ಆಗುತ್ತಾನ?. ಘಟನೆ ನಡೆದು ದಿನ ಕಳೆದರು ಕೆಎಸ್‌ಆರ್‌ಟಿಸಿ ಯಾವೊಬ್ಬ ಅಧಿಕಾರಿ ನಮ್ಮನ್ನು ಸಂಪರ್ಕ ಮಾಡಿಲ್ಲ ಎಂದರು.

ನಾವು ಕೂಲಿ ಮಾಡಿಕೊಂಡು ಜೀವನ ನಡೆಸುತ್ತಿರುವ ಜನರು. ನನ್ನ ಮಗನಿಗೆ ಆದ ರೀತಿಯಲ್ಲಿ ಮತ್ತೊಬ್ಬರ ಮಕ್ಕಳಿಗೆ ಆಗಬಾರದು. ಕೆಎಸ್‌ಆರ್‌ಟಿಸಿ ಚಾಲಕರು ನಿರ್ಲಕ್ಷ್ಯವೇ ಘಟನೆ ಕಾರಣ. ಇನ್ನೂ ಮುಂದೆ ಇಂತಹ ಘಟನೆಗಳು ನಡೆಯದಂತೆ ಕ್ರಮ ವಹಿಸಬೇಕು. ನನ್ನ ಮಗ ಭವಿಷ್ಯಕ್ಕೆ ಇಲಾಖೆ ನೆರವಾಗಬೇಕು ಎಂದು ಮನವಿ ಮಾಡಿದರು. ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಮಂಜು ಕಿರಣ್ ಮಾತನಾಡಿ, ಮಗುವಿನ ಕೈ ಸಂಪೂರ್ಣ ಕತ್ತರಿಸಿ ಹೋಗಿದೆ. ಈ ಘಟನೆಗೆ ಯಾರು ಹೊಣೆ. ನಮ್ಮ ಸಂಘಟನೆ ತುರ್ತಾಗಿ ಮುತ್ತಿಗೆ ಕರೆ ಕೊಟ್ಟ ನಂತರ ಕೆಎಸ್ ಆರ್‌ಟಿಸಿ ಇಲಾಖೆ ಎಚ್ಚರವಾಗಿದೆ. ಘಟನೆ ನಡೆದು 48ಗಂಟೆ ಕಳೆದರು ಯಾರೊಬ್ಬರು ಮಗುವಿನ ಆರೋಗ್ಯ ವಿಚಾರಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕೆಎಸ್‌ಆರ್‌ಟಿಸಿ ಇಲಾಖೆ ಅಧಿಕಾರಿಗಳು ಕ್ಷಮೆ ಕೇಳುತ್ತೇನೆ ಎಂದು ಹೇಳಿದ್ದಾರೆ. ಇವರು ಕ್ಷಮೆ ಕೇಳಿದ ತಕ್ಷಣ ಬಾಲಕನಿಗೆ ಕೈ ಬರುತ್ತದೆಯೇ?. ಡಿಪೋ ಮ್ಯಾನೇಜರ್ ಮತ್ತು ವಾಹನ ಚಾಲಕ ಕೂಡಲೇ ಅಮಾನತ್ತು ಆಗಬೇಕು. ಸಂಪೂರ್ಣ ಚಿಕಿತ್ಸೆ ವೆಚ್ಚವನ್ನು ಇಲಾಖೆ ಭರಿಸಬೇಕು. ಮಗುವಿನ ಮುಂದಿನ ಕುರಿತು ಇಲಾಖೆಯೇ ತೀರ್ಮಾನಿಸಬೇಕು ಎಂದು ಹೇಳಿದರು. ನಗರದ ಖಾಸಗಿ ಆಸ್ಪತ್ರೆಯಲ್ಲಿ ಬಾಲಕನ ಚಿಕಿತ್ಸೆ ಪಡೆಯುತ್ತಿದ್ದು, ಬಾಲಕ ಚಿಕಿತ್ಸಾ ವೆಚ್ಚ ಮತ್ತು ಸೂಕ್ತ ಪರಿಹಾರ ನೀಡಬೇಕು ಪಟ್ಟು ಹಿಡಿದರು. ನಗರ ಸಾರಿಗೆ ವಿಭಾಗದ ನಿಯಂತ್ರಣಾಧಿಕಾರಿ ಜಗದೀಶ್ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, ಬಾಲಕ ಚಿಕಿತ್ಸೆ ವೆಚ್ಚ ಭರಿಸುವ ಭರವಸೆ ನೀಡಿದರು. ಬಸ್ ಚಾಲಕನ ಹಾಗೂ ಡಿಪೋ ವ್ಯವಸ್ಥಾಪಕರನ್ನು ಅಮಾನತು ಮಾಡುವುದಾಗಿ, ಪರಿಹಾರ ಕೊಡಿಸುವುದಾಗಿ ಹೇಳಿದರು. ಹೋರಾಟದಲ್ಲಿ ಶಿರಮಳ್ಳಿ ಮಂಜುನಾಥ್ , ತರಗನಹಳ್ಳಿ ನಟರಾಜು ಬಸವರಾಜು, ಸಿದ್ದಲಿಂಗಪುರ ಮೋಹನ್ ಕುಮಾರ್ , ಗಳಿಗರಹುಂಡಿ ವೆಂಕಟೇಶ್ ಅನೇಕರು ಹಾಜರಿದ್ದರು.

# ಮೂವರು ಶಾಸಕರಿಗೆ ಸಿಎಂ ಆಹ್ವಾನ

## ಶಾಸಕ ಇಕ್ಬಾಲ್ ಹುಸೇನ್ ಹೇಳಿಕೆ । ಕ್ಷೇತ್ರಗಳ ಅಭಿವೃದ್ಧಿ ವಿಚಾರದಲ್ಲಿ ಶಾಸಕರೊಂದಿಗೆ ಚರ್ಚೆ



ರಾಮನಗರ: ಜಿಲ್ಲೆಯ ರಾಮನಗರ, ಚನ್ನಪಟ್ಟಣ, ಮಾಗಡಿ ಕ್ಷೇತ್ರಗಳ ಅಭಿವೃದ್ಧಿ ಕುರಿತು ಚರ್ಚಿಸಲು ಸಿಎಂ ಡಿ.ಕೆ.ಶಿವಕುಮಾರ್ ಅವರು ಮುಂದಿನ ವಾರ ಆಹ್ವಾನಿಸಿದ್ದಾರೆ ಎಂದು ರಾಮನಗರ ಶಾಸಕ ಇಕ್ಬಾಲ್ ಹುಸೇನ್ ತಿಳಿಸಿದರು.

ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆ (ಸಿಎಂಐಡಿಪಿ) ಅಡಿ ನಗರಸಭೆಯ 31 ನೇ ವಾರ್ಡಿನಲ್ಲಿ 2 ಕೋಟಿ ರೂ ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದ ನಂತರ ಅವರು ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು. ಕ್ಷೇತ್ರಗಳಲ್ಲಿ ಆಗಬೇಕಾಗಿರುವ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಅವರು ವಿವರಗಳನ್ನು ಪಡೆಯುವ ಸಾಧ್ಯತೆ ಇದೆ. ಅಗತ್ಯವಿರುವ ಅನುದಾನವನ್ನು ಬಿಡುಗಡೆ ಮಾಡುವ ವಿಶ್ವಾಸವಿದೆ ಎಂದರು.

ಜಿಲ್ಲಾ ಕೇಂದ್ರ ರಾಮನಗರದಲ್ಲಿ ಶೇಕಡ 30ರಷ್ಟು ಭಾಗದಲ್ಲಿ ಮಾತ್ರ ಯುಜಿಡಿ ವ್ಯವಸ್ಥೆ ಇದ್ದು, ಶೇ 70ರಷ್ಟು ವ್ಯವಸ್ಥೆಗಾಗಿ ಹೈದರಾಬಾದ್‌ನ ತಂಡ ನಗರದಲ್ಲಿ ಯುಜಿಡಿ ವ್ಯವಸ್ಥೆ ಪರಿಶೀಲಿಸಿ 300 ಕೋಟಿ ರೂ ಪ್ರಸ್ತಾವನೆ ಸಿದ್ಧಪಡಿಸಿದೆ. ಜೊತೆಗೆ ರಸ್ತೆ, ಚರಂಡಿ, ಪಾರ್ಕ್ ಗಳ ನಿರ್ಮಾಣ, ಹೈಟೆಕ್ ಶಾಲೆ ನಿರ್ಮಾಣಕ್ಕೆ ಒತ್ತು ನೀಡುತ್ತೇವೆ ಎಂದು ಇಕ್ಬಾಲ್ ಹುಸೇನ್ ತಿಳಿಸಿದರು.

**ಸಿಎಂಐಡಿಪಿ ಅಡಿ 50 ಕೋಟಿ ಅನುದಾನ**

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಿಎಂ ಮೂಲಸೌಕರ್ಯ ಅಭಿವೃದ್ಧಿ ಯೋಜನೆ (ಸಿಎಂ ಐಡಿಪಿ) ಅಡಿ 50 ಕೋಟಿ ರೂ ಅನುದಾನದ ಬಿಡುಗಡೆ ಮಾಡಿದ್ದರು. ಈ ಪೈಕಿ 12.50 ಕೋಟಿ ರೂಗಳನ್ನು ಜಿಲ್ಲಾ ಕೇಂದ್ರ ರಾಮನಗರದ ಎಲ್ಲ ವಾರ್ಡುಗಳಲ್ಲಿ ರಸ್ತೆ, ಚರಂಡಿ ಸೇರಿದಂತೆ ಮೂಲ ಸೌಕರ್ಯ ಕಲ್ಪಿಸಲು ಅನುದಾನ ಬಳಕೆ ಮಾಡಲಾಗುವುದು ಎಂದು ಹೇಳಿದರು.

ಈಗಾಗಲೇ ಅರ್ಚಕರಹಳ್ಳಿ ವಾರ್ಡಿನಲ್ಲಿ ಯುಐಡಿಎಫ್ ಸೇರಿದಂತೆ ಈಗಾಗಲೇ ವಿವಿಧ ಶೀರ್ಷಿಕೆಗಳಡಿ 2 ಕೋಟಿ ರುಪಾಯಿ ಅನುದಾನದಲ್ಲಿ ಅಭಿವೃದ್ಧಿ ಕೆಲಸಗಳು ನಡೆಯುತ್ತಿವೆ. ಮುಂದುವರಿದ ಭಾಗವಾಗಿ ಈಗ 2 ಕೋಟಿ ಅನುದಾನದಲ್ಲಿ ರಸ್ತೆ, ಚರಂಡಿ ಅಭಿವೃದ್ಧಿ ಕೆಲಸ ಕೈಗೆತ್ತಿಕೊಂಡಿದ್ದು ಒಟ್ಟು 4 ಕೋಟಿ ರುಪಾಯಿ ವೆಚ್ಚದಲ್ಲಿ ಕೆಲಸಗಳು ಈ ವಾರ್ಡಿನಲ್ಲಿ ನಡೆಯುತ್ತಿವೆ ಎಂದರು.

ಅರ್ಚಕರಹಳ್ಳಿ ನಿವಾಸಿಗಳ ಆಗ್ರಹದಂತೆ ಕುಡಿಯುವ ನೀರಿನ ಸಮರ್ಪಕ ಪೂರೈಕೆಗೆ ಗಮನ ಹರಿಸುವುದಾಗಿ ತಿಳಿಸಿದರು.ಈ ವೇಳೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್‌ಕುಮಾರ್, ಮಾಜಿ ಅಧ್ಯಕ್ಷ ಸಿಎನ್ ಆರ್ ವೆಂಕಟೇಶ್, ನಗರಸಭೆ ಉಪಾಧ್ಯಕ್ಷೆ ಗಿರಿಜಮ್ಮ, ಸ್ಥಾಯಿ ಸಮಿತಿ ಅಧ್ಯಕ್ಷ ಆರೀಫ್, ಸದಸ್ಯರಾದ ವಿಜಯಕುಮಾರಿ, ಆಯಿಷಾಬಾನು, ಅಜ್ಮತ್, ಮುತ್ತುರಾಜು , ಮುಖಂಡರಾದ ದೀಪು, ವಿಜಯಕುಮಾರ್, ವೇದಮೂರ್ತಿ, ಹೂಗು ರುವಯ್ಯ, ಕೆಂಪರಾಮು, ಅನಿಲ್ ಜೋಗೆಂದರ್, ಎಂ.ಮುಷೀರ್, ವಸೀಂ, ಇನಾಯತ್ , ಪೌರಾಯುಕ್ತ ಡಾ.ಜಯಣ್ಣ ಮತ್ತಿತರರು ಹಾಜರಿದ್ದರು.

### ರಾಮಲಿಂಗಾರೆಡ್ಡಿ ಬೇಡಿಕೆಯಲ್ಲಿ ತಪ್ಪೇನಿಲ್ಲ

ರಾಮನಗರ: ರಾಮಲಿಂಗಾರೆಡ್ಡಿ ಹಿರಿಯ ರಾಜಕಾರಣಿ ಅವರ ಬೇಡಿಕೆಯಲ್ಲಿ ತಪ್ಪೇನು ಇಲ್ಲ ಎಂದು ಶಾಸಕ ಇಕ್ಬಾಲ್ ಹುಸೇನ್ ಪ್ರತಿಕ್ರಿಯಿಸಿದರು.

ನಗರದಲ್ಲಿ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿದ್ದ ಅವರು ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯಿಸಿದರು. ಕೆ.ಎಚ್.ಮುನಿಯಪ್ಪ ಸಹ ಅನುಭವಿ ರಾಜಕಾರಣಿಗಳು. ಅವರಿಬ್ಬರು ಅನುಭವಕ್ಕೆ ತಕ್ಕಂತೆ ಹುದ್ದೆ ಬಯಸಿರುವುದರಲ್ಲಿ ತಪ್ಪೇನಿಲ್ಲ. ಪಕ್ಷದ ವರಿಷ್ಠರು, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಮಾಜಿ ಸಿಎಂ ಸಿದ್ದರಾಮಯ್ಯರವರು ಸಮಸ್ಯೆ ಬಗೆಹರಿಸುತ್ತಾರೆ ಎಂದು ಶಾಸಕ ಇಕ್ಬಾಲ್ ಹುಸೇನ್ ತಿಳಿಸಿದರು.

ಡಿ.ಕೆ.ಶಿವಕುಮಾರ್ ಈಗಷ್ಟೇ ಮುಖ್ಯಮಂತ್ರಿಗಳಾಗಿದ್ದಾರೆ. ನಮ್ಮ ಪಕ್ಷದವರೇ ಹುದ್ದೆ ಕೇಳುತ್ತಿದ್ದು, ಅದರಲ್ಲಿ ತಪ್ಪೇನಿಲ್ಲ. ಯಾವ ರೀತಿಯ ಗೊಂದಲವೂ ಇಲ್ಲ. ದೊಡ್ಡವರು ಎಲ್ಲವನ್ನು ತೀರ್ಮಾನ ಮಾಡುತ್ತಾರೆ ಎಂದರು.

ರಾಮಲಿಂಗಾರೆಡ್ಡಿ ಅವರು ಕಾಂಗ್ರೆಸ್ ಪಕ್ಷದಲ್ಲಿ ಅನುಭವಿ ರಾಜಕಾರಣಿಗಳು, ಸೋಲಿಲ್ಲದ ಸರದಾರ. ವಿವಿಧ ಇಲಾಖಾ ಸಚಿವರಾಗಿ, ಈ ಹಿಂದೆ ಬೆಂಗಳೂರು ನಗರ, ರಾಮನಗರ ಜಿಲ್ಲೆಗಳ ಉಸ್ತುವಾರಿ ಸಚಿವರಾಗಿದ್ದವರು. ಬೆಂಗಳೂರು ನಗರ ಪ್ರದೇಶದ ಬಗ್ಗೆ ಸಂಪೂರ್ಣ ಅರಿವಿದೆ. ಅವರು ಬೆಂಗಳೂರಿಗೆ ಒಂದಷ್ಟು ಕೆಲಸ ಮಾಡುವ ಬದ್ಧತೆಯಿದೆ. ಜಿಬಿಡಿ ಚುನಾವಣೆ ಬರುತ್ತಿರುವುದರಿಂದ ಅವಕಾಶ ಕೊಡಿ ಅಂತ ಕೇಳುತ್ತಿದ್ದಾರೆ. ರೆಡ್ಡಿರವರು ಅನುಭವಕ್ಕೆ ತಕ್ಕಂತೆ ಹುದ್ದೆ ಬಯಸಿದ್ದು , ಇದರಲ್ಲಿ ತಪ್ಪೇನಿಲ್ಲ ಎಂದು ಹೇಳಿದರು. ಕೆ.ಎಚ್.ಮುನಿಯಪ್ಪ ಅವರಲ್ಲಿ ಯಾವ ಮುನಿಸು, ಅಸಮಾಧಾನ ಏನು ಇಲ್ಲ. ಕೇಂದ್ರದಲ್ಲಿ ಸಚಿವರಾಗಿದ್ದ ಅವರೂ ಅನುಭವಿ ರಾಜಕಾರಣಿ. ಖಾತೆಯಲ್ಲಿ ಬದಲಾವಣೆ ಕೇಳುತ್ತಿದ್ದಾರೆಯೇ ಹೊರತು ಬೇರೇನೂ ಇಲ್ಲ ಎಂದು ತಿಳಿಸಿದರು. ಅಲ್ಪಸಮುದಾಯದ ಗುರುಗಳು ಜಮೀರ್ ಅಹ ಮದ್ ಖಾನ್ ಅವರಿಗೆ ಸಚಿವ ಸ್ಥಾನ ನೀಡು ವಂತೆ ಬೇಡಿಕೆ ಇಟ್ಟಿದ್ದಾರಲ್ಲ ಎಂಬ ಪತ್ರಕರ್ತರ ಪ್ರಶ್ನೆಗೆ ಇಕ್ಬಾಲ್ ಹುಸೇನ್ ರವರು, ನಮ್ಮಲ್ಲಿ ತನ್ವೀರ್ ಸೇಠ್ , ರಿಜ್ವಾನ್ ಹರ್ಷದ್ ಸೇರಿದಂತೆ ಅನೇಕ ನಾಯಕರು ಇದ್ದಾರೆ. ತನ್ವೀರ್ ಸೇಠ್ ಶಿಕ್ಷಣ ಸಚಿವರಾಗಿ ಒಳ್ಳೆಯ ಕೆಲಸ ಮಾಡಿದವರು. ಯುವ ನಾಯಕರಾಗಿದ್ದ ರಿಜ್ವಾನ್ ಹರ್ಷದ್ ಒಮ್ಮೆ ವಿಧಾನ ಪರಿಷತ್ ಸದಸ್ಯರಾಗಿ ಮತ್ತು ಎರಡನೇ ಬಾರಿ ಶಾಸಕರಾಗಿ ಅನುಭವ ಹೊಂದಿದ್ದಾರೆ ಎಂದು ಹೇಳಿದರು.

### ಕಾಲೇಜು ಕನ್ನಡದ ಪ್ರೀತಿ ಕಲಿಸಿತು'

ಆರಂಭದ ವರ್ಷಗ ಳಲ್ಲಿ ವರದಿಗಾರಿಕೆಯಲ್ಲದೆ ಸಾಪ್ತಾಹಿಕ ಪುರವಣಿ, ಸಿನಿಮಾ ರಂಜನೆ ವಿಭಾಗದಲ್ಲಿ ತೊಡಗಿಸಿಕೊಳ್ಳಲು ಅವಕಾಶ. ಆನಂತರ ವಾರಪತ್ರಿಕೆಯಲ್ಲಿ

ಕಾರ್ಯನಿರ್ವಹಣೆ. ಮುಂದೊಂದು ದಿನ ಬೆಳಗಾವಿಯಲ್ಲಿ ಕೆಲಸ ಮಾಡುವ ಸುಯೋಗ. ಇತ್ತ ಆಂಧ್ರದ ಗಡಿ, ಅತ್ತ ಮಹಾರಾಷ್ಟ್ರದ ಗಡಿ. ಬರಪೀಡಿತ ಪ್ರದೇಶದ ಬವಣೆ ಉಂಡವನಿಗೆ ಜಲಸಮೃದ್ಧಿ ನೋಡುವ ಅವಕಾಶ. ಆದರೆ ಜೀವಸೆಲೆಯಾದ ನೀರು ಉಕ್ಕಿದರೆ ಅದರ ಪರಿಣಾಮ ಹೇಗಿರಬಹುದು ಎಂಬುದನ್ನು ಪ್ರವಾಹದ ಪ್ರಕೋಪ ತೆರೆದಿಟ್ಟ ದಿನಗಳವು. ಜಲಾವೃತ ಪ್ರದೇಶಗಳ ಜನರ ಬವಣೆ, ಕಷ್ಟ–ಕಾರ್ಪಣ್ಯಗಳನ್ನು ಖುದ್ದು ಕಂಡು ವರದಿ ಮಾಡಿದ್ದು ವೃತ್ತಿಬದುಕಿನ ಮರೆಯಲಾಗದ ಅನುಭವ. ಅಥಣಿ ತಾಲ್ಲೂಕಿನ ಜಲಾವೃತ ಹಳ್ಳಿಯೊಂದಕ್ಕೆ ವರದಿಗಾರರನ್ನು ಕರೆದೊಯ್ಯಲು ಜಿಲ್ಲಾ ಆಡಳಿತ ವ್ಯವಸ್ಥೆ ಮಾಡಿತ್ತು. ತೆಪ್ಪ ಹತ್ತಿ ಕುಳಿತ ಕೆಲವೇ ಕ್ಷಣಗಳಲ್ಲಿ ಎದೆಯ ಗುಂಡಿಗೆ ಬಾಯಿಗೆ ಬಂದಿತ್ತು. ತೆಪ್ಪ ಮಗುಚಿಕೊಂಡಿದ್ದರಿಂದ ಎಲ್ಲರೂ ನೀರಿಗೆ ಬಿದ್ದಿದ್ದರು. ಸುದ್ದಿ ಮಾಡಲು ಹೋದ ವರದಿಗಾರರೇ ಸುದ್ದಿಯಾದ ರೋಚಕ ಪ್ರಸಂಗ ಅದು.

ಬೆಳಗಾವಿಯಲ್ಲಿ ಮುಖ್ಯ ವರದಿಗಾರನಾಗಿ ಐದು ವರ್ಷಗಳ ಕಾಲ ಕಾರ್ಯನಿರ್ವಹಣೆ. ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಮತದಾರರ ನಾಡಿಮಿಡಿತ ಅರಿಯುವ ಪ್ರಯತ್ನದ ಭಾಗವಾಗಿ ಅವಿಭಜಿತ ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರದ ಉದ್ದಗಲಕ್ಕೂ ಸುತ್ತಾಟ, ಸಾಕ್ಷಾತ್ ಸಮೀಕ್ಷೆ. ಕರ್ನಾಟಕದ ಆಯ್ದ ಕೆಲವು ವಿಧಾನಸಭಾ ಮತ್ತು ಲೋಕಸಭಾ ಕ್ಷೇತ್ರಗಳಲ್ಲಿ ಚುನಾವಣೆ ಸಂಬಂಧದ ಕ್ಷೇತ್ರ ವಿಶ್ಲೇಷಣೆ. ತೆಲಂಗಾಣ ಪ್ರತ್ಯೇಕ ರಾಜ್ಯಕ್ಕಾಗಿ ನಡೆದ ಚಳವಳಿ ತೀವ್ರಗೊಂಡಾಗ ಹೈದರಾಬಾದ್‌ಗೆ ತೆರಳಿ ಜನಸಮೂಹದ ಆಶೋತ್ತರಗಳಿಗೆ ಅಕ್ಷರ ರೂಪ ನೀಡಿದ ಅನುಭವ ವಿಶಿಷ್ಟವಾದುದು. ತೆಲಂಗಾಣ ಪ್ರತ್ಯೇಕ ರಾಜ್ಯೋದಯ ಸಂದರ್ಭದಲ್ಲೂ ಅಲ್ಲಿಗೆ ತೆರಳಿ ವರದಿ ಮಾಡಲು ಅವಕಾಶ ದೊರೆತದ್ದು ವೃತ್ತಿಬದುಕಿನ ಮರೆಯಲಾಗದ ವಿದ್ಯಮಾನ. ಬೆಳಗಾವಿಯಿಂದ ಬೆಂಗಳೂರಿಗೆ ಮರಳಿದ ಬಳಿಕ ಇಲ್ಲಿ ಪ್ರಧಾನ ವರದಿಗಾರನಾಗಿ, ವರದಿಗಾರರ ವಿಭಾಗದ ಮುಖ್ಯಸ್ಥನಾಗಿ ಸೇವೆ. ಒಂದು ವರ್ಷದ ಮಟ್ಟಿಗೆ ಮಯೂರ ಮಾಸಪತ್ರಿಕೆಯ ನಿರ್ವಹಣೆಯ ಹೊಣೆ. ಆನಂತರ ಸಂಪಾದಕೀಯ ಪುಟ ನಿರ್ವಹಣೆಯ ಗುರುತರ ಜವಾಬ್ದಾರಿ. ೀಯ ಬರಹಗಳನ್ನು ಸ್ಪಷ್ಟವಾಗಿ, ದಿಟ್ಟವಾಗಿ ರೂಪಿಸುವ, ಲೇಖನಗಳನ್ನು ಅಣಿಗೊಳಿಸುವ ಸವಾಲು. ಈ ವಿಭಾಗದಲ್ಲಿ ಸಹಾಯಕ ಸಂಪಾದಕನಾಗಿ 12 ವರ್ಷಗಳಷ್ಟು ಸುದೀರ್ಘ ಅವಧಿಗೆ ಕಾರ್ಯನಿರ್ವಹಿಸಿದ ಅನುಭವ. ಒಟ್ಟು 33 ವರ್ಷ ಇಂತಹ ಸುವರ್ಣಾವಕಾಶ ಒದಗಿಸಿದ ಪತ್ರಿಕೋದ್ಯಮಕ್ಕೆ ಚಿರಋಣಿ.

### ಸಿಎಂ ಸಿದ್ದರಾಮಯ್ಯ ಗೆ ಪ್ರಸಾದ್ ಅಭಿಮಾನಿಗಳ ಕೃತಜ್ಞತೆ

ಮೈಸೂರು: ಸಿದ್ದರಾಮಯ್ಯ ನಾಡು ಕಂಡ ಓರ್ವ ಉತ್ಕೃಷ್ಟ ಜನನಾಯಕರಾಗಿದ್ದು, ಶೋಷಿತರ ಬಗ್ಗೆ ಅಪಾರ ಕಾಳಜಿ ಹೊಂದಿರುವ ಸಮಾಜವಾದಿಯಾಗಿದ್ದಾರೆ. ಜೊತೆಗೆ ನಗರದಲ್ಲಿ ವಿ. ಶ್ರೀನಿವಾಸ ಪ್ರಸಾದ್ ಸ್ಮಾರಕ ನಿರ್ಮಾಣಕ್ಕೆ ತಮ್ಮ ಅವಧಿಯಲ್ಲಿ 3 ಕೋಟಿ ರೂ. ಅನುದಾನ ನೀಡಿದ್ದಕ್ಕೆ ಕೃತಜ್ಞತೆ ಸಲ್ಲಿಸುವುದಾಗಿ ವಿ. ಶ್ರೀನಿವಾಸ ಪ್ರಸಾದ್ ಅಭಿಮಾನಿಗಳ ಬಳಗದ ಸಂಚಾಲಕ ಭರತ್ ರಾಮಸ್ವಾಮಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಇನ್ನು, ಸಿಎಂ ಡಿ.ಕೆ. ಶಿವಕುಮಾರ್ ಅವರು ವಿ. ಶ್ರೀನಿವಾಸ ಪ್ರಸಾದ್ ಅವರ ಗರಡಿಯಲ್ಲಿ ಪಳಗಿದವರಾಗಿದ್ದಾರೆ. ಅವರು ಯೂತ್ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ 1985 ರಲ್ಲಿ ವಿ. ಶ್ರೀನಿವಾಸ ಪ್ರಸಾದ್ ಸಾರ್ವತ್ರಿಕ ಚುನಾವಣೆ ವೇಳೆ ಟಿಕೆಟ್ ಕೊಡಿಸಿದ್ದರು. ಇದು ಅವರ ರಾಜಕೀಯ ಜೀವನಕ್ಕೆ ನಾಂದಿಯಾಯಿತು. ಹೀಗಾಗಿ ಡಿ.ಕೆ. ಶಿವಕುಮಾರ್ ಉತ್ತಮ ಆಡಳಿತ ನೀಡಿ, ರಾಜ್ಯದ ಏಳಿಗೆಗೆ ಶ್ರಮಿಸಬೇಕೆಂದು ಕೋರಿದರು.

ಈ ನಡುವೆ ಸಿದ್ದರಾಮಯ್ಯ ಅವರ ಬಳಿಕ ದಲಿತರೊಬ್ಬರು ಸಿಎಂ ಆಗುತ್ತಾರೆಂಬ ನಿರೀಕ್ಷೆ ಹುಸಿಯಾಗಿದೆ. ದಲಿತ ಸಮುದಾಯ ಕಾಂಗ್ರೆಸ್‌ಗೆ ಸದಾ ಬೆಂಬಲ ನೀಡುತ್ತಿದ್ದರೂ ಈ ಬಾರಿ ದಲಿತರೊಬ್ಬರನ್ನು ಸಿಎಂ ಮಾಡದಿದ್ದುದು ಬೇಸರದ ಸಂಗತಿಯಾಗಿದೆ. ಹೀಗಾಗಿ ದಲಿತರೊಬ್ಬರನ್ನು ಸಿಎಂ ಮಾಡುವುದಾಗಿ ಭರವಸೆ ನೀಡುವ ಮೂಲಕ ಕಾಂಗ್ರೆಸ್ ಪಕ್ಷ ಮುಂದಿನ ಚುನಾವಣೆ ಎದುರಿಸಬೇಕೆಂದು ಮನವಿ ಮಾಡಿದರು. ಎಚ್.ಜಿ. ರಮೇಶ್, ಮಾಂಬಳ್ಳಿ ನಂಜುಂಡಸ್ವಾಮಿ, ಶಾಂತರಾಮ ಶೆಟ್ಟಿ, ಸಿ.ಜೆ. ಶಿವಕುಮಾರ್ ಇದ್ದರು.

**ಕಿಸಾನ್ ಕಾಂಗ್ರೆಸ್‌ನ ಜಿಲ್ಲಾಧ್ಯಕ್ಷ ಜಿ.ಮೋಹನ್‌ಕುಮಾರ್ ಕಿಡಿ**

## ಸಿ.ಡಿ.ಗಂಗಾಧರ್ ವಿರುದ್ಧ ಟೀಕೆ ಖಂಡನಾರ್ಹ



ಮಂಡ್ಯ: ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹಾಗು ಮೈಶುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್ ವಿರುದ್ಧ ಅನಗತ್ಯ ಟೀಕೆ ಮಾಡುತ್ತಿರುವುದು ಖಂಡನಾರ್ಹ ಎಂದು ಕಿಸಾನ್ ಕಾಂಗ್ರೆಸ್‌ನ ಜಿಲ್ಲಾಧ್ಯಕ್ಷ ಜಿ.ಮೋಹನ್‌ಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಲಿಗೆ ಕತ್ತರಿಸುವ ವಿಚಾರವಾಗಿ ಹೇಳಿಕೆಗೆ ಸಿ.ಡಿ.ಗಂಗಾಧರ್ ಪ್ರತಿಕ್ರಿಯೆ ನೀಡಿದ್ದಾರೆ. ಅದು ಯಾವ ವಿಷಯದ ಸಲುವಾಗಿ ಬಂದ ಪ್ರತಿಕ್ರಿಯೆ ಎಂಬುದರ ಅವಲೋಕನ ಮಾಡಬೇಕು ಎಂದರು. ಜೆಡಿಎಸ್ ಯುವ ಘಟಕದ ಅಧ್ಯಕ್ಷ ಕಂಸಾಗರ ರವಿ ಅವರು ಗಂಗಾಧರ್ ಅವರ ಬಗ್ಗೆ ವೈಯಕ್ತಿಕ ಟೀಕೆ ಮಾಡುವ ಮಟ್ಟಕ್ಕೆ ಇಳಿಯಬಾರದು. ಜೆಡಿಎಸ್ ಅಧ್ಯಕ್ಷರ ಹೇಳಿಕೆಗೆ ವಿಚಾರ ಹೊರತು ಪಡಿಸಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಪ್ರತಿಕ್ರಿಯೆ ಬಗ್ಗೆ ಮಾತನಾಡಿ ಪಲಾನಯ ಮಾಡಿದ್ದು, ಯಾರನ್ನೋ ಓಲೈಸಲು ಮನಬಂದಂತೆ ಮಾತನಾಡುವುದು ನಿಲ್ಲಿಸುವಂತೆ ಎಚ್ಚರಿಕೆ ನೀಡಿದರು.

ಬಿಜೆಪಿ ಪಕ್ಷದಿಂದ ನಗರಸಭೆಗೆ ನಾಮನಿರ್ದೇಶನಗೊಂಡಿದ್ದ ಮಾಜಿ ಸದಸ್ಯನೊಬ್ಬ ತಮ್ಮ ಪಕ್ಷದ ಮೈಶುಗರ್ ಅಧ್ಯಕ್ಷನಾಗಿದ್ದ ನಾಗರಾಜಪ್ಪ ಅವರ ಬ್ರಹ್ಮಾಂಡ ಭ್ರಷ್ಟಾಚಾರವನ್ನು ಬದಿಗಿಟ್ಟಿದ್ದಾರೆ. ಇದೀಗ ಹಾಲಿ ಅಧ್ಯಕ್ಷರನ್ನು ಬಹಿರಂಗ ಚರ್ಚೆಗೆ ಕರೆದಿದ್ದಾರೆ. ಈಗಾಗಲೇ ಮೈಶುಗರ್ ಅಧ್ಯಕ್ಷರು ಬಹಿರಂಗ ಚರ್ಚೆಗೆ ಆಹ್ವಾನಿಸಿದ್ದು, ತಮಗೆ ಮಾಹಿತಿ ಬೇಕಿದ್ದರೆ ಕಾರ್ಖಾನೆಗೆ ಬಂದು ಪಡೆಯುವಂತೆ ಹೇಳಿದರು.

ಮೈಶುಗರ್ ಕಾರ್ಖಾನೆಯ ಕಾಂಪೌಂಡ್ ಸೇರಿದಂತೆ ಇತರೆ ಕಾಮಗಾರಿಗಳನ್ನು ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡ ಗುತ್ತಿಗೆದಾರರಿಂದ ಮಾಡಿಸುವ ಆರೋಪ ಮಾಡಲಾಗಿದೆ. ಎಲ್ಲ ಕಾಮಗಾರಿಗಳು ಸರಕಾರಿ ಸ್ವಾಮ್ಯದ ನಿರ್ಮಿತಿ ಕೇಂದ್ರದಿಂದ ನಡೆದಿವೆ. ಮೈಶುಗರ್‌ನ ಅನುಪಯುಕ್ತ ವಸ್ತುಗಳ ಸಂಬಂಧ ಜೂ.8ರ ಸೋಮವಾರ ಸಂಜೆ.4 ಗಂಟೆಗೆ ಮೈಶುಗರ್ ಆವರಣದಲ್ಲಿ ಬಹಿರಂಗ ಚರ್ಚೆಗೆ ಅಧ್ಯಕ್ಷರು ಕರೆ ನೀಡಿರುವುದಾಗಿ ಇದೇ ವೇಳೆ ಮಾಹಿತಿ ನೀಡಿದರು. ಗೋಷ್ಠಿಯಲ್ಲಿ ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಅಜ್ಜಹಳ್ಳಿ ರಾಮಕೃಷ್ಣ, ಮುಖಂಡರಾದ ಚಿನಕುರಳಿ ಸಿ.ಆರ್.ರಮೇಶ್, ಉದಯ್‌ಕುಮಾರ್, ಸಿದ್ದಲಿಂಗೇಗೌಡ, ಗುರುರಾಜ್, ನವೀನ್, ವಿಜಯ್‌ಕುಮಾರ್ ಇದ್ದರು.

**ಡಿಕೆಶಿ ಸಿಎಂ: ಈಡೇರಿದ ಹರಕೆ**

## ಗಾಂಧಿ ವೇಷದಾರಿಯಾಗಿ ಡಿಕೆಶಿ ಅಭಿಮಾನಿ ಪಾದಯಾತ್ರೆ



ರಾಮನಗರ: ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗಬೇಕೆಂದು ದೇವರಿಗೆ ಹರಕೆ ಹೊತ್ತಿದ್ದ ಮುತ್ತುರಾಯಪ್ಪ ಎಂಬ ಡಿಕೆಶಿ ಅಭಿಮಾನಿಯೊಬ್ಬರು ಗಾಂಧೀಜಿ ವೇಷ ಧರಿಸಿ ಕನಕಪುರದಿಂದ ರಾಮನಗರದ ಮೂಲಕ ಪಾದಯಾತ್ರೆ ಕೈಗೊಂಡಿದ್ದು, ಶನಿವಾರ ರಾಮನಗರದ ಮೂಲಕ ಬೆಂಗಳೂರಿನ ಕಡೆ ಪ್ರಯಾಣ ಬೆಳೆಸಿದರು.

ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿನ ಬೂದಿಬೆಟ್ಟ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಎತ್ತಿನಹಳ್ಳಿಗ್ರಾಮದ ಮುತ್ತುರಾಯಪ್ಪ ಕಾಂಗ್ರೇಸ್ ಪಕ್ಷದ ಕಾರ್ಯಕರ್ತರರಾಗಿದ್ದು ಡಿ.ಕೆ.ಶಿವಕುಮಾರ್ ಅಭಿಮಾನಿಯಾಗಿದ್ದಾರೆ. ಡಿಕೆಶಿ ಸಿಎಂ ಆದಲ್ಲಿ ಕನಕಪುರದ ಕೆಂಕೇರಮ್ಮ ದೇವಾಲಯದಿಂದ ಸದಾಶಿವನಗರದ ಡಿಕೆಶಿ ನಿವಾಸದ ತನಕ ಪಾದಯಾತ್ರೆ ನಡೆಸುವ ಹರಕೆ ಹೊತ್ತಿದ್ದರು. ತಮ್ಮ ಹರಕೆ ಈಡೇರಿಕೆಯಾದ ಹಿನ್ನೆಲೆಯಲ್ಲಿ ಕನಕಪುರದ ಕೆಂಕೇರಮ್ಮ ದೇವಾಲಯದಿಂದ ಪಾದಯಾತ್ರೆ ಹೊರಟಿದ್ದ ಅವರು ಶುಕ್ರವಾರ ರಾತ್ರಿ ರಾಮನಗರ ತಲುಪಿದ್ದರು. ಇಂದು ಬೆಳಗ್ಗೆ ನಗರದ ಕನಕಪುರ ಸರ್ಕಲ್ ನಿಂದ ಪಾದಯಾತ್ರೆ ಆರಂಭಿಸಿದರು. ಮಾರ್ಗದುದ್ದಕ್ಕೂ ಸಾರ್ವಜನಿಕರು, ಕಾಂಗ್ರೆಸ್ ಕಾರ್ಯಕರ್ತರು ಅವರಿಗೆ ಹಸ್ತಲಾಘವ ನೀಡಿ ಅವರ ಪಾದಯಾತ್ರೆಗೆ ಶುಭಾಶಯ ಕೋರಿದರು.

ಈ ವೇಳೆ ಸುದ್ದಿಗಾರರ ಜೊತೆ ಮಾತನಾಡಿದ ಮುತ್ತು ರಾಯಪ್ಪ, ಡಿ.ಕೆ. ಶಿವಕುಮಾರ್ ಅವರು ಕಾಂಗ್ರೆಸ್ ಪಕ್ಷ ವನ್ನು ಸಂಘಟಿಸಿ ಅಧಿಕಾರಕ್ಕೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ನಾನು ಡಿಕೆಶಿ ಅಪ್ಪಟ ಅಭಿಯಾನಿಯಾಗಿದ್ದು, ಅವರು ಒಂದು ವರ್ಷದ ಹಿಂದೆಯೇ ಮುಖ್ಯಮಂತ್ರಿಯಾಗ ಬೇಕಿತ್ತು. ಆದರೆ ತಡವಾಗಿ ಆದರೂ ಸಿಎಂ ಆಗಿದ್ದು ನನ್ನ ಸಂತಸ ಇಮ್ಮಡಿಗೊಳಿಸಿದೆ. ಡಿಕೆಶಿ ಸಿಎಂ ಆಗಬೇಕೆಂದು ಬಯಸಿ ಕೇರಳದ ವಯನಾಡ್ ಶಿವನ ದೇವಸ್ಥಾನ, ಅವರ ಮನೆ ದೇವತೆ ಕೆಂಕೇರಮ್ಮ ದೇವತೆಯಲ್ಲಿ ಕಳೆದ ವರ್ಷ ಹರಕೆ ಹೊತ್ತಿದ್ದೆ ತಮ್ಮ ಹರಕೆಯಂತೆ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ ಎಂದರು.

ನಾನು ಕಾಂಗ್ರೆಸ್ ಪಕ್ಷದ ಒಬ್ಬ ಸಾಮಾನ್ಯ ಕಾರ್ಯಕರ್ತರಾಗಿ ಎನ್‌ಎಸ್‌ಯುಐ ಯಿಂದ ಬಂದು ಪಕ್ಷ ಸಂಘ ಟನೆ ಮಾಡಿ ಸುಮಾರು ವರ್ಷಗಳ ಕಾಲ ಪಕ್ಷಕ್ಕೆ ಅಳಿಲು ಸೇವೆ ಮಾಡಿದ್ದೇನೆ. ಬಳ್ಳಾರಿ ಪಾದಯಾತ್ರೆ, ಮೇಕೆದಾಟು, ಭಾರತ್ ಜೋಡೋ ಸೇರಿದಂತೆ ವಿವಿಧ ಪಾದಯಾತ್ರೆಗಳಲ್ಲಿ ಮಹಾತ್ಮ ಗಾಂಧಿ ವೇಷದಾರಿಯಾಗಿ ಪಾಲ್ಗೊಂಡಿದ್ದೇನೆ. ಇದೀಗ ತಮ್ಮ ಆಸೆಯಂತೆ ಡಿ.ಕೆ.ಶಿವಕುಮಾರ್ ಸಿಎಂ ಆಗಿದ್ದಾರೆ. ನನ್ನ ಹರಕೆಯಂತೆ ಶುಕ್ರವಾರ ಕೆಂಕೇರಮ್ಮ ದೇವಿಗೆ ಪೂಜೆ ಸಲ್ಲಿಸಿ ಕನಕಪುರದ ಡಿಕೆಶಿ ಮನೆಯಿಂದ ಪಾದಯಾತ್ರೆ ಆರಂಭ ಮಾಡಲಾಗಿತ್ತು. ಇನ್ನು 5 ದಿನಗಳ ಕಾಲ ರಾಮನಗರ ಮಾರ್ಗವಾಗಿ ಸದಾಶಿವನಗರದ ಡಿ.ಕೆ.ಶಿವಕುಮಾರ್ ನಿವಾಸದ ಬಳಿ ಪಾದಯಾತ್ರೆ ಅಂತ್ಯ ಗೊಳ್ಳಲಿದೆ ಎಂದರು.

# ಶಾಸಕರಿಂದ ರೈತರಿಗೆ ಬಿತ್ತನೆ ಬೀಜ ವಿತರಣೆ

ಹನೂರು: ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪಾಳ್ಯ, ರಾಮಾಪುರ ಹಾಗೂ ಲೋಕ್ಕನಹಳ್ಳಿ ಹೋಬಳಿ ವಿಭಾಗದ ರೈತರಿಗೆ ಶಾಸಕ ಎಂ.ಆರ್. ಮಂಜುನಾಥ್ ಅವರು ನೆಲಗಡಲೆ, ಉದ್ದು ಮತ್ತು ಜೋಳದ ಬಿತ್ತನೆ ಬೀಜಗಳನ್ನು ಸಾಂಕೇತಿಕವಾಗಿ ವಿತರಿಸಿದರು. ಚಾಮರಾಜನಗರ ಜಿಲ್ಲಾ ಪಂಚಾಯಿತಿ, ಹನೂರು ತಾಲೂಕು ಪಂಚಾಯಿತಿ ಹಾಗೂ ಕೃಷಿ ಇಲಾಖೆಯ ಸಂಯುಕ್ತಾಶ್ರಯದಲ್ಲಿ ರೈತರಿಗಾಗಿ 2026–27ನೇ ಸಾಲಿನ ಬಿತ್ತನೆ ಬೀಜ ವಿತರಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.



**ಬೆಳೆ ಬದಲಾವಣೆ ಹಾಗೂ ಮಣ್ಣಿನ ಆಯ್ಕೆಗೆ ಸಲಹೆ**

ಕಾರ್ಯಕ್ರಮದಲ್ಲಿ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ರಂಗಸ್ವಾಮಿ ಅವರು ಮಾತನಾಡಿ, ಮುಂಗಾರು ಮಳೆ ಪ್ರಾರಂಭವಾಗುತ್ತಿರುವುದರಿಂದ ಶಾಸಕರ ನೇತೃತ್ವದಲ್ಲಿ ರೈತರಿಗೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜಗಳನ್ನು ನೀಡಲಾಗುತ್ತಿದೆ. ರೈತರು ಪ್ರತಿ ಬಾರಿಯೂ ಒಂದೇ ಬೆಳೆಯನ್ನು ಬೆಳೆಯದೆ, ಬೆಳೆ ಬದಲಾವಣೆ ಮಾಡಿ ವ್ಯವಸಾಯ ಮಾಡಿದರೆ ಇಳುವರಿ ಉತ್ತಮವಾಗಿ ಬರುತ್ತದೆ. ವಿಶೇಷವಾಗಿ ನೆಲಗಡಲೆಯನ್ನು ಕಪ್ಪು ಮಣ್ಣಿನಲ್ಲಿ ಬೆಳೆಯುವ ಬದಲು ಕೆಂಪು ಮಣ್ಣಿನಲ್ಲಿ ಬೆಳೆದರೆ ಅತ್ಯುತ್ತಮ ಇಳುವರಿ ಪಡೆಯಬಹುದು ಎಂದು ರೈತರಿಗೆ ಉಪಯುಕ್ತ ಸಲಹೆ ನೀಡಿದರು.

**ತಂತ್ರಜ್ಞಾನ ಆಧಾರಿತ ಕೃಷಿಗೆ ಕರೆ**

ಕ್ಷೇತ್ರದ ಶಾಸಕ ಎಂ.ಆರ್. ಮಂಜುನಾಥ್ ಅವರು ಮಾತನಾಡಿ, ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಸ್ವಲ್ಪ ಮಟ್ಟಿಗೆ ಉತ್ತಮ ಮಳೆಯಾಗಿದೆ. ಕಾಲಕಾಲಕ್ಕೆ ಮಳೆಯಾದರೆ ಬೆಳೆ ತುಂಬಾ ಚೆನ್ನಾಗಿ ಬರುತ್ತದೆ. ರೈತರೆಲ್ಲರೂ ಉಳುಮೆ ಮಾಡಲು ತಯಾರಾಗಿದ್ದು, ಸರ್ಕಾರದಿಂದ ರಿಯಾಯಿತಿ ದರದಲ್ಲಿ ನೀಡುತ್ತಿರುವ ಬಿತ್ತನೆ ಬೀಜಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ರೈತರ ಅಭಿವೃದ್ಧಿಗಾಗಿ ಮುಂದಿನ ದಿನಗಳಲ್ಲಿ ವಿಶೇಷ ಯೋಜನೆಗಳನ್ನು ರೂಪಿಸಿದ್ದೇನೆ. ರೈತ ನಮ್ಮ ದೇಶದ ಬೆನ್ನೆಲುಬಾಗಿದ್ದು, ನಾವು ಬೇರೆ ದೇಶಗಳಿಗೆ ಜೀತ ಮಾಡುವಂತಹ ಪರಿಸ್ಥಿತಿ ಬಂದಿರುವುದು ದುರಂತ. ಆದರೆ, ರೈತರು ನವೀನ ತಂತ್ರಜ್ಞಾನವನ್ನು ಬಳಸಿಕೊಂಡು ವ್ಯವಸಾಯ ಮಾಡಿ ಜೀವನ ನಡೆಸಿದರೆ, ನಾವು ಇತರ ದೇಶಗಳಿಗೆ ಮಾದರಿಯಾಗಬಹುದು ಎಂದು ಕಿವಿಮಾತು ಹೇಳಿದರು.

**ಪಿ.ಜಿ. ಪಾಳ್ಯ ಕೆರೆ ಒತ್ತುವರಿ ತೆರವು**

ರೈತರಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆ ವಿವರಿಸಿದ ಶಾಸಕರು, ಪಿ.ಜಿ. ಪಾಳ್ಯ ಗ್ರಾಮದಲ್ಲಿ ಸುಮಾರು 16 ಎಕರೆ ಕೆರೆ ಜಾಗವನ್ನು ಕೆಲವರು ಒತ್ತುವರಿ ಮಾಡಿಕೊಂಡಿದ್ದರು. ಇದೀಗ ಆ ಒತ್ತುವರಿಯನ್ನು ಸಂಪೂರ್ಣವಾಗಿ ತೆರವು ಮಾಡಿಸಲಾಗಿದ್ದು, ರೈತರಿಗೆ ಸಮರ್ಪಕವಾಗಿ ನೀರು ಒದಗಿಸುವ ಸಲುವಾಗಿ ಕೆರೆಯಲ್ಲಿ ಹೂಳು ತೆಗೆಸುವ ಕಾಮಗಾರಿ ಭರದಿಂದ ಸಾಗುತ್ತಿದೆ. ಮುಂಬರುವ ದಿನಗಳಲ್ಲಿ ಕೆರೆಗೆ ನೀರು ತುಂಬಿದರೆ ಈ ಭಾಗದ ಹಲವಾರು ರೈತರಿಗೆ ಕೃಷಿ ಚಟುವಟಿಕೆಗಳಿಗೆ ಬಹಳ ಅನುಕೂಲವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು

> ಸರ್ಕಾರದಿಂದ ನೀಡುವ ಬಿತ್ತನೆ ಬೀಜದಿಂದ ವ್ಯವಸಾಯ ಮಾಡಿ ರೈತರಿಗೆ ಚೆನ್ನಾಗಿ ಇಳುವರಿ ಬಂದು ಒಳ್ಳೆಯ ರೇಟ್ ಸಿಕ್ಕರೆ ಒಳ್ಳೇಯದು ಆದರೆ ಮಳೆ ಕೈಕೊಟ್ಟು ಸಮಸ್ಯೆ ಎದುರಾಗಬಹುದು ಅದಕ್ಕೆ ಪ್ರತಿಯೊಬ್ಬ ರೈತರು ತಮ್ಮ ಬೆಳೆಯ ಮೇಲೆ ವಿಮೆ ಮಾಡಿಸಿಕೊಳ್ಳಿ ರೈತರಿಗೆ ಯಾವುದೇ ಸಮಸ್ಯೆ ಆಗದಂತೆ ಕೃಷಿ ಇಲಾಖೆ ಸಹಾಯಕ ನಿರ್ದೇಶಕರು ಕ್ರಮ ಕೈಗೊಳ್ಳಿ.
>
> **ಎಂ ಆರ್ ಮಂಜುನಾಥ್**
> ಹನೂರು ಶಾಸಕ

# ಜೂ.21ರಂದು ವಿಶ್ವ ಯೋಗ ದಿನ

## ಅರ್ಥಪೂರ್ಣ ಆಚರಣೆಗೆ ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ ಸೂಚನೆ

ಮಂಡ್ಯ: ಜಿಲ್ಲೆಯಲ್ಲಿ 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಜೂನ್ 21ರಂದು ನಗರದ ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜಿನ ಪಿ.ಇ.ಟಿ ಕ್ರೀಡಾಂಗಣದಲ್ಲಿ ಅತ್ಯಂತ ಅರ್ಥಪೂರ್ಣವಾಗಿ ಹಾಗೂ ಯಶಸ್ವಿಯಾಗಿ ಆಚರಿಸಲಾಗುವುದು ಎಂದು ಜಿಲ್ಲಾಧಿಕಾರಿ ಡಾ. ಕುಮಾರ ಅವರು ತಿಳಿಸಿದ್ದಾರೆ.

ಯೋಗ ದಿನಾಚರಣೆಯ ಯಶಸ್ವಿ ಆಚರಣೆಗಾಗಿ ಶನಿವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಪ್ರತಿ ವರ್ಷದಂತೆ ಈ ಬಾರಿಯೂ ಜೂನ್ 21 ರಂದು ಮಂಡ್ಯದ ಪಿ.ಇ.ಟಿ ಕ್ರೀಡಾಂಗಣದಲ್ಲಿ ಬೃಹತ್ ಸಾಮೂಹಿಕ ಯೋಗ ಪ್ರದರ್ಶನವನ್ನು ಆಯೋಜಿಸಲಾಗುತ್ತಿದೆ ಎಂದು ಅವರು ವಿವರಿಸಿದರು.

**10 ಸಾವಿರಕ್ಕೂ ಹೆಚ್ಚು ಜನರ ಭಾಗಿ ನಿರೀಕ್ಷೆ ಹಾಗೂ ಸಾರಿಗೆ ಜವಾಬ್ದಾರಿ**

ಈ ಬಾರಿಯ ಯೋಗ ದಿನಾಚರಣೆಯಲ್ಲಿ ಶಾಲಾ–ಕಾಲೇಜು ವಿದ್ಯಾರ್ಥಿಗಳು, ವಸತಿ ನಿಲಯಗಳ ನಿವಾಸಿಗಳು, ಸ್ಕೌಟ್ಸ್ ಅಂಡ್ ಗೈಡ್ಸ್, ಮಹಿಳಾ ಸಂಘಟನೆಗಳು ಹಾಗೂ ವಿವಿಧ ಯೋಗ ಸಂಸ್ಥೆಗಳ ಸದಸ್ಯರು ಸೇರಿದಂತೆ ಒಟ್ಟು 10 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸುವಂತೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಿದರು. ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಮಹತ್ವವನ್ನು ಅರಿತು ಸಂಬಂಧಪಟ್ಟ ಎಲ್ಲಾ ಇಲಾಖೆಗಳು ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಅಗತ್ಯ ಸಹಕಾರ ನೀಡಬೇಕು. ವಿಶೇಷವಾಗಿ ಶಾಲಾ, ಕಾಲೇಜು ಹಾಗೂ ಹಾಸ್ಟೆಲ್ ವಿದ್ಯಾರ್ಥಿಗಳನ್ನು ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಸುರಕ್ಷಿತವಾಗಿ ಕರೆದುಕೊಂಡು ಬರಲು ಮತ್ತು ವಾಪಸ್ ಕಳುಹಿಸಲು ಸೂಕ್ತ ಜವಾಬ್ದಾರಿ ವಹಿಸಿಕೊಂಡು ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸುವಂತೆ ಜಿಲ್ಲಾಧಿಕಾರಿಗಳು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.



**ಆಯುಷ್ ಇಲಾಖೆಯ ಮಾರ್ಗಸೂಚಿ ಮತ್ತು ಗಣ್ಯರ ಉಪಸ್ಥಿತಿ**

ಸಭೆಯಲ್ಲಿ ಮಾತನಾಡಿದ ಜಿಲ್ಲಾ ಆಯುಷ್ ಅಧಿಕಾರಿ ಡಾ.ಪುಷ್ಪಾ ಅವರು, ಆಯುಷ್ ಇಲಾಖೆಯ ಮಾರ್ಗಸೂಚಿಗಳ ಅನುಸಾರ ಅಂತರರಾಷ್ಟ್ರೀಯ ಯೋಗ ದಿನಾಚರಣೆಗೆ ಸೂಕ್ತ ಸ್ಥಳ ನಿಗದಿಪಡಿಸುವುದು, ಯೋಗಾಭ್ಯಾಸ ಮಾಡುವವರನ್ನು ಸಜ್ಜುಗೊಳಿಸುವುದು ಹಾಗೂ ನಿಗದಿತ ಯೋಗ ಪ್ರೋಟೋಕಾಲ್ ಪ್ರಕಾರ ಯೋಗಾಸನಗಳನ್ನು ಪೂರ್ವಭ್ಯಾಸ ಮಾಡಿಸುವ ಕುರಿತು ಸಭೆಗೆ ಸಮಗ್ರ ಮಾಹಿತಿ ನೀಡಿದರು. ಈ ಪೂರ್ವಭಾವಿ ಸಭೆಯಲ್ಲಿ ಅಪರ ಪೊಲೀಸ್ ವರಿಷ್ಠಾಧಿಕಾರಿ ತಿಮ್ಮಯ್ಯ, ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಮಂಡ್ಯ ಜಿಲ್ಲಾ ಘಟಕದ ಉಪಾಧ್ಯಕ್ಷರಾದ ಮೀರಾ ಶಿವಲಿಂಗಯ್ಯ ಹಾಗೂ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

### ಪೂರ್ವಭಾವಿ ತರಬೇತಿ, ಮೂಲ ಸೌಲಭ್ಯ ವ್ಯವಸ್ಥೆ

**ಕಾರ್ಯಕ್ರಮವು ಸಂಪೂರ್ಣ ಯಶಸ್ವಿಯಾಗಲು ನುರಿತ ಯೋಗ ಶಿಕ್ಷಕರನ್ನು ಸಂಯೋಜಕರ ನ್ನಾಗಿ ನೇಮಕ ಮಾಡಲಾಗುವುದು. ಇವರ ಮೂಲಕ ಕಾರ್ಯಕ್ರಮದಲ್ಲಿ ಭಾಗವಹಿಸುವವ ರಿಗೆ ಎರಡು ಅಥವಾ ಮೂರು ದಿನಗಳ ಮುಂಚಿತವಾಗಿ ಅಗತ್ಯ ಯೋಗ ತರಬೇತಿ ನೀಡಲಾಗುತ್ತದೆ. ಇದೇ ವೇಳೆ, ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಪೊಲೀಸ್ ಇಲಾಖೆಯ ವತಿಯಿಂದ ಬಿಗಿ ಭದ್ರತೆ ಹಾಗೂ ಸುಸಜ್ಜಿತ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಬೇಕು. ಆರೋಗ್ಯ ಇಲಾಖೆಯಿಂದ ತುರ್ತು ಪರಿಸ್ಥಿತಿಗಾಗಿ ಅಂಬ್ಯು ಲೆನ್ಸ್ ವ್ಯವಸ್ಥೆ, ಪ್ರಥಮ ಚಿಕಿತ್ಸೆ ಸೌಲಭ್ಯ ಹಾಗೂ ರಕ್ತದಾನ ಶಿಬಿರವನ್ನು ಆಯೋಜಿಸಲು ಸಭೆ ಯಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು.**

# ಬಸವಣ್ಣರ ಆಶಯದಂತೆ ನಾಲ್ವಡಿ ಆಡಳಿತ: ಯದುವೀರ್



ಮೈಸೂರು: ಹನ್ನೇರಡನೆ ಶತಮಾನದ ಕ್ರಾಂತಿಕಾರಿ ಬಸವಣ್ಣನವರ ಆಶಯದಂತೆ ಮೈಸೂರು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಆಡಳಿತ ನಡೆಸಿದರು ಎಂದು ರಾಜವಂಶಸ್ಥರೂ ಆದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಕನ್ನಡಾಂಬೆ ರಕ್ಷಣಾ ವೇದಿಕೆಯ 6ನೇ ವಾರ್ಷಿಕೋತ್ಸವ ಅಂಗವಾಗಿ ಖಿಲ್ಲೆ ಮೊಹಲ್ಲಾದ ಶ್ರೀ ನಟರಾಜ ಸಭಾಭವನದಲ್ಲಿ ಶನಿವಾರ ಏರ್ಪಡಿಸಿದ್ದ ಬಸವ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ, ಪೌರಕಾರ್ಮಿಕರಿಗೆ ಉಚಿತ ಬಟ್ಟೆ ವಿತರಣೆ, ಸಹಪಂಕ್ತಿ ಭೋಜನ, ಸರ್ಕಾರಿ ಶಾಲೆಯ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿ, ಸಮಾನತೆ ಹಾಗೂ ಎಲ್ಲರಿಗೂ ಅವಕಾಶ ಕಲ್ಪಿಸುವುದು ಬಸವಣ್ಣನವರ ಆಶಯವಾಗಿತ್ತು. ಅದರಂತೆ ನಾಲ್ವಡಿಯವರು ಒಳ್ಳೆಯ ಆಡಳಿತ ನೀಡಿದರು ಎಂದು ಸ್ಮರಿಸಿದರು.

ಬಸವಣ್ಣನವರು ಸೇರಿ ಎಲ್ಲಾ ಆಚಾರ್ಯರು, ಗುರುಗಳು, ತಪಸ್ವಿಗಳು ಸಮಾಜದ ಏಳಿಗೆಗೆ ಕೆಲಸ ಮಾಡಿದವರು. ಬಸವಣ್ಣನವರ ವಚನಗಳು ಸರಳವಾಗಿದ್ದು, ಇವತ್ತಿನ ದಿನಮಾನಗಳಿಗೂ ಪ್ರಸ್ತುತವಾಗಿವೆ ಎಂದು ಹೇಳಿದರು. ಪೌರ ಕಾರ್ಮಿಕರು ನಗರದ ಸ್ವಚ್ಛತೆಗಾಗಿ ಪ್ರತಿನಿತ್ಯ ಶ್ರಮಿಸುತ್ತಿದ್ದಾರೆ. ಅದೇ ರೀತಿ ಸರ್ಕಾರಿ ಶಾಲೆಯ ಮಕ್ಕಳನ್ನು ಗುರುತಿಸಿ, ಪುರಸ್ಕರಿಸುತ್ತಿರುವುದು ಉತ್ತಮ ಕಾರ್ಯ. ಈ ರೀತಿಯ ಉತ್ತೇಜಿಸುವ ಮೂಲಕ ಒಳ್ಳೆಯ ಭಾರತ ನಿರ್ಮಿಸಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಅರ್ಜುನ ಅವಧೂತ ಗುರೂಜಿ ಮಾತನಾಡಿ, ಕನ್ನಡ ಎಂದರೇ ವಿಶಾಲತೆ, ವಾತ್ಸಲ್ಯ, ತಾಯ್ತನ. ನಾವೆಲ್ಲರೂ ಕನ್ನಡಾಂಬೆಯ ಮಕ್ಕಳು. ಎಲ್ಲರೂ ಸೇರಿ ಕನ್ನಡವನ್ನು ಬೆಳೆಸಬೇಕು ಎಂದರು

ಕಾರ್ಯಕ್ರಮವನ್ನು ಚಿಂತಕ ಶಂಕರ ದೇವನೂರು, ಪ್ರಾದೇಶಿಕ ಆಯುಕ್ತರ ಕಚೇರಿಯ ಹೆಚ್ಚುವರಿ ಆಯುಕ್ತ ಡಾ.ಪಿ. ಶಿವರಾಜು, ಸಾಹಿತಿ ಡಾ. ಎಸ್. ಶಿವರಾಜಪ್ಪ ಮಾತನಾಡಿದರು. ಬಿಜೆಪಿ ಮುಖಂಡ ಕವೀಶ್ ಗೌಡ ಹಾಗೂ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮುಖ್ಯ ಅತಿಥಿಗಳಾಗಿದ್ದರು. ಕನ್ನಡಾಂಬೆ ರಕ್ಷಣಾ ವೇದಿಕೆಯ ಸಂಸ್ಥಾಪಕ ಅಧ್ಯಕ್ಷ ಬಿ.ಬಿ. ರಾಜಶೇಖರ್ ಪ್ರಾಸ್ತಾವಿಕ ಭಾಷಣ ಮಾಡಿ, ಕಳೆದ ಆರು ವರ್ಷಗಳಿಂದ ಮಾಡಿರುವ ಹೋರಾಟ ಹಾಗೂ ಸಮಾಜಮುಖಿ ಸೇವೆಗಳನ್ನು ವಿವರಿಸಿದರು.

413 ಪೌರ ಕಾರ್ಮಿಕರಿಗೆ ಬಟ್ಟೆ ಹಾಗೂ 130 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ ಎಂದರು. ಬಸವರಾಜೇಂದ್ರ ಸ್ವಾಮಿ ಸ್ವಾಗತಿಸಿದರು. ಮಾತನಾಡುವ ಗೊಂಬೆ ಖ್ಯಾತಿಯ ಸುಮಾ ರಾಜಕುಮಾರ್ ಕಾರ್ಯಕ್ರಮ ನಿರೂಪಿಸಿದರು. ಸುರಭಿ ಪ್ರಾರ್ಥಿಸಿದರು.

ವೇದಿಕೆಯ ಪದಾಧಿಕಾರಿಗಳಾದ ನಂಜುಂಡ, ಶಿವಕುಮಾರ್, ತಾರಾ, ಹರೀಶ್, ಅಜಯ್ ಶೆಟ್ಟಿ, ವತ್ಸಲಾ, ಹರೀಶ್, ಗೀತಾ, ಕಿರಣ್, ಕರೀಗೌಡ, ಕುಮಾರಶೆಟ್ಟಿ, ಶಿವಕುಮಾರ್, ಕಿಕ್ಕೇರಿ ಕಿರಣ, ರವಿಗೌಡ, ರಶ್ಮಿಸಿಂಗ್, ಮುಂಜು ಪೇಜೂರ್, ಮಹೇಂದ್ರ, ವಿಷ್ಣು, ಈವಿ ನಾಗರಾಜು ಮೊದಲಾದವರು ಇದ್ದರು.

# ದೃಶ್ಯ ಮಾಧ್ಯಮಗಳ ಗೀಳು ಬೇಡ, ಶಿಕ್ಷಣಾರ್ಜನೆಗೆ ಗಮನ ಕೊಡಿ

**ಸೌಮ್ಯನಾಥ ಸ್ವಾಮೀಜಿ ಹೇಳಿಕೆ।**
**ಬಿ.ಜಿ.ಎಸ್ ಕಾಲೇಜಿನಲ್ಲಿ ಸ್ವಸ್ತಿ ಕಾರ್ಯಕ್ರಮ**




ರಾಮನಗರ: ಇದು ಚಂಚಲ ಮನಸ್ಸಿನ ವಯಸ್ಸು, ದೃಶ್ಯ ಮಾಧ್ಯಮಗಳ ಗೀಳಿಗೆ ಒಳಗಾಗುವ ವಯಸ್ಸು, ಆದರೆ ಈ ಗೀಳನ್ನು ಹಚ್ಚಿಕೊಂಡರೆ ಶಿಕ್ಷಣಾರ್ಜನೆಗೆ ತೊಂದರೆ, ಹೀಗಾಗಿ ವಿದ್ಯಾರ್ಥಿಗಳು ತಮ್ಮ ಮನಸ್ಸನ್ನು ಶಿಕ್ಷಣಾರ್ಜನೆಯ ಕಡೆ ಕೇಂದ್ರೀಕರಿಸಿಕೊಳ್ಳಬೇಕು ಎಂದು ಆದಿಚುಂಚನಗಿರಿ ವಿಜಯನಗರ ಶಾಕಾ ಮಠದ ಸೌಮ್ಯನಾಥ ಸ್ವಾಮೀಜಿ ಅವರು ವಿದ್ಯಾರ್ಥಿ ಸಮುದಾಯಕ್ಕೆ ಕರೆ ನೀಡಿದರು.

ಇಲ್ಲಿನ ಅರ್ಚಕರಹಳ್ಳಿಯ ಬಿಜಿಎಸ್ ಪದವಿಪೂರ್ವ ಕಾಲೇಜಿನಲ್ಲಿ 2026–27ನೇ ಶೈಕ್ಷಣಿಕ ವರ್ಷದ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಸ್ವಸ್ತಿ (ಪರಿಚಯಾತ್ಮಕ ಕಾರ್ಯಕ್ರಮ) ವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಗುರುಗಳ ಮಾರ್ಗದರ್ಶನದಲ್ಲಿ ಉತ್ತಮ ಶಿಕ್ಷಣ ಪಡೆದು ಉತ್ತಮ ಪ್ರಜೆಗಳಾಗಿ ಉನ್ನತ ಹುದ್ದೆಗಳನ್ನು ಅಲಂಕರಿಸಬೇಕು ಎಂದು ಅವರು ಹೇಳಿದರು.

ಈ ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಟ್ರಸ್ಟ್ನ ಡೀನ್ ಮಧುಸೂದನ್, ಬಿಜಿಎಸ್ ಮಹಾಲಕ್ಷ್ಮಿ ಲೇಔಟ್‌ನ ಪ್ರಾಂಶುಪಾಲರಾದ ಚರಣ್, ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಸುರೇಶ ಎಂ ಸಿ,ಬಿಜಿಎಸ್ ವರ್ಲ್ಡ್ ಶಾಲೆಯ ಪ್ರಾಂಶುಪಾಲರಾದ ಸುಮಾ ಕೊಂಡೂರು, ಐಎಂಎಸ್‌ಸಿ ಮುಖ್ಯಸ್ಥರಾದ ದಿನೇಶ್‌ರವರು, ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ಪೋಷಕರು ಭಾಗವಹಿಸಿದ್ದರು. ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಸಮಜ್ಞಾ ಆರ್ ಹೇರ್ಳೆ ಕಾರ್ಯಕ್ರಮ ನಿರೂಪಿಸಿದರು.

### ಗುರಿ ಇಲ್ಲದ ಜೀವನ, ಬ್ರೇಕಿಲ್ಲದ ವಾಹನದಂತೆ – ಶಿವರಾಮರೆಡ್ಡಿ

**ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯ ಕಾರ್ಯನಿರ್ವಹಣಾಧಿಕಾರಿ ಶಿವರಾಮರೆಡ್ಡಿಯವರು ಮಾತನಾಡುತ್ತಾ ಗುರಿ ಇಲ್ಲದ ಜೀವನ ಬ್ರೇಕಿಲ್ಲದ ವಾಹನ ದಂತೆ ಎಂಬ ಗಾದೆಯಂತೆ ಗುರಿ ದ್ಯೇಯ, ಶಿಸ್ತು, ಶ್ರದ್ದೆ, ಇಟ್ಟುಕೊಂಡು ಅಧ್ಯಯನ ಮಾಡಬೇಕು, ಭಗವಂತ ಸೃಷ್ಠಿ ಮಾಡುವಾಗ ಎಲ್ಲರನ್ನೂ ಒಂದೇ ರೀತಿ ಸೃಷ್ಠಿ ಮಾಡುತ್ತಾನೆ ಆದರೆ ಬಡವರಾಗಿ ಜೀವನ ಮಾಡು ವುದು ನಮ್ಮ ಕೈಯಲ್ಲಿದೆ, ಎಂದು ವಿದ್ಯಾರ್ಥಿಗಳಿಗೆ, ಪೋಷಕರಿಗೆ,ಹಾಗೂ ಉಪನ್ಯಾಸಕರಿಗೆ ಕಿವಿಮಾತು ಹೇಳಿದರು.**

### ಉತ್ತಮ ವ್ಯಕ್ತಿಯಾಗುವುದು, ಉತ್ತಮ ಅಂಕಗಳಿಸುವಷ್ಟೇ ಮುಖ್ಯ

**ಎ.ಟಿ.ಶಿವರಾಮು**

**ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಎ.ಟಿ. ಶಿವರಾಮುರವರು ಮಾತನಾಡುತ್ತಾ ವಿದ್ಯಾರ್ಥಿಗಳು ಅಂಕ ಗಳಿಸುವುದು ಅಷ್ಟೇ ಮುಖ್ಯವಲ್ಲ ಸಮಾಜದಲ್ಲಿ ಒಳ್ಳೆ ವ್ಯಕ್ತಿತ್ವ ಬೆಳೆಸಿಕೊಂಡು ಒಳ್ಳೆ ವ್ಯಕ್ತಿಯಾಗಿ ಬಾಳುವುದು ಅಷ್ಟೇ ಮುಖ್ಯ ಹಾಗೂ ವಿದ್ಯಾರ್ಥಿಗಳು ಸಮಸ್ಯೆ ಎದುರಾದಾಗ ಬಗೆಹರಿಸಿಕೊಳ್ಳುವ ಕೌಶಲ್ಯ ಮಾರುಕಟ್ಟೆ ಜ್ಞಾನ ಬೆಳೆಸಿಕೊಳ್ಳಬೇಕೆಂದು ಹೇಳಿದರು. ಕಳೆದ ವರ್ಷದ ಸಿಇಟಿ, ನೀಟ್, ಜೆಇಇ,ಹಾಗೂ ಪಿಯು ಫಲಿತಾಂಶದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಇದೇ ವೇಳೆಯಲ್ಲಿ ಉತ್ತಮ ಫಲಿತಾಂಶ ಬರಲು ಕಾರಣರಾದ ಉಪನ್ಯಾಸಕರನ್ನು ಸಹ ಸನ್ಮಾನಿಸಲಾಯಿತು.**

# ವಿಶ್ವ ಪರಿಸರ ದಿನ ಆಚರಣೆ



ಚಾಮರಾಜನಗರ, ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ (ಎನ್ ಎಸ್‌ಎಸ್) ಘಟಕದ ವತಿಯಿಂದ ಇಂದು ವಿಶ್ವ ಪರಿಸರ ದಿನವನ್ನು ?ಪ್ರಕೃತಿಯಿಂದ ಪ್ರೇರಿತಗೊಂಡು ಉತ್ತಮ ಹವಾಮಾನಕ್ಕಾಗಿ ಹಾಗೂ ನಮ್ಮ ಭವಿಷ್ಯಕ್ಕಾಗಿ ಎಂಬ ಘೋಷವಾಕ್ಯದಡಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಡಿ. ಮಧು ಅವರು ಮಾತನಾಡಿ ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಪರಿಸರವನ್ನು ಬೆಳೆಸಿ ಉಳಿಸಿದರೆ ಉತ್ತಮ ವಾತಾವರಣ ನಿರ್ಮಾಣವಾಗುತ್ತದೆ. ತ್ಯಾಜ್ಯ ವಸ್ತುಗಳ ಸಮರ್ಪಕ ನಿರ್ವಹಣೆಗೆ ಎಲ್ಲರೂ ಮುಂದಾಗಬೇಕು. ಹೆಚ್ಚಿನ ಗಿಡಗಳನ್ನು ಬೆಳೆಸುವುದರಿಂದ ಪರಿಸರ ಮಾಲಿನ್ಯ ಕಡಿಮೆಯಾಗುವುದರ ಜೊತೆಗೆ ಅನೇಕ ರೋಗಗಳನ್ನು ತಡೆಗಟ್ಟಬಹುದು ಎಂದು ವಿದ್ಯಾರ್ಥಿಗಳಿಗೆ ಸಂದೇಶ ನೀಡಿದರು.

ಪರಿಸರ ಪ್ರೇಮಿ ಬೀರೇಶ್ ಅವರು ಮಾತನಾಡಿ ರಾಸಾಯನಿಕ ಔಷಧಿಗಳ ಅವಲಂಬನೆ ಕಡಿಮೆ ಮಾಡುವಲ್ಲಿ ಔಷಧೀಯ ಸಸ್ಯಗಳ ಪಾತ್ರ ಮಹತ್ವದ್ದಾಗಿದೆ. ಗಿಡಗಳನ್ನು ಬೆಳೆಸುವುದರಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯ ವೃದ್ಧಿಯಾಗುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಕನಿಷ್ಠ ಒಂದು ಗಿಡವನ್ನು ನೆಟ್ಟು ಪೋಷಿಸಬೇಕು. ಜಿಲ್ಲೆಯ ಸುತ್ತಮುತ್ತ ಬೆಳೆದಿರುವ ವಿವಿಧ ಔಷಧೀಯ ಹಾಗೂ ಉಪಯುಕ್ತ ಗಿಡಗಳ ಮಹತ್ವವನ್ನು ತಿಳಿಯಬೇಕು ಎಂದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ನಿರ್ದೇಶಕರಾದ ಪ್ರೊ ದೇವೇಂದ್ರ ಕುಮಾರ್, ಡಾ. ಪಿ.ಸಿ. ಶ್ರೀನಿವಾಸ್, ಡಾ. ಇಮ್ರಾನ್ ಖಾನ್, ಪ್ರೊ. ಚೈತ್ರ ಬನಸವಾಡಿ, ಡಾ. ಎಸ್. ಪ್ರದೀಪ್, ಡಾ. ಮನೀಲ್ ರಾಜ್, ಡಾ. ಸಂದೀಪ್, ಡಾ. ರವೀಂದ್ರ, ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಾಧಿಕಾರಿ ಹಾಗೂ ದೈಹಿಕ ಶಿಕ್ಷಣ ನಿರ್ದೇಶಕರಾದ ನಾಗೇಶ್, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ನಗರಸಭೆ ಕಚೇರಿಗೆ ಡಿಸಿ ಭೇಟಿ



ಚಾಮರಾಜನಗರ, ಜಿಲ್ಲಾಧಿಕಾರಿ ಶ್ರೀರೂಪ ಅವರು ಮಧ್ಯಾಹ್ನದ ಬಳಿಕ ಚಾಮರಾಜನಗರ ನಗರಸಭೆ ಕಚೇರಿಗೆ ದಿಢೀರ್ ಭೇಟಿ ನೀಡಿ ಕಚೇರಿಯ ಕಾರ್ಯನಿರ್ವಹಣೆ ಹಾಗೂ ಸಾರ್ವಜನಿಕರಿಂದ ಸ್ವೀಕರಿಸಲಾಗಿರುವ ಅರ್ಜಿಗಳ ವಿಲೇವಾರಿ ಪ್ರಗತಿ ಪರಿಶೀಲಿಸಿದರು.

ಪರಿಶೀಲನೆ ವೇಳೆ ಸಾರ್ವಜನಿಕರ ಅರ್ಜಿ ಗಳ ವಿಲೇವಾರಿ ನಿರೀಕ್ಷಿತ ಮಟ್ಟದಲ್ಲಿ ನಡೆ ಯದೇ, ಅನಗತ್ಯ ವಿಳಂಬವಾಗುತ್ತಿರುವುದು ಕಂಡುಬಂದ ಹಿನ್ನೆಲೆಯಲ್ಲಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಸಾರ್ವಜನಿಕರ ಅರ್ಜಿಗಳು ಮತ್ತು ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಬೇಕು. ಕಾಲಮಿತಿಯೊಳಗೆ ಅರ್ಜಿಗಳು ವಿಲೇವಾರಿ ಮಾಡಬೇಕು. ವಿಳಂಬ ಧೋರಣೆ ಸಹಿಸುವುದಿಲ್ಲ ಎಂದು ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ತಾಕೀತು ಮಾಡಿದರು. ಸಾರ್ವಜನಿಕರಿಗೆ ಸಮಯೋಚಿತ, ಪಾರದ ರ್ಶಕ ಹಾಗೂ ಗುಣಮಟ್ಟದ ಸೇವೆ ಒದಗಿಸುವುದು ಆಡಳಿತದ ಮೂಲ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಯಾವುದೇ ನಿರ್ಲಕ್ಷ್ಯ ವಹಿಸಿದರೆ ಗಂಭೀರ ಕ್ರಮ ತೆಗೆದುಕೊಳ್ಳಲಾ ಗುವುದೆಂದು ಜಿಲ್ಲಾಧಿಕಾರಿ ಎಚ್ಚರಿಕೆ ನೀಡಿದರು.

ನಗರಸಭೆ ಕಚೇರಿಯ ವಿವಿಧ ವಿಭಾಗಗಳಿಗೆ ತೆರಳಿ ಪರಿಶೀಲಿಸಿದರು. ನಗರಸಭೆ ಆಯುಕ್ತ ರಾದ ಪರಶುರಾಮ್ ಛಲವಾದಿ, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಪ್ರಕಾಶ್, ಪರಿಸರ ಎಂಜಿನಿಯರ್ ರೂಪ ಹಾಜರಿದ್ದರು.

**ಕಾರ್ಯವೈಖರಿ ಪರಿಶೀಲನೆ, ಅರ್ಜಿಗಳ ಶೀಘ್ರ ವಿಲೇವಾರಿಗೆ ತಾಕೀತು**

**ಪ್ರಕಾಶ್ ಬಸವನಪುರ ಅಭಿಮತ**

# ಒಂದು ಗಿಡ ಮುಂದಿನ ಪೀಳಿಗೆಗೆ ಅಮೂಲ್ಯ ಕೊಡುಗೆ

ರಾಮನಗರ : ಪ್ರತಿಯೊಬ್ಬರಲ್ಲಿ ಪರಿಸರ ಬಗ್ಗೆ ಕಾಳಜಿ ಮೂಡಿದಲ್ಲಿ ಹಸಿರು ಭಾರತ ನಿರ್ಮಾಣ ಸಾಧ್ಯ. ಪ್ರಧಾನಿ ನರೇಂದ್ರ ಮೋದಿ ಅವರ ಆಶಯದಂತೆ ಪ್ರತಿಯೊಬ್ಬರೂ ತಮ್ಮ ತಾಯಿಯ ಹೆಸರಿನಲ್ಲಿ ಗಿಡ ನೆಟ್ಟು ಪೋಷಣೆ ಮಾಡಬೇಕು. ಇಂದು ನಾವು ನೆಡುವ ಒಂದು ಗಿಡ ಮುಂದಿನ ಪೀಳಿಗೆಗೆ ನೀಡುವ ಅಮೂಲ್ಯ ಕೊಡುಗೆಯಾಗಿದೆ ಎಂದು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಬಸವನಪುರ ತಿಳಿಸಿದರು.

ತಾಲ್ಲೂಕಿನ ಜಯಪುರ ಬಳಿಯ ಲಕ್ಷ್ಮೀನರಸಿಂಹ ಸ್ವಾಮಿ ದೇವಾಲಯದ ಬಳಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ತಾಯಿಯ ಹೆಸರಿನಲ್ಲಿ ವೃಕ್ಷ ಅಭಿಯಾನ ಹಮ್ಮಿಕೊಳ್ಳಲಾಗಿತ್ತು. ಪ್ರಧಾನಿ ಮೋದಿ ಕರೆಯಂತೆ ಬಿಜೆಪಿ, ಭಾರತ ವಿಕಾಸ ಪರಿಷತ್, ಕನ್ನಡಪರ ಸಂಘಟನೆಗಳ ಮುಖಂಡರು ತಾಯಿಯ ಹೆಸರಿನಲ್ಲಿ ಗಿಡ ನೆಡುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು.




ಈ ವೇಳೆ ಮಾತನಾಡಿದ ಪ್ರಕಾಶ್ ಬಸವನಪುರ, ಪರಿಸರ ಸಂರಕ್ಷಣೆ ಇಂದು ಎಲ್ಲರ ಹೊಣೆಗಾರಿಕೆಯಾಗಿದೆ ಮುಂದಿನ ಪೀಳಿಗೆಯ ಉಳಿವಿಗಾಗಿ ಪರಿಸರವನ್ನು ರಕ್ಷಿಸುವ ಅವಶ್ಯಕತೆ ನಮ್ಮ ಎದುರಿಗೆ ಇದೆ. ಪ್ರತಿಯೊಬ್ಬರೂ ತಮ್ಮ ತಾಯಿ ಹೆಸರಿನಲ್ಲಿ ಕನಿಷ್ಠ ಒಂದು ಗಿಡವನ್ನಾದರೂ ನೆಡುವುದರ ಮೂಲಕ ಪರಿಸರ ಸಂರಕ್ಷಣೆಗೆ ಮುಂದಾಗಬೇಕು. ಪರಿಸರ ರಕ್ಷಣೆ ಮಾಡುವುದು ಎಲ್ಲ ಗುರಿ, ಧ್ಯೇಯ, ಕರ್ತವ್ಯವಾಗಿರಬೇಕು ಎಂದರು.

ಪ್ರತಿ ವರ್ಷ ಜೂ.5ರಂದು ವಿಶ್ವ ಪರಿಸರ ದಿನಾಚರಣೆಯನ್ನು ಆಚರಣೆ ಮಾಡಲಾಗುತ್ತಿದೆ. ಇದು ಕೇವಲ ಆಚರಣೆಗೆ ಸೀಮಿತವಾಗಿರದೇ, ಪ್ರಕೃತಿಯನ್ನು ಸಂರಕ್ಷಿಸುವ ಕೆಲಸ ನಿರಂತರವಾಗಿ ಮಾಡಬೇಕಿದೆ. ಜಾಗತಿಕ ತಾಪಮಾನ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಮನುಷ್ಯ ತನ್ನ ದುರಾಸೆಯಿಂದ ಪ್ರಕೃತಿಯನ್ನು ನಾಶ ಪಡಿಸುತ್ತಿದ್ದಾನೆ. ಪರಿಸರವನ್ನು ಸಂರಕ್ಷಿಸಿದರೆ ಅವು ನಮ್ಮನ್ನು ರಕ್ಷಿಸುತ್ತದೆ ಎಂಬುದನ್ನು ಅರಿತುಕೊಳ್ಳಬೇಕಿದೆ. ಪರಿಸರದ ಉಳಿವಿಗಾಗಿ ಪ್ರತಿಯೊಬ್ಬರು ಒಂದೊಂದು ಗಿಡಗಳನ್ನು ನೆಟ್ಟು ಪೋಷಿಸುವ ಮೂಲಕ ಪರಿಸರದ ಸಂರಕ್ಷಣೆಗೆ ಕೊಡುಗೆ ನೀಡಬೇಕು ಎಂದರು.

ಬಿಜೆಪಿ ಮುಖಂಡರಾದ ಸಂಜಯ್ ಜೈನ್, ಬಿ.ಅಶೋಕ್ ಕುಮಾರ್ ಭಾರತ ವಿಕಾಸ ಪರಿಷತ್ತಿನ ಅಧ್ಯಕ್ಷ ರಾಜಣ್ಣ, ಪ್ರಮುಖರಾದ ರಾ.ಶಿ.ಬಸವರಾಜ್, ಕರವೇ ಎಂಎನ್‌ಆರ್ ರಾಜು, ವೆಂಕಟಪ್ಪ, ಗಂಗಾಧರ್, ವೆಂಕಟೇಶ್, ಕುಮಾರ್, ಶಿವಸ್ವಾಮಿ, ಮಹೇಶ್, ಲಾವಣ್ಯ ಭಾಗವಹಿಸಿದ್ದರು.

# ಶುದ್ಧ ಗಾಳಿ ಮಳೆಗಾಗಿ ಮರ ಬೆಳೆಸಿ: ದೊಡ್ಡಾಲಹಳ್ಳಿ ಪುಟ್ಟಸ್ವಾಮಿಗೌಡ



ರಾಮನಗರ: ಶುದ್ಧಗಾಳಿ, ಮಳೆಗಾಗಿ ಮರ ಬೆಳೆಸಬೇಕಿದೆ ಎಂದು ನಂಜಾಪುರ ಆರೋಗ್ಯ ಕೇಂದ್ರದ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ ದೊಡ್ಡಾಲಹಳ್ಳಿ ಪುಟ್ಟಸ್ವಾಮಿಗೌಡ ಕರೆ ನೀಡಿದರು.,

ತಾಲ್ಲೂಕಿನ ನಂಜಾಪುರ ಆರೋಗ್ಯ ಕೇಂದ್ರ ಹಾಗೂ ಬನ್ನಿಕುಪ್ಪೆ ಗ್ರಾಮ ಪಂಚಾಯತಿ ಸಹಯೋಗ ದಲ್ಲಿ ನಂಜಾಪುರ ಆರೋಗ್ಯ ಕೇಂದ್ರದ ಆವರಣದಲ್ಲಿ ನಡೆದ ಪರಿಸರ ದಿನಾಚರಣೆ ಕಾರ್ಯಕ್ರಮವನ್ನ ಉದ್ದೇಶಿ ಅವರು ಮಾತನಾಡಿದರು.

ಮನುಷ್ಯ ಶುದ್ದಗಾಳಿ ಅಂದರೆ ಆಮ್ಲಜನಕ ಇಲ್ಲದೆ ಕನಿಷ್ಠ ಪಕ್ಷ ಐದು ನಿಮಿಷಗಳ ಕಾಲ ಬದುಕಲು ಸಾಧ್ಯವಿಲ್ಲ, ಆಮ್ಲಜನಕ ನಮಗೆ ಗಿಡ, ಮರಗಳಿಂದಲೇ ದೊರಕಬೇಕಾಗಿದೆ. ಕೋವಿಡ್ ಸಮಯದಲ್ಲಿ ಆಮ್ಲಜನಕದ ಮಹತ್ವ ಏನು ಎಂದು ಜನಸಾಮಾನ್ಯರಿಗೂ ಅರಿವಾಗಿದೆ. ಮಳೆ ಆಗಬೇಕಾದರೂ ಮರಗಳೇ ಕಾರಣ. ಹೀಗಾಗಿ ಗಿಡ, ಮರಗಳನ್ನು ಕಾಪಾಡುವುದು ಎಲ್ಲರ ಕರ್ತವ್ಯ ಎಂದರು. ಬನ್ನಿಕುಪ್ಪೆ ಗ್ರಾಮ ಪಂಚಾಯತಿ ಕಾರ್ಯದರ್ಶಿ ಜಯರಾಮಯ್ಯ ಅವರು ಮಾತನಾಡಿ, ಪರಿಸರವನ್ನ ಉಳಿಸಿದರೆ ಅದು ನಮ್ಮನ್ನ ಉಳಿಸುತ್ತದೆ. ನಗರ, ಪಟ್ಟಣ, ಗ್ರಾಮ ಎನ್ನದೆ ಎಲ್ಲ ನಿವಾಸಿಗಳು ಪರಿಸರವನ್ನು ಉಳಿಸಬೇಕು ಎಂದರು.

ಇದೇ ವೇಳೆ ಆರೋಗ್ಯ ಕೇಂದ್ರದ ಪ್ರಥಮ ದರ್ಜೆ ಸಹಾಯಕ ವಿ.ಕೆ ಸುರೇಶ್, ಶುಶ್ರೂಷಾಧಿಕಾರಿ ಡಿ.ಬಿ.ಶಮಂತ, ಚೆಲುವರಾಜ್, ಗ್ರಾಮಪಂಚಾಯತಿ ಬಿಲ್ ಕಲೆಕ್ಟರ್ ಗಿರೀಶ್, ಕೆಂಗಲ್ಲಯ್ಯ , ವಾಟರ್ ಮೆನ್ ರೇಣುಕಾ, ಲೋಕೇಶ್, ವೆಂಕಟೇಶ್, ಕೆಂಪರಾಜ್ , ಸ್ವಚ್ಚತಾ ಸಿಬ್ಬಂದಿ ಗೀತಾ , ಸುಮಿತ್ರಾ ಗ್ರಾಮಸ್ಥರು ಹಾಜರಿದ್ದರು.

# ವಿಶ್ವ ಪರಿಸರ ದಿನಾಚರಣೆ



ಗುಂಡ್ಲುಪೇಟೆ:– ತಾಲೂಕಿನ ಬೇಗೂರಿನ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ಶಾಲಾ ಆವರಣದಲ್ಲಿ ಸಸಿಗಳನ್ನು ನೆಡುವ ಮೂಲಕ ಹಸಿರು ಪರಿಸರ ನಿರ್ಮಾಣದ ಸಂದೇಶ ಸಾರಲಾಯಿತು. ಪರಿಸರವನ್ನು ಉಳಿಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂದು ಶಿಕ್ಷಕರು ವಿದ್ಯಾರ್ಥಿಗಳಿಗೆ ತಿಳಿಸಿದರು. ಗಿಡ ಗಳನ್ನು ನೆಟ್ಟು ಬೆಳೆಸುವುದು ಮಾತ್ರವಲ್ಲದೆ ಅವುಗಳ ಸಂರಕ್ಷಣೆಯೂ ಅಗತ್ಯವೆಂದು ಕರೆ ನೀಡಲಾಯಿತು. ವಿದ್ಯಾರ್ಥಿಗಳು ಪರಿ ಸರ ಸಂರಕ್ಷಣೆಗೆ ಸಂಬಂಧಿಸಿದ ಪ್ರತಿಜ್ಞೆ ಸ್ವೀಕರಿಸಿ, ಪ್ರಕೃತಿಯನ್ನು ಕಾಪಾಡುವ ಸಂಕಲ್ಪ ಮಾಡಿದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಕವಿತಾ ಎಸ್,ನಿಲಯಪಾಲಕರಾದ ಮಂಜು ನಾಥ.ಹೆಚ್.ಎನ್, ಶಾಲಾ ಶಿಕ್ಷಕರಾದ ಮಹೇಂದ್ರ, ಭುವನೇಶ್ವರಿ, ಜ್ಯೋತಿ, ನಿರ್ಮಲ, ನಾಗಯ್ಯ,ಲೋಹಿತ್, ಕಿರಣ್ ರಾಜೇಶ್ ಹಾಗೂ ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು. ಈ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ಪರಿಸರದ ಬಗ್ಗೆ ಕಾಳಜಿ ಮತ್ತು ಜವಾಬ್ದಾರಿಯ ಮನೋಭಾವ ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸಿತು. ಹಸಿರು ಭವಿಷ್ಯ ನಿರ್ಮಾಣಕ್ಕೆ ಇಂತಹ ಕಾರ್ಯಕ್ರಮಗಳು ಪ್ರೇರಣೆಯಾಗಲಿವೆ

# ಉನ್ನತ ಪದವೀಧರರ ಮೇಲೆ ಜವಾಬ್ದಾರಿ ಹೆಚ್ಚು

**ಪ್ರೊ.ಬಿ.ರಮೇಶ್ ಅಭಿಮತ**




ಮೈಸೂರು : ದೇಶದ ಸುಮಾರು 150 ಕೋಟಿ ಜನಸಂಖ್ಯೆ ಪೈಕಿ ಕೇವಲ 4.46 ಕೋಟಿ ಜನರು ಮಾತ್ರ ಉನ್ನತ ಶಿಕ್ಷಣ ಪಡೆದಿದ್ದು, ಇಂದು ಸ್ನಾತಕೋತ್ತರ ಪದವಿ ಪಡೆದವರು ಅಪರೂಪದ ಗೌರವಾನ್ವಿತ ಪ್ರಜೆಗಳಾಗಿದ್ದು, ನಿಮ್ಮ ಮೇಲೆ ಈ ದೇಶವನ್ನು ಮುನ್ನಡೆಸುವ ಜವಾಬ್ದಾರಿ ಇದೆ ಎಂದು ಡಾ. ಮನಮೋಹನ್ ಸಿಂಗ್ ಬೆಂಗಳೂರು ಸಿಟಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ರಮೇಶ್ ಹೇಳಿದರು.

ಶನಿವಾರ ನಗರದ ಸಂತ ಫಿಲೋಮಿನಾ ಕಾಲೇಜಿನ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಸ್ನಾತಕೋತ್ತರ ವಿದ್ಯಾಥಿಗಳಿಗೆ ಪದವಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ಸ್ನಾತಕೋತ್ತರ ಪದವಿ ಪಡೆದ ಬಳಿಕವೇ ನಿಮ್ಮ ನಿಜವಾದ ಶಿಕ್ಷಣ ಆರಂಭವಾಗಿದೆ, ನಿಮಗೆ ಕಲಿಕೆಯ ಬಗ್ಗೆ ಈಗ ಸಾಕಷ್ಟು ತಿಳಿವಳಿಕೆ ಇದೆ. ಇನ್ನು ಮುಂದೆ ನೀವು ಕಲಿಯುತ್ತಲೇ ಇರಬೇಕು. ನಿಮ್ಮ ಮೇಲೆ ಈ ದೇಶದ ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿಯುವ,

ಸಮುದಾಯವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವ, ದೇಶವನ್ನು ಅಭಿವೃದ್ಧಿಪಡಿಸುವ ದೊಡ್ಡ ಜವಾಬ್ದಾರಿ ಇದೆ ಎಂದರು.

80 ವರ್ಷಗಳಿಂದ ಸುದೀರ್ಘ ಶೈಕ್ಷಣಿಕ ಸೇವೆಯನ್ನು ಮಾಡುತ್ತಿರುವ ಸಂತ ಫಿಲೋಮಿನಾ ಕಾಲೇಜು ಈ ದೇಶದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾಗಿದೆ. ಲಕ್ಷಾಂತರ ವಿದ್ಯಾರ್ಥಿಗಳು ಇಲ್ಲಿ ಕಲಿತು ಪದವಿ ಪಡೆದು, ದೇಶದ ನಾನಾ ಕಡೆ ವಿವಿಧ ಕೇಂದ್ರಗಳಲ್ಲಿ ತಮ್ಮ ಸೇವೆ ಸಲ್ಲಿಸುತ್ತಿದ್ದಾರೆ. ಪದವಿಧರರು, ತಮಗೆ ಶಿಕ್ಷಣ ಕೊಡಿಸಿದ ಪೋಷಕರು, ಶಿಕ್ಷಣ ಕಲಿಸಿ ಬದುಕುವ ದಾರಿ ತೋರಿದ ಶಿಕ್ಷಣ ಸಂಸ್ಥೆ, ಶಿಕ್ಷಕರನ್ನು, ಸಹಪಾಠಿಗಳನ್ನು ಮತ್ತು ಕಾಲೇಜಿನ ಇತರೆ ಸಿಬ್ಬಂದಿಗಳನ್ನು ಸದಾ ಕಾಲ ನೆನಪಿಸಿಕೊಳ್ಳಬೇಕು. ಬಿಡುವಾದಾಗ ಕಾಲೇಜಿಗೆ ಬಂದು ನಿಮ್ಮ ಅನುಭವವನ್ನು ಅಧ್ಯಾಪಕರೊಂದಿಗೆ ಮತ್ತು ಕಿರಿಯ ಗೆಳೆಯರೊಂದಿಗೆ ಹಂಚಿಕೊಳ್ಳಬೇಕು. ಇದರಿಂದ ನಿಮ್ಮ ಜ್ಞಾನ ವಿಕಾಸವಾಗುವುದರ ಜತೆಗೆ ಕಿರಿಯರಿಗೂ ನಿಮ್ಮ ಅನುಭವ ಮತ್ತು ಮಾರ್ಗದಶನ ನೀಡಿದಂತಾಗುತ್ತದೆ ಎಂದು ಸಲಹೆ ನೀಡಿದರು.

ವಿಕಾರ್ ಜನರಲ್, ಮೈಸೂರು ಧರ್ಮಪ್ರಾಂತ್ಯದ ಉಪಾಧ್ಯಕ್ಷ ಅತೀ ವಂದನೀಯ ರೆವ. ಎಂ. ಅಂತಪ್ಪ ವಿದ್ಯಾರ್ಥಿಗಳನ್ನು ಕುರಿತು ವಿಶೇಷವಾಗಿ ಮಾತನಾಡಿ ಹಲವಾರು ಉಪಯುಕ್ತ ಸಲಹೆಗಳನ್ನು ನೀಡಿದರು.

ಇದೇ ವೇಳೆ ಕಾಲೇಜಿನ 250 ಕ್ಕೂ ಹೆಚ್ಚು ಸ್ನಾತಕೋತ್ತರ ಪದವಿಧರರಿಗೆ ಪದವಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಡಾ.ರವಿ ಜೆ.ಡಿ.ಸಾಲ್ಡಾನ್ಹಾ, ಕಾಲೇಜಿನ ಆಡಳಿತ ಮುಖ್ಯಸ್ಥ ಡಾ.ಲೂರ್ದ್ ಪ್ರಸಾದ್ ಜೋಸೆಫ್, ಯುಯುಸಿಎಂಎಸ್ ಸಂಯೋಜಕಿ ಲಿಡಿಯಾ ಅಂಜಲಿ, ಪರೀಕ್ಷಾ ನಿಯಂತ್ರಕಿ ಡಾ.ರೀನಾ ಫ್ರಾನ್ಸಿಸ್, ವೈಸ್ ಪ್ರಿನ್ಸಿಪಲ್ ರೋನಾಲ್ಡ್ ಪ್ರಕಾಶ್ ಕುಟಿನ್ಹಾ, ಪ್ರಾಂಶುಪಾಲ ಡಾ.ರವಿ ಜೆ.ಡಿ. ಸಲ್ಡಾನ್ಹಾ, ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಸಂಯೋಜಕಿ ಡಾ.ನೂರ್ ಮುಬಾಶಿರ್, ಅಕಾಡೆಮಿಕ್ ಡೀನ್ ಆನಂದ್ ಉಪಸ್ಥಿತರಿದ್ದರು.

## ಅಕ್ರಮ ಪಡಿತರ ವಶ

ಚಾಮರಾಜನಗರ: ಗುಂಡ್ಲುಪೇಟೆ ಪಟ್ಟಣದ ಹಳೆಯ ಆಸ್ಪತ್ರೆಯ ಬಳಿ ಅಕ್ರಮವಾಗಿ ಪಡಿತರ ಸಾಗಿಸುತ್ತಿದ್ದ ವಾಹನದ ಮೇಲೆ ಪೊಲೀಸರು ದಾಳಿ ನಡೆಸಿ ವಾಹನ ಹಾಗೂ ಅಕ್ಕಿಯನ್ನು ವಶಪಡಿಸಿಕೊಂಡಿದ್ದಾರೆ.

ಗುಂಡ್ಲುಪೇಟೆ ಪೊಲೀಸ್ ಠಾಣೆಯ ಇನ್ಸ್ಪೆಕ್ಟರ್ ಎನ್.ಜಯಕುಮಾರ್ ಅವರಿಗೆ ಪಟ್ಟಣದ ಹಳೆ ಆಸ್ಪತ್ರೆಯ ಬಳಿ ಅಕ್ರಮವಾಗಿ ಪಡಿತರ ತುಂಬಿದ ವಾಹನ ಇರುವುದಾಗಿ ಬಂದ ಮಾಹಿತಿಯ ಮೇರೆಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಪಡಿತರ ಮತ್ತು ವಾಹನವನ್ನು ವಶಪಡಿಸಿಕೊಂಡಿರುತ್ತಾರೆ. ಬಳಿಕ ಗುಂಡ್ಲುಪೇಟೆ ತಾಹಸೀಲ್ದಾರ್ ಕಚೇರಿಯ ಆಹಾರ ನಿರೀಕ್ಷಕ ಎಂ.ಪಿ.ಅರವಿಂದ ಅವರು ಠಾಣೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಪಡತರ ಅಕ್ಕಿ ಎಂಬ ವರದಿ ನೀಡಿರುತ್ತಾರೆ.

ಮೇಲ್ಕಂಡ ವರದಿಯ ಆಧಾರದಂತೆ ವಾಹನದಲ್ಲಿ ತುಂಬಿದ್ದ 52,600 ರೂ, ಮೌಲ್ಯದ 35 ಕ್ವಿಂಟಾಲ್ ಪಡಿತರ ಅಕ್ಕಿಯನ್ನು ಹಾಗೂ ಅಕ್ಕಿ ತುಂಬಿದ್ದ ವಾಹನವನ್ನು ವಶಪಡಿಸಿಕೊಂಡು, ಪ್ರಕರಣ ದಾಖಲಿಸಿಕೊಂಡಿದ್ದಾರೆ

# ಸಮರ್ಪಕ ಸೌಲಭ್ಯಗಳ ತಲುಪಿಸಿ

## ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಯು.ನಿಸಾರ್ ಅಹಮದ್ ಕಟ್ಟುನಿಟ್ಟಿನ ಸೂಚನೆ



ಚಾಮರಾಜನಗರ: ವಿವಿಧ ಇಲಾಖೆಗಳಲ್ಲಿರುವ ಸೌಲಭ್ಯಗಳನ್ನು ನಿಯಮಾನುಸಾರ ಅಲ್ಪಸಂಖ್ಯಾತ ಸಮುದಾಯಗಳಿಗೆ ಸಮರ್ಪಕವಾಗಿ ತಲುಪಿಸು ವಂತೆ ಅಧಿಕಾರಿಗಳಿಗೆ ಕರ್ನಾಟಕ ರಾಜ್ಯ ಅಲ್ಪಸಂ ಖ್ಯಾತರ ಆಯೋಗದ ಅಧ್ಯಕ್ಷರಾದ ಯು. ನಿಸಾರ್ ಅಹಮದ್ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪ್ರಧಾನಮಂತ್ರಿಗಳ ಹೊಸ 15 ಅಂಶಗಳ ಕಾರ್ಯ ಕ್ರಮಕ್ಕೆ ಸಂಬಂಧಿಸಿದಂತೆ ಜಿಲ್ಲಾಮಟ್ಟದ ಅಧಿಕಾರಿ ಗಳೊಂದಿಗೆ ನಡೆದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

**ಶಿಕ್ಷಣ ಮತ್ತು ಕರಾರು ಮಾಹಿತಿ ಸಂಗ್ರಹ**

ಅಂಗನವಾಡಿ ಹಾಗೂ ಶಾಲೆಗಳಲ್ಲಿ ಎಷ್ಟು ಸಂಖ್ಯೆ ಯಲ್ಲಿ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಮಕ್ಕಳಿದ್ದಾರೆ ಎಂಬ ಕರಾರು ಮಾಹಿತಿಯನ್ನು ಕಡ್ಡಾ ಯವಾಗಿ ಸಂಗ್ರಹಿಸಬೇಕು. ಶಾಲೆ ಮತ್ತು ಅಂಗ ನವಾಡಿಗಳಿಗೆ ಮಕ್ಕಳು ದಾಖಲಾಗುತ್ತಿರುವ ಬಗ್ಗೆ ಹೆಚ್ಚಿನ ಮುತುವರ್ಜಿಯಿಂದ ಪರಿಶೀಲನೆ ನಡೆಸ ಬೇಕು. ಕಡ್ಡಾಯ ಶಿಕ್ಷಣ ಹಕ್ಕನ್ನು ಜಾರಿಗೊಳಿಸಿದ್ದು, ಅಲ್ಪಸಂಖ್ಯಾತರು ಶಿಕ್ಷಣದಿಂದ ವಂಚಿತರಾಗಬಾ ರದು. ಅಲ್ಲದೆ, ಶಾಲೆಗಳಲ್ಲಿ ಯಾವುದೇ ಕಾರಣಕ್ಕೂ ಶಿಕ್ಷಕರ ಕೊರತೆ ಎದುರಾಗಬಾರದು ಎಂದು ಅವರು ಎಚ್ಚರಿಸಿದರು.

**ಕಾರ್ಮಿಕ ಯೋಜನೆಗಳ ಜಾಗೃತಿ**

ಕಾರ್ಮಿಕ ಇಲಾಖೆಯಲ್ಲಿ ಕಾರ್ಮಿಕರಿಗೆ ಅನುಕೂಲ ವಾಗುವ ಸಾಕಷ್ಟು ಯೋಜನೆಗಳಿವೆ. ದೊಡ್ಡ ಸಂಖ್ಯೆಯಲ್ಲಿರುವ ಕಟ್ಟಡ ಕಾರ್ಮಿಕರು, ವಾಹನ ಚಾಲಕರು ಹಾಗೂ ಅಸಂಘಟಿತ ವಲಯಕ್ಕೆ ಸೇರಿದ ಕಾರ್ಮಿಕ ವರ್ಗದವರಿಗೆ ಸರ್ಕಾರದ ಯೋಜ ನೆಗಳು ಸದ್ಬಳಕೆಯಾಗಬೇಕಿದೆ. ಅಲ್ಪಸಂಖ್ಯಾತ ಸಮುದಾ ಯಕ್ಕೆ ಈ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸಿ, ಪ್ರಯೋಜನ ಪಡೆಯಲು ಸೌಲಭ್ಯ ಶಿಬಿರಗಳನ್ನು ಆಯೋಗದ ಸ್ಥಳೀಯ ಸದಸ್ಯರ ಸಹಕಾರ ಹಾಗೂ ಸಲಹೆ ಪಡೆದು ಆಯೋಜಿಸಬೇಕು. ಜನಸಮು ದಾಯ ಹೆಚ್ಚಿರುವ ಸ್ಥಳಗಳಲ್ಲಿಯೇ ಕಾರ್ಮಿಕ ಇಲಾಖೆಯ ಕಾರ್ಡುಗಳನ್ನು ವಿತರಿಸಿ ಸವಲತ್ತುಗ ಳನ್ನು ಪಡೆಯಲು ನೆರವಾಗಬೇಕು ಎಂದು ಅಧಿಕಾ ರಿಗಳಿಗೆ ನಿರ್ದೇಶನ ನೀಡಿದರು.

**ಗಣ್ಯರ ಉಪಸ್ಥಿತಿ**

ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿ ರ್ವಾಹಕ ಅಧಿಕಾರಿ ಮೋನಾ ರೋತ್, ಉಪ ಕಾರ್ಯದರ್ಶಿ ಶೃತಿ, ಡಿವೈಎಸ್ಪಿ ಸ್ನೇಹರಾಜ್, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಕಾರ್ಯದರ್ಶಿಗಳಾದ ಡಾ. ಮಾಜುದ್ದೀನ್ ಖಾನ್, ವಿಶೇಷ ಕರ್ತವ್ಯಾಧಿಕಾರಿ ಮುಜಿಬುಲ್ಲಾ ಜಫಾರಿ, ಆಯೋಗದ ನಾಮ ನಿರ್ದೇಶಿತ ಸದಸ್ಯರಾದ ಅಬ್ದುಲ್ ನವೀದ್, ನಾಗರತ್ನ ರಾಜ್, ಭಾಸ್ಕರ್ ಪಂಗಿರಾಜ್, ಡಾ.ಎಂ.ಎಸ್.ಮೊಹಮ್ಮದ್ ನೂರುದ್ದೀನ್, ಇಸಾನ್ ಜಾವೇದ್, ಝಿಶಾನ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಸುರೇಶ್, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಚಂದ್ರಪಾಟೀಲ್, ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿ ಗುಡ್ಡಪ್ಪ, ಲೀಡ್ ಬ್ಯಾಂಕ್ ವ್ಯವಸ್ಥಾಪಕಿ ಸುರೇಖಾ ಸೇರಿದಂತೆ ಇನ್ನಿತರ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

### ಬ್ಯಾಂಕ್ ಸಾಲ, ವಸತಿ ಯೋಜನೆಗಳ ತ್ವರಿತಗತಿ

ಬ್ಯಾಂಕುಗಳಲ್ಲಿ ಅಲ್ಪಸಂಖ್ಯಾತ ಫಲಾನುಭವಿಗಳಿಗೆ ಸಾಲ ನೀಡಲು ಹಿಂದೇಟು ಹಾಕಲಾಗುತ್ತಿದೆ ಎಂಬ ದೂರುಗಳು ಕೇಳಿಬರುತ್ತಿವೆ. ಇದುವರೆಗೆ ಎಷ್ಟು ಮಂದಿಗೆ ಸಾಲ ನೀಡಲಾಗಿದೆ ಎಂದು ಪ್ರಶ್ನಿಸಿದ ಅವರು, ವಿದ್ಯಾರ್ಥಿಗಳ ಶೈಕ್ಷಣಿಕ ಸಾಲದ ಅರ್ಜಿಗಳು ಬ್ಯಾಂಕುಗಳಲ್ಲೇ ಹಾಗೆಯೇ ಉಳಿದಿವೆ ಎಂಬ ದೂರುಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ಶೀಘ್ರವೇ ಸಾಲ ಸೌಲಭ್ಯಗಳನ್ನು ಒದಗಿಸಬೇಕು ಮತ್ತು ಎಷ್ಟು ಜನರಿಗೆ ಸಾಲ ವಿತರಿಸಲಾಗಿದೆ ಎಂಬ ನಿಖರ ಮಾಹಿತಿಯನ್ನು ತಮಗೆ ಕಳುಹಿಸಿಕೊಡುವಂತೆ ಆದೇಶಿಸಿದರು.

ಬೀದಿಬದಿ ವ್ಯಾಪಾರಿಗಳಿಗೆ ನೀಡಲಾಗುತ್ತಿರುವ ಸಾಲ ಸೌಲಭ್ಯವೂ ಅರ್ಹರೆಲ್ಲರಿಗೂ ಸಿಗಬೇಕು. ವಸತಿ ಸೌಕರ್ಯಗಳನ್ನು ಅನುಷ್ಠಾನಗೊಳಿಸುತ್ತಿರುವ ಇಲಾಖೆಗಳು ನಗರ, ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ತ್ವರಿತವಾಗಿ ಫಲಾನುಭವಿಗಳಿಗೆ ಯೋಜನೆಯನ್ನು ತಲುಪಿಸಬೇಕು. ಯಾವುದಾದರೂ ಸಮಸ್ಯೆಗಳಿದ್ದರೆ ಫಲಾನುಭವಿಗಳನ್ನು ಖುದ್ದು ಭೇಟಿ ಮಾಡಿ ಮನೆಗಳ ನಿರ್ಮಾಣ ಕಾರ್ಯವನ್ನು ಶೀಘ್ರ ಪೂರ್ಣಗೊಳಿಸಲು ಕ್ರಮ ವಹಿಸಬೇಕು ಎಂದರು.

### ಶಿಬಿರಗಳ ಆಯೋಜನೆಗೆ ಜಿಲ್ಲಾಧಿಕಾರಿ ಸಲಹೆ

ಇದೇ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಶ್ರೀರೂಪ ಅವರು, ಕಾರ್ಮಿಕ ಇಲಾಖೆಯ ಸೌಲಭ್ಯಗಳನ್ನು ಜನರಿಗೆ ತಲುಪಿಸಲು ಆಯಾ ತಾಲೂಕಿನಲ್ಲಿಯೇ ಶಿಬಿರಗಳನ್ನು ಏರ್ಪಡಿಸಬೇಕು. ಜನರಿಗೆ ಇಲಾಖೆಯಿಂದ ಆಗುವ ಅನುಕೂಲಗಳ ಬಗ್ಗೆ ವ್ಯಾಪಕವಾಗಿ ತಿಳಿಸಿಕೊಡಬೇಕು. ಅಧಿಕಾರಿಗಳು ಅಲ್ಪಸಂಖ್ಯಾತರ ಸಮುದಾಯಕ್ಕೆ ಇರುವ ಕಾರ್ಯಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರಬೇಕು ಎಂದು ಸೂಚಿಸಿದರು.

### ಸಕಾಲದಲ್ಲಿ ಸೌಲಭ್ಯಗಳ ವಿತರಣೆಗೆ ಸೂಚನೆ

ಸರ್ಕಾರದ ಸೌಲಭ್ಯಗಳನ್ನು ಅಲ್ಪಸಂಖ್ಯಾತ ಸಮುದಾಯದ ವರ್ಗಗಳಿಗೆ ಯಾವುದೇ ವಿಳಂಬ ಮಾಡದೇ ನೀಡಬೇಕು. ಅಲ್ಪಸಂಖ್ಯಾ ತರಿಗೆ ಯೋಜನೆಗಳನ್ನು ಹೇಗೆ ತಲುಪಿಸಲಾ ಗುತ್ತಿದೆ ಎಂಬುದರ ಬಗ್ಗೆ ಆಯೋಗವು ನಿರಂತರವಾಗಿ ಪರಿಶೀಲಿಸುತ್ತಿದೆ. ವಸತಿ, ಶಿಕ್ಷಣ, ಸಾಲ ಸೌಲಭ್ಯಗಳು, ಕೌಶಲ್ಯ ಅಭಿವೃದ್ಧಿ ಸೇರಿ ದಂತೆ ವಿವಿಧ ಇಲಾಖೆಗಳಿಂದ ನೀಡಬೇಕಿರುವ ಸವಲತ್ತುಗಳು ಕಾಲಮಿತಿಯೊಳಗೆ ಅಲ್ಪಸಂಖ್ಯಾತರಿಗೆ ಲಭ್ಯವಾಗಬೇಕು ಎಂದು ಅಧ್ಯಕ್ಷರು ಸ್ಪಷ್ಟಪಡಿಸಿದರು.

# ಗ್ರಾಮಸ್ಥರ ನಡುವೆ ಗಲಾಟೆ ಸ್ಥಗಿತ




ಗುಂಡ್ಲುಪೇಟೆ: ತಾಲ್ಲೂಕಿನ ಚನ್ನಾಜಯ್ಯನಹುಂಡಿ ಗ್ರಾಮದಲ್ಲಿ ಸರ್ವೆ ನಂ 138 ರಲ್ಲಿ ಒತ್ತುವರಿಯಾಗಿದ್ದ 18 ಎಕರೆ.38 ಗುಂಟೆ ಜಾಗವನ್ನು ಗ್ರಾಮದ ಅನೇ ಕರು ಒತ್ತುವರಿ ಮಾಡಿಕೊಂಡು ಜಮೀನು ಶೆಡ್ ನಿರ್ಮಿಸಿಕೊಂಡಿದ್ದಾರೆ ಇದನ್ನು ತೆರವುಗೊಳಿಸಿ ಎಂದು ಅರ್ಜಿ ನೀಡಿ ಅಳತೆ ಕಾರ್ಯ ನಡೆಸಲಾಗಿತ್ತು ಇದರಂತೆ ಗುರುವಾರ ಒತ್ತುವರಿ ಕಾರ್ಯ ಆರಂಭ ವಾಗಿತ್ತು ಅದರೆ ಒತ್ತುವರಿ ಮಾಡಿಕೊಂಡವರು ತೆರವು ಮಾಡಲು ಅವಕಾಶ ನಿಡುವುದಿಲ್ಲ ಪಟ್ಟು ಹಿಡಿದು ಕೈ ಕೈ ಮಿಲಾಯಿಸುವ ಹಂತ ತಲುಪಿತ್ತು ಹಾಗಾಗಿ ಸರ್ಕಲ್ ಇನ್ಸ್ ಪೆಕ್ಟರ್ ಜಯಕುಮಾರ ಮತ್ತು ತಹಶೀಲ್ದಾರ್ ಎಂ ಎಸ್ ತನ್ಮಯ್ ರವರು ಜನರನ್ನು ಸಮಾಧಾನಪಡಿಸಿ ಮತ್ತೊಂದು ದಿನ ಸಭೆ ಕರೆದು ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಇದಕ್ಕೆ ಕೆಲವರು ಒಪ್ಪದೆ ಮೂರು ತಿಂಗಳಿಂದ ಅರ್ಜಿ ನೀಡಿ ಸರ್ವೆ ಗುರುತು ಮಾಡಿದ್ದು ಇನ್ನೂ ತೆರವು ಮಾಡಲು ಮೀನಾವೇಷ ಯಾಕೆ ಕೆಲವರು ಒತ್ತುವರಿ ತೆರವುಮಾಡುವಂತೆ ಪಟ್ಟು ಹಿಡಿದರು.

ಕೆಲವರು ತೆರವು ಮಾಡಲು ಬಿಡಲ್ಲ ನಾವು ಅನೇಕ ವರ್ಷದಿಂದ ಇಲ್ಲಿ ಜಮೀನು ಮಾಡುತಿದ್ದೇವೆ, ಹಾಗೂ ಶೆಡ್ ನಿರ್ಮಿಸಿದ್ದೇವೆ ಎಂದು ಮಾತಿನ ಚಕ ಮುಕಿ ನಡೆಸಿದರು ನಂತರ ತಹಶೀಲ್ದಾರ್ ಇನ್ನೊಂದು ದಿನ ತೆರವು ಕಾರ್ಯದ ಬಗ್ಗೆ ಸಬೆ ನಡೆಸಲಾಗುವುದು ಮಾನವೀಯ ದೃಷ್ಟಿಯಿಂದ ಕಾಲಾವಕಾಶ ನೀಡಿ ನಂತರ ತೆರವು ಮಾಡುವುದಾಗಿ ತಿಳಿಸಿದರು. ಗ್ರಾಮದ ಮಲ್ಲು ಮಾತನಾಡಿ ಗ್ರಾಮಕ್ಕೆ ಗೋಮಾಳವಿಲ್ಲ, ಸ್ಮಶಾನ ವಿಲ್ಲ, ಆಟದ ಮೈದಾನ ವಿಲ್ಲ, ಸರ್ಕಾರಿ ಗೋಮಾಳ ವಶಪಡಿಸಿಕೊಂಡಿದ್ದರು, ತಹಶೀಲ್ದಾರ್ ತೆರವು ಮಾಡಲು ಆದೇಶ ಮಾಡಿ ಮತ್ತೆ ತಡೆ ಹಿಡಿದಿದ್ದಾರೆ ಇದು ಸರಿಯಲ್ಲ ಹತ್ತು ಜನರ ಅನುಕೂಲಕ್ಕಾಗಿ ಇಡೀ ಗ್ರಾಮಕ್ಕೆ ಅನುಕೂಲವಾಗುವುದನ್ನು ತಪ್ಪಿಸುತಿದ್ದಾರೆ ಎಂದು ಆರೋಪಿದರು. ಈ ಸಂದರ್ಭದಲ್ಲಿ ತಹಶೀಲ್ದಾರ್ ತನ್ಮಯ್, ಸರ್ಕಲ್ ಇನ್ಸ್ ಪೆಕ್ಟರ್ ಜಯಕುಮಾರ್, ರಾಜಸ್ವ ನಿರೀಕ್ಷಕ ,ಹಾಗೂ ಗ್ರಾಮ ಲೆಕ್ಕಾಧಿಕಾರಿ ಮತ್ತಿತರರಿದ್ದರು.

# ಅಕ್ರಮ ಪಡಿತರ ಅಕ್ಕಿ ವಶ




ಗುಂಡ್ಲುಪೇಟೆ: ಪಟ್ಟಣದ ಹಳೇ ಆಸ್ಪತ್ರೆ ಬಳಿ ಅಕ್ರಮ ಪಡಿತರ ತುಂಬಿದ ವಾಹನ ಇರುವುದಾಗಿ ಬಂದ ಮಾಹಿತಿ ಮೇರೆಗೆ ಪೊಲೀಸ್ ಠಾಣಾ ಹೆದ್ದಾರಿ ಗಸ್ತು ವಾಹನದ ಉಸ್ತುವಾರಿ ಅಧಿಕಾರಿಯವರಿಗೆ ಸ್ಥಳಕ್ಕೆ ಹೋಗಿ ಪರಿಶೀಲಿಸಲು ವೃತ್ತನಿರೀಕ್ಷಕ ಜಯಕುಮಾರ್ ಸೂಚಿಸಿದ ಮೇರೆಗೆ, ಸ್ಥಳಕ್ಕೆ ಹೋಗಿ ನೋಡಲಾಗಿ ಸ್ಥಳದಲ್ಲಿದ್ದ ಅಕ್ರಮ ಪಡಿತರ ಅಕ್ಕಿ ತುಂಬಿದ ಚೀಲಗಳು ಮತ್ತು ವಾಹನ ಸಮೇತ ವಶಪಡಿಸಿಕೊಳ್ಳಲಾಗಿದೆ.

ಶುಕ್ರವಾರ ಸಂಜೆ ಗುಂಡ್ಲುಪೇಟೆ ತಹಸೀಲ್ದಾರ್ ಕಛೇರಿಯ ಆಹಾರ ನಿರೀಕ್ಷಕರಾದ ಎಂ.ಪಿ.ಅರವಿಂದ ರವರು ಠಾಣೆಗೆ ಬೇಟಿ ನೀಡಿ ಪರಿಶೀಲಿಸಿ ಪಡಿತರ ಅಕ್ಕಿ ಎಂದು ನೀಡಿದ ವರದಿ ಸ್ವೀಕರಿಸಿ ವಾಹನದಲ್ಲಿ ತುಂಬಿದ್ದ 52,500/–ರೂ ಮೌಲ್ಯದ 35 ಕ್ವಿಂಟಲ್ ಪಡಿತರ ಅಕ್ಕಿಯನ್ನು ಹಾಗೂ ಕೆ.ಎ–09 ಡಿ–9933 ಅಶೋಕ್ ಲೇ ಲ್ಯಾಂಡ್ ಗೂಡ್ಸ್ ವಾಹನವನ್ನು ವಶಪಡಿಸಿಕೊಂಡು ಗುಂಡ್ಲುಪೇಟೆ ಪೊಲೀಸ್ ಠಾಣಾ ಮೊ. ನಂ: 174/2026 ರಲ್ಲಿ ಪ್ರಕರಣ ದಾಖಲಿಸಿ, ವಾಹನದ ಮಾಲೀಕರು, ಆರೋಪಿಯ ಪತ್ತೆ ಬಗ್ಗೆ ಮುಂದಿನ ಕ್ರಮಕೈಗೊಂಡಿದ್ದಾರೆ. ಈ ದಾಳಿ ಕಾರ್ಯಕ್ಕೆ ಎಸ್ಪಿ ಮುತ್ತುರಾಜು. ಎಂ, ರವರು ಪ್ರಶಂಸನೆ ವ್ಯಕ್ತಪಡಿಸಿ, ಮುಂದಿನ ದಿನಗಳಲ್ಲಿಯೂ ಸಹ ಇನ್ನೂ ಹೆಚ್ಚಿನ ಅಕ್ರಮಗಳನ್ನು ಪತ್ತೆ ಹಚ್ಚಿ ನಿಗ್ರಹಿಸುವಂತೆ ಸೂಚನೆಗಳನ್ನು ನೀಡಿದರು.

# ತನ್ವೀರ್ ಸೇಠ್‌ಗೆ ಸಚಿವ ಸ್ಥಾನಕ್ಕೆ ಆಗ್ರಹಿಸಿ ಪ್ರತಿಭಟನೆ




ಮೈಸೂರು ನಗರದ ಗಾಂಧಿನಗರದ ಡಾ.ಬಿ.ಆರ್ ಅಂಬೇಡ್ಕರ್ ಸರ್ಕಲ್ ನಲ್ಲಿ ವಾರ್ಡ್ ನಿವಾಸಿಗಳು ತನ್ವೀರ್ ಸೇಠ್ ಗೆ ಸಚಿವ ಸ್ಥಾನ ನೀಡಬೇಕೆಂದು ಪ್ರತಿಭಟನೆ ನಡೆಸಿದರು. ಈ ಸಂದರ್ಭ ಡಿಸಿಸಿ ಉಪಾಧ್ಯಕ್ಷ ಮಾದೇಗೌಡ,ವಿಶ್ವರಾಜ್ , ಸೌಖತ್ ಆಲಿ ಖಾನ್, ಲೋಕೇಶ್, ಜಗದೀಶ್, ರಾಜಪ್ಪ, ಕೃಷ್ಣ, ಆನಂದ್, ಮಹಮ್ಮದ್ ರಫಿ ಇಕ್ಬಾಲ್ ಮತ್ತಿತರರು ಇದ್ದರು.

**ಎನ್‌ಎಸ್‌ಎಸ್ ಘಟಕದಿಂದ ವಿಶ್ವ ಪರಿಸರ ದಿನಾಚರಣೆ**

# ಶ್ರಮದಾನದ ಮೂಲಕ ಪರಿಸರ ಜಾಗೃತಿ ಸಂದೇಶ



ಚಾಮರಾಜನಗರ, ಪರಿಸರ ದಿನಾಚರಣೆಯ ಅಂಗವಾಗಿ ಚಾಮರಾಜನಗರ ವಿಶ್ವವಿದ್ಯಾನಿಲಯದಲ್ಲಿ ಕುಲಪತಿಗಳಾದ ಪ್ರೊ. ಎಂ.ಆರ್. ಗಂಗಾಧರ್ ಹಾಗೂ ಕುಲಸಚಿವರಾದ ಪ್ರೊ. ಕೆ.ಎಂ. ಮಹದೇವನ್ ಸಮ್ಮುಖದಲ್ಲಿ ಅರ್ಥಪೂರ್ಣ ಹಾಗೂ ಪರಿಸರ ಸ್ನೇಹಿ ಕಾರ್ಯಕ್ರಮ ನಡೆಯಿತು.

ವಿಶ್ವವಿದ್ಯಾನಿಲಯದ ಆವರಣದಲ್ಲಿ ದೇಸಿ ತಳಿಯ ಗಿಡಗಳನ್ನು ನೆಡುವ ಮೂಲಕ ಪರಿಸರ ದಿನಾಚರಣೆಗೆ ಚಾಲನೆ ನೀಡಲಾಯಿತು. ಹಸಿರು ಪರಿಸರ ನಿರ್ಮಾಣ ಹಾಗೂ ಜೀವ ವೈವಿಧ್ಯ ಸಂರಕ್ಷಣೆಯ ಸಂದೇಶವನ್ನು ಸಾರುವ ಉದ್ದೇಶ ದಿಂದ ಗಿಡ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಗಿಡ ನೆಟ್ಟ ಬಳಿಕ ಎಲ್ಲಾ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆಯ ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಿದರು. ಪ್ಲಾಸ್ಟಿಕ್ ಮುಕ್ತ ಕ್ಯಾಂಪಸ್ ನಿರ್ಮಾಣ, ನೀರು ಹಾಗೂ ವಿದ್ಯುತ್ ಸಂರಕ್ಷಣೆ, ಹಸಿರು ಸಂಪತ್ತಿನ ವೃದ್ಧಿಗೆ ಬದ್ಧರಾಗಿರುವ ಸಂಕಲ್ಪವನ್ನು ಕೈಗೊಳ್ಳಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಕುಲಪತಿಗಳಾದ ಪ್ರೊ. ಎಂ.ಆರ್. ಗಂಗಾಧರ್ ಅವರು ಚಾಮರಾಜನಗರ ಜಿಲ್ಲೆಯು ಸಮೃದ್ಧ ಅರಣ್ಯ ಸಂಪತ್ತು ಮತ್ತು ಜೀವವೈವಿಧ್ಯತೆಯಿಂದ ಕೂಡಿದೆ. ವಿಶ್ವವಿದ್ಯಾನಿಲಯವನ್ನು ಮಾದರಿ ಹಸಿರು ಕ್ಯಾಂಪಸ್ ಆಗಿ ರೂಪಿಸುವ ಅಗತ್ಯವಿದ್ದು ಈ ಕಾರ್ಯಕ್ಕೆ ಎಲ್ಲರು ಕೈಜೋಡಿಸಬೇಕು ಎಂದರು.

ಕುಲಸಚಿವರಾದ ಪ್ರೊ ಕೆ.ಎಂ. ಮಹದೇವನ್ ಅವರು ಪರಿಸರ ಸ್ನೇಹಿ ಆಡಳಿತ ವ್ಯವಸ್ಥೆ, ಕಾಗದ ರಹಿತ ಕಚೇರಿ ಹಾಗೂ ಪ್ಲಾಸ್ಟಿಕ್ ಬಳಕೆ ನಿಯಂತ್ರಣದ ಮಹತ್ವವನ್ನು ವಿವರಿಸಿದರು. ಕಾರ್ಯಕ್ರಮದಲ್ಲಿ ಮೈಸೂರು ವಿ.ವಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಪ್ರೊ. ಎಂ. ನಂಜಯ್ಯ ಹೊಂಗನೂರು, ಚಾಮರಾಜನಗರ ವಿವಿ ಯ ಕನ್ನಡ ವಿಭಾಗದ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ ಕೃಷ್ಣಮೂರ್ತಿ ಹನೂರು, ಪ್ರಾಂಶುಪಾಲರಾದ ಥಿಯೋಡರ್ ಲೂಥರ್, ವಿಶ್ವವಿದ್ಯಾನಿಲಯದ ಎನ್.ಎಸ್.ಎಸ್. ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ. ಆರ್. ಮಹೇಶ್, ವಿವಿಧ ವಿಭಾಗಗಳ ಉಪನ್ಯಾಸಕರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ಎನ್.ಎಸ್.ಎಸ್. ಸ್ವಯಂ ಸೇವಕರು ಭಾಗವಹಿಸಿದ್ದರು.

# ಅವಶ್ಯಕತೆ ಆಧರಿಸಿ ಕ್ರಿಯಾಯೋಜನೆ ಸಿದ್ಧಪಡಿಸಲು ಸೂಚನೆ

ಮಂಡ್ಯ: 2026–27ನೇ ಸಾಲಿನ ತಾಲೂಕು ಪಂಚಾಯಿತಿ ಲಿಂಕ್ ಡಾಕ್ಯುಮೆಂಟ್ ಅನುದಾನದಡಿ ಬಿಡುಗಡೆಯಾಗುವ ಮೊತ್ತಕ್ಕೆ ಕ್ರಿಯಾಯೋಜನೆ ಸಿದ್ಧಪಡಿಸುವಾಗ, ಅತ್ಯಗತ್ಯ ಕಾಮಗಾರಿಗಳಿಗೆ ಮಾತ್ರ ಆದ್ಯತೆ ನೀಡಬೇಕು. ಅಲ್ಲದೆ, ಆಯಾ ಕಾಮಗಾರಿಗೆ ಎಷ್ಟು ಅನುದಾನದ ಅವಶ್ಯಕತೆಯಿದೆಯೋ ಅಷ್ಟನ್ನು ಮಾತ್ರ ನಿಗದಿಗೊಳಿಸಬೇಕು ಎಂದು ಜಿಲ್ಲಾ ಪಂಚಾಯಿತಿ ಸಿಇಒ ನಂದಿನಿ ಕೆ.ಆರ್. ಅವರು ಜಿಲ್ಲೆಯ ಎಲ್ಲಾ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.



**ಜಿಪಿಎಸ್ ಆಧಾರಿತ ಛಾಯಾಚಿತ್ರ ಕಡ್ಡಾಯ**

ಶನಿವಾರ ಜಿಲ್ಲಾ ಪಂಚಾಯಿತಿಯ ಕೆಸ್ವಾನ್ ಸಭಾಂಗಣದಲ್ಲಿ ನಡೆದ ವಿಡಿಯೋ ಸಂವಾದದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಕ್ರಿಯಾಯೋಜನೆಗೆ ಸೇರ್ಪಡೆ ಮಾಡುವ ಕಾಮಗಾರಿಗಳು ಯಾವ ಇಲಾ ಖೆಗೆ ಸೇರಿವೆಯೋ, ಆಯಾ ಇಲಾಖೆಯ ತಾಲೂಕು ಮಟ್ಟದ ಅಧಿಕಾರಿಗಳು ಖುದ್ದು ಸ್ಥಳ ಪರಿಶೀಲನೆ ನಡೆಸಬೇಕು. ಯಾವ ಘಟಕಾಂಶಕ್ಕೆ ಅನುದಾನದ ಅವಶ್ಯಕತೆ ಇದೆ ಎಂಬುದನ್ನು ಮನಗಂಡು, ಪ್ರಸ್ತುತ ಸ್ಥಿತಿಯ ಕುರಿತು ಜಿಪಿಎಸ್ ಆಧಾರಿತ ಛಾಯಾಚಿತ್ರವನ್ನು ಸಲ್ಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಅವರು ನಿರ್ದೇಶನ ನೀಡಿದರು.

**15ನೇ ಹಣಕಾಸು ಯೋಜನೆ ಮತ್ತು ಶಿಸ್ತು ಕ್ರಮದ ಎಚ್ಚರಿಕೆ**

15ನೇ ಹಣಕಾಸು ಯೋಜನೆಯಡಿ ಈವರೆಗೆ ಬಿಡುಗಡೆಯಾಗಿರುವ ಅನುದಾನದ ಪೈಕಿ ವೆಚ್ಚವಾಗದೆ ಉಳಿದಿರುವ ಮೊತ್ತ ಹಾಗೂ ಸದರಿ ಅನುದಾನಕ್ಕೆ ಸ್ವೀಕೃತವಾಗಿರುವ ಬಡ್ಡಿ ಮೊತ್ತವನ್ನು ಯೋಜನೆಯ ನಿಯಮಗಳನ್ವಯ ವೆಚ್ಚ ಮಾಡಲು ಅಗತ್ಯ ಕ್ರಮ ವಹಿಸುವಂತೆ ಸಿಇಒ ಸೂಚಿಸಿದರು. ಕಾಮಗಾರಿಯನ್ನು ಅನುಷ್ಠಾನಗೊಳಿಸುವಾಗ ನಿಯಮಗಳನ್ನು ಪಾಲಿಸದಿದ್ದಲ್ಲಿ ಅಥವಾ ಕಾಮಗಾರಿಯಲ್ಲಿ ಯಾವುದೇ ರೀತಿಯ ಲೋಪದೋಷಗಳು ಉಂಟಾದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನೇ ನೇರವಾಗಿ ಹೊಣೆಗಾರರನ್ನಾಗಿಸಿ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಅವರು ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದರು.

**ತೆರಿಗೆ ವಸೂಲಾತಿಗೆ ವೇಗ ಮತ್ತು ಅಧಿಕಾರಿಗಳ ಉಪಸ್ಥಿತಿ**

2026–27ನೇ ಸಾಲಿನ ಬೇಡಿಕೆಗೆ ಅನುಗುಣವಾಗಿ ತೆರಿಗೆ ವಸೂಲಾತಿಯನ್ನು ತ್ವರಿತಗೊಳಿಸುವಂತೆ ಎಲ್ಲಾ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚನೆ ನೀಡಿದರು. ಪ್ರಸಕ್ತ ಸಾಲಿನ ಬೇಡಿಕೆಯ ಶೇಕಡ 10ರಷ್ಟು ಮೊತ್ತವನ್ನು ಪ್ರತೀ ತಿಂಗಳು ವಸೂಲಿ ಮಾಡುವ ಗುರಿ ನಿಗದಿಪಡಿಸಿಕೊಂಡು ಪ್ರಗತಿ ಸಾಧಿಸಬೇಕು ಎಂದು ತಾಕೀತು ಮಾಡಿದರು. ಈ ವಿಡಿಯೋ ಸಂವಾದ ಸಭೆಯಲ್ಲಿ ಜಿಲ್ಲಾ ಪಂಚಾಯಿತಿಯ ಉಪಕಾರ್ಯದರ್ಶಿ (ಆಡಳಿತ) ಶಿವಲಿಂಗಯ್ಯ, ಉಪಕಾರ್ಯದರ್ಶಿ (ಅಭಿವೃದ್ಧಿ) ಲಕ್ಷ್ಮಿ, ಮುಖ್ಯ ಯೋಜನಾಧಿಕಾರಿ ಧನುಷ್, ಮುಖ್ಯ ಲೆಕ್ಕಾಧಿಕಾರಿ ಶ್ರೀನಿವಾಸ್ ನಾಯಕ್, ಸಹಾಯಕ ಯೋಜನಾಧಿಕಾರಿ ಶ್ರೀಹರ್ಷ, ಸಹಾಯಕ ಕಾರ್ಯದರ್ಶಿ ಬೋರೇಗೌಡ ಹಾಗೂ ಜಿಲ್ಲೆಯ ಎಲ್ಲಾ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಉಪಸ್ಥಿತರಿದ್ದರು.

## ನರೇಗಾ ಬಾಕಿ ಪಾವತಿ, ವಸತಿ ಯೋಜನೆಗಳ ಪ್ರಗತಿ

ಹಿಂದಿನ ಆರ್ಥಿಕ ವರ್ಷಗಳಲ್ಲಿ ಬಾಕಿ ಉಳಿಸಿಕೊಂಡಿರುವ ನರೇಗಾ ಯೋಜನೆಯ ಕಾಮಗಾರಿಗಳ ಸಾಮಗ್ರಿ ಮೊತ್ತ ಪಾವತಿಗೆ ಅನುದಾನ ಬಿಡುಗಡೆಯಾಗಿದೆ. ಈ ಅನುದಾನವನ್ನು ಜೇಷ್ಠತೆಯ ಆಧಾರದ ಮೇಲೆ ತೀರುವಳಿಗೊಳಿಸಲು ತಿಳಿಸಲಾಗಿದ್ದು, ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳು ಮೂರು ದಿನಗಳ ಒಳಗಾಗಿ ಬಿಡುಗಡೆಯಾಗಿರುವ ಅನುದಾನದ ಲಭ್ಯತೆಗೆ ಅನುಗುಣವಾಗಿ ಬಿಲ್ಲುಗಳನ್ನು ಸಿದ್ಧಪಡಿಸಿ ಖಜಾನೆಗೆ ಸಲ್ಲಿಸಬೇಕು ಎಂದು ಹೇಳಿದರು. ಇದರ ಜೊತೆಗೆ, ವಿವಿಧ ವಸತಿ ಯೋಜನೆಗಳಡಿ ಮಂಜೂರಾಗಿರುವ ಮನೆಗಳ ಪೈಕಿ ಇನ್ನೂ ಪ್ರಾರಂಭವಾಗದಿರುವ ಮನೆಗಳನ್ನು ಸರ್ಕಾರದ ನಿರ್ದೇಶನಗಳನ್ವಯ ರದ್ದುಪಡಿಸಲು ಕ್ರಮ ವಹಿಸಬೇಕು ಹಾಗೂ ಪ್ರಗತಿಯಲ್ಲಿರುವ ಮನೆಗಳನ್ನು ಜೂನ್ ತಿಂಗಳ ಅಂತ್ಯದೊಳಗಾಗಿ ಕಡ್ಡಾಯವಾಗಿ ಪೂರ್ಣಗೊಳಿಸಬೇಕು ಎಂದು ತಿಳಿಸಿದರು. ನಿವೇಶನ ರಹಿತರಿಗೆ ನಿವೇಶನ ಒದಗಿಸಲು ಅಗತ್ಯವಿರುವ ಭೂಮಿಯನ್ನು ಮಂಜೂರು ಮಾಡುವಂತೆ ಕಂದಾಯ ಇಲಾಖೆಗೆ ನಿಯಮಾನುಸಾರ ಪ್ರಸ್ತಾವನೆ ಸಲ್ಲಿಸಬೇಕು. ಈಗಾಗಲೇ ಲಭ್ಯವಿರುವ ಜಮೀನು ನಿವೇಶನ ಹಂಚಲು ಯೋಗ್ಯವಲ್ಲದಿದ್ದಲ್ಲಿ, ಆ ಬಗ್ಗೆ ವಿವರವಾದ ವರದಿ ಸಿದ್ಧಪಡಿಸಿ ಸಲ್ಲಿಸುವಂತೆ ಅವರು ಸೂಚಿಸಿದರು.



## ಚಿತ್ರಕಲೆ, ಪ್ರಬಂಧ ಸ್ಪರ್ಧೆ



ಚಾಮರಾಜನಗರ, ಕಾರ್ಮಿಕ ಇಲಾಖೆ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಶಿಕ್ಷಣ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಅಂಗವಾಗಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಚಿತ್ರಕಲೆ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಇಂದು ನಡೆಯಿತು.

ಚಾಮರಾಜನಗರ ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಶೆಟ್ಟಿ ಅವರು ಕಾರ್ಯಕ್ರಮ ಉದ್ಘಾಟಿಸಿ, ಸ್ಪರ್ಧಿಗಳಿಗೆ ಶುಭ ಹಾರೈಸಿದರು. ಬಾಲನ್ಯಾಯ ಮಂಡಳಿಯ ಸದಸ್ಯರಾದ ಗಂಗಾಧರ ಸ್ವಾಮಿ, ಶಾಲಾ ಶಿಕ್ಷಣ ಇಲಾಖೆಯ ಡಿ.ವೈ.ಪಿ.ಸಿ ಪ್ರಭಾ, ಹಿರಿಯ ಕಾರ್ಮಿಕ ನಿರೀಕ್ಷಕರಾದ ಪ್ರಸಾದ್, ಯೋಜನಾ ನಿರ್ದೇಶಕರಾದ ಮಹೇಶ್, ಹಿರಿಯ ಉಪನ್ಯಾಸಕರಾದ ಸುರೇಶ್ ಋಗ್ವೇದಿ, ಸಹಾಯವಾಣಿ ಜಿಲ್ಲಾ ಸಂಯೋಜಕರಾದ ಸಿದ್ದ ರಾಜು, ಕಾರ್ಮಿಕ ಇಲಾಖೆಯ ರಾಜೇಶ್ ಉಪಸ್ಥಿತರಿದ್ದರು. ಸ್ಪರ್ಧೆಯಲ್ಲಿ 150ಕ್ಕೂ ಹೆಚ್ಚು ಶಾಲಾ–ಕಾಲೇಜು ವಿದ್ಯಾರ್ಥಿಗಳು ಉತ್ಸಾಹದಿಂದ ಚಿತ್ರಕಲೆ ಹಾಗೂ ಪ್ರಬಂಧ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು.

# ವಿದ್ಯಾರ್ಥಿಗೊಂದು ಮರಯೋಗ

## ಸತ್ಯ ಸಾಯಿ ಗುರುಕುಲದಲ್ಲಿ ವಿನೂತನ ಪರಿಸರ ದಿನಾಚರಣೆ

### "ಮಕ್ಕಳೆಂಬ ಸಸಿಗೆ, ಮಾನವೀಯ ಮೌಲ್ಯಗಳು ಎಂಬ ನೀರೆರೆಯಬೇಕು" – ಅಧ್ಯಕ್ಷ ಗೌರವ್ ಅಭಿಮತ

ಮಂಡ್ಯ: ಜಿಲ್ಲೆಯ ಮಾರದೇವನಹಳ್ಳಿಯಲ್ಲಿ ಸ್ಥಾಪಿತವಾಗಿರುವ ಗುರುಕುಲ ಮಾದರಿಯ ಉಚಿತ ಶಿಕ್ಷಣ ಸಂಸ್ಥೆ ಶ್ರೀ ಸತ್ಯ ಸಾಯಿ ಶಾರದಾನಿಕೇತನದಲ್ಲಿ ವಿನೂತನವಾಗಿ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು.



'ವಿದ್ಯಾರ್ಥಿಗೊಂದು ಮರ' ಪರಿಕಲ್ಪನೆಯಡಿ, ಹೊಸದಾಗಿ ಆರನೇ ತರಗತಿಗೆ ದಾಖಲಾತಿ ಪಡೆದ ವಿದ್ಯಾರ್ಥಿಗಳು ಪ್ರತಿಯೊಬ್ಬರು ಒಂದೊಂದು ಗಿಡ ನೆಟ್ಟರು. ತಾವು ನೆಟ್ಟ ಗಿಡವನ್ನು ಪ್ರತಿದಿನ ವಿದ್ಯಾರ್ಥಿ ಗಳೇ ನೀರೆರೆದು ಪೋಷಿಸುತ್ತಾರೆ. ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಪೂರೈಸುವ ವೇಳೆ ಈ ಗಿಡ ಮರವಾಗಿ ಬೆಳೆದು ನಿಲ್ಲುತ್ತದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ?ಏಕ್ ಪೇಡ್ ಮಾ ಕೇ ನಾಮ್? ಉಪಕ್ರಮದಿಂದ ಪ್ರೇರಿತರಾಗಿ, ಸತ್ಯ ಸಾಯಿ ವಿದ್ಯಾ ಸಂಸ್ಥೆಯ ಅಧ್ಯಕ್ಷ ಗೌರವ್ ಎಂ. ಅವರು ಈ ಪರಿಕಲ್ಪನೆಗೆ ಚಾಲನೆ ನೀಡಿದರು.

ಹೊಂಗೆ, ಮಾವು, ಹಲಸು, ತೇಗ ಸೇರಿದಂತೆ ಹತ್ತಾರು ವಿವಿಧ ಜಾತಿಯ ಸಸಿಗಳನ್ನು ನೆಟ್ಟು ನೀರನ್ನು ಎರೆಯಲಾಯಿತು. ಈ ಗಿಡಗಳು ಮಕ್ಕಳ ಜತೆ ಬೆಳೆದು ನೆರಳು, ಹಣ್ಣುಗಳನ್ನು ನೀಡುತ್ತಾ ಜನೋಪಯೋಗಿಯಾಗುತ್ತದೆ.



ಚಿಕ್ಕಬಳ್ಳಾಪುರದ ಮುದ್ದೇನಹಳ್ಳಿಯ ಗುರುಕುಲ ಲೋಕಸೇವಾ ಸಂಸ್ಥೆಯ ಅಧೀನದ ಈ ಶಾಲೆಯಲ್ಲಿ ವಸತಿ ಸಹಿತ ಉಚಿತ ಶಿಕ್ಷಣ ನೀಡಲಾಗುತ್ತಿದ್ದು, 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಈ ಸಂದರ್ಭದಲ್ಲಿ ಮಾತನಾಡಿದ ಅವರು, ?ಮಕ್ಕಳು ಸಸಿಯಂತೆ. ಅವರಿಗೆ ಸುರಕ್ಷಿತವಾಗಿ ಶಿಸ್ತು ಎಂಬ ಕಟ್ಟೆ ಕಟ್ಟಿ, ಮಾನವೀಯ ಮೌಲ್ಯಗಳು ಎಂಬ ನೀರನ್ನು ಎರೆಯುವಾಗ, ಉತ್ತಮ ಚಾರಿತ್ರ್ಯ ಎಂಬ ಹೂವುಗಳು ಅರಳಿ, ಸಮಾಜ ಸೇವೆ ಮತ್ತು ಸಮರ್ಪಿತ ಜೀವನ ಎಂಬ ಹಣ್ಣುಗಳು ದೊರೆಯುತ್ತವೆ? ಎಂದರು.

ಈ ಕಾರ್ಯಕ್ರಮದಲ್ಲಿ ಸತ್ಯ ಸಾಯಿ ಶಾರದಾನಿಕೇತನ ಗುರುಕುಲದ ಶೈಕ್ಷಣಿಕ ವಿಭಾಗದ ಮುಖ್ಯಸ್ಥ ರಾಜು, ಚೇತನ್, ಹರ್ಷವರ್ಧನ್, ಶಿಕ್ಷಕ ಸಿಬ್ಬಂದಿಯಾದ ಕಾರ್ತಿಕ್ ಗೌಡ ಎಂ, ಮನು ಎಂ. ಸಿ. ಭಾಗವಹಿಸಿದ್ದರು.

## ಪರಿಷ್ಕರಣೆ ಕಾರ್ಯಕ್ಕೆ ಸಹಕರಿಸಿ

ಹನೂರು : ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ಯಶಸ್ಸಿಗೆ ಮತದಾರರು ಸಹರಿಸುವಂತೆ ಮತದಾರರ ನೊಂದಣಾಧಿಕಾರಿ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮುನಿರಾಜು ತಿಳಿಸಿದರು.

ಪಟ್ಟಣದ ಲೋಕೋಪಯೋಗಿ ಇಲಾಖೆಯ ವಸತಿ ಗೃಹದಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನು (ಎಸ್.ಐ.ಆರ್) ಹನೂರು ತಾಲೂಕಿನಲ್ಲಿಯೂ ಕೈಗೊಳ್ಳಲಾಗುತ್ತಿದೆ ಎಂದರು.

ಮತದಾರರ ಪಟ್ಟಿ ಸಿದ್ದಪಡಿಸುವಿಕೆಯಲ್ಲಿ ಮತದಾರರ ಪಟ್ಟಿಯಲ್ಲಿ ಎಲ್ಲ ಅರ್ಹ ನಾಗರಿಕರು ಸೇರ್ಪಡೆಗೊಂಡಿರುವುದನ್ನು ಹಾಗೂ ಅರ್ಹರು ಮತದಾರರ ಪಟ್ಟಿಯಿಂದ ಕೈಬಿಡದಿರುವುದನ್ನು ಖಚಿತಪಡಿಸಿಕೊಳ್ಳಲು, ಮುಕ್ತ, ನಿಷ್ಪಕ್ಷಪಾತ ಚುನಾವಣೆ ನಡೆಸಲು ಮತದಾರರ ಪಟ್ಟಿಯ ವಿಶ್ವಾರ್ಹತೆಯನ್ನು ಕಾಪಾಡಿಕೊಳ್ಳುವುದು ಅತ್ಯಂತ ಅಗತ್ಯವಾಗಿರುವ ಹಿನ್ನೆಲೆಯಲ್ಲಿ ಚುನಾವಣಾ ಆಯೋಗವು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ನಡೆಸುತ್ತಿದೆ ಎಂದು ಹೇಳಿದರು.

ಚುನಾವಣಾ ಆಯೋಗದ ಮಾರ್ಗಸೂಚಿಗಳಿಗೆ ಅನುಗುಣವಾಗಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಮತ್ತು ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ಮಾನ್ಯತೆ ಪಡೆದ ಎಲ್ಲ ರಾಜಕೀಯ ಪಕ್ಷಗಳು ಪ್ರತಿ ಮತಗಟ್ಟೆಗೆ ಬೂತ್ ಮಟ್ಟದ ಏಜೆಂಟರನ್ನು ನೇಮಿಸಲು ಕೋರಲಾಗಿದೆ ಎಂದು ಕ್ಷೇತ್ರದ ಮತದಾರರ ನೊಂದಣಾಧಿಕಾರಿ ಮುನಿರಾಜು ತಿಳಿಸಿದರು. ಹನೂರು ತಾಲೂಕು ತಹಶೀಲ್ದಾರ್ ಚೈತ್ರ, ಉಪ ತಹಶೀಲ್ದಾರ್ ಸುರೇಖಾ,ಚುನಾವಣೆ ಶಾಖೆಯ ಲೋಕೇಶ್ ಹಾಗೂ ಸಿಬ್ಬಂದಿಗಳು ಪತ್ರಿಕಾ ಗೋಷ್ಠಿಯಲ್ಲಿ ಇದ್ದರು.



## ಸೇತುವೆ ನಿರ್ಮಾಣಕ್ಕೆ ಭೂಮಿಪೂಜೆ



ಹನೂರು :– ಪಟ್ಟಣದ ಸ್ವಾಮಿ ಹಳ್ಳದಲ್ಲಿ 35 ಲಕ್ಷ ವೆಚ್ಚದಲ್ಲಿ ಸೇತುವೆ ನಿರ್ಮಾಣ ಕಾರ್ಯಕ್ಕೆ ಕ್ಷೇತ್ರದ ಶಾಸಕ ಎಂ ಆರ್ ಮಂಜುನಾಥ್ ರವರು ಭೂಮಿ ಪೂಜೆ ನೆರವೇರಿಸಿ. ಮಾತನಾಡಿದರು.

ಜಿಲ್ಲಾ ವಿಪತ್ತು ನಿರ್ವಹಣ ಯೋಜನೆಯ ಅನುದಾನ 25 ಲಕ್ಷ ಹಾಗೂ ಶಾಸಕರ ವಿಶೇಷ ಅನುದಾನದಲ್ಲಿ 10 ಲಕ್ಷ ಒಟ್ಟು 35 ಲಕ್ಷದಲ್ಲಿ ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಹನೂರು ಪಟ್ಟಣದ ಸ್ವಾಮಿ ಹಳ್ಳಕ್ಕೆ ಸೇತುವೆ ನಿರ್ಮಾಣ ಕಾರ್ಯಕ್ಕೆ ಇಂದು ಸಮಯ ಕೂಡಿ ಬಂದಿದೆ ಕಾಮಗಾರಿ ಗುಣಮಟ್ಟದಿಂದ ಕೂಡಿರಲಿ ತ್ವರಿತಗತಿಯಲ್ಲಿ ಕಾಮಗಾರಿ ಸಾಗಲಿ ಜಮೀನುಗಳಿಗೆ ತೆರಳುವ ರೈತರಿಗೆ ಅನುಕೂಲವಾಗಲಿದೆ ಎಂದರು.

**ಮುಂದಿನ ದಿನಗಳಲ್ಲಿ ರಸ್ತೆ ಅಭಿವೃದ್ಧಿಗೆ ಕ್ರಮ**

ಸೇತುವೆ ಕಾಮಗಾರಿ ನಡೆಯಲಿರುವುದರಿಂದ ಈ ಭಾಗದಲ್ಲಿ ಇರುವ ರೈತರ ಜಮೀನುಗಳಿಗೆ ತೆರಳುವ ರಸ್ತೆ ಸಹ 30 ಅಡಿ ರೈತರು ಬಿಟ್ಟರೆ ಉತ್ತಮವಾದ ರಸ್ತೆ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದು ಜೊತೆಗೆ ಈ ಭಾಗದಲ್ಲಿ ನೂರಾರು ಎಕರೆ ಜಮೀನು ಇರುವುದರಿಂದ ರೈತರು ಮಳೆಗಾಲದಲ್ಲಿ ಓಡಾಡಲು ತುಂಬಾ ಕಷ್ಟಕರ ಆಗಿರುವುದರಿಂದ ಉತ್ತಮವಾದ ಸೂಸರ್ಜಿತವಾದ ರಸ್ತೆ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ನೆರೆದಿದ್ದ ರೈತರಿಗೆ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮುಖಂಡ ರಾದ, ರಾಜೂಗೌಡ, ಮಂಜೇಶ್ ಗೌಡ,ಶಿವರಾಮ, ರಾಜು ನಾಯ್ಡು, ರಾಮು ನಾಯ್ಡು, ಮಲ್ಲಣ್ಣ, ಸಿದ್ದರಾಜು, ಅನಂತು, ಮಹೇಶ್ ನಾಯಕ,ರಾಜೇಂದರ್, ವೆಂಕಟೇಶ್ ಡಾಬಾ, ನಿಂಗ್ ಶೆಟ್ಟಿ, ಡಿ ಕೆ ರಾಜು, ದೇಸಿಗೌಡ,ಎಸ್, ಆರ್ ಮಹದೇವ್,ನಟರಾಜು ಗೌಡ, ಅಮೀನ್, ವೆಂಕಟೇಶ್,ಕೆ. ಆರ್ ಡಿ ಐ ಎಲ್ ಇಂಜಿನಿಯರ್ ಕಾರ್ತಿಕ್,ಗುತ್ತಿಗೆದಾರರಾದ ರಾಜೇಂದ್ರ ಪ್ರಸಾದ್ ಇನ್ನಿತರರು ಉಪಸ್ಥಿತರಿದ್ದರು.

## ಅರಣ್ಯ ಇಲಾಖೆ ಭದ್ರತಾ ವೈಫಲ್ಯ



ಚಾಮರಾಜನಗರ, ಗುಂಡ್ಲುಪೇಟೆ ಪೊಲೀಸ್ ಠಾಣೆಯ ರೌಡಿ ಶೀಟರ್ ಪಟ್ಟಿಯಲ್ಲಿರುವ ಸತೀಶ್ (ಹಂಗಳ ಮಹದೇವಪ್ರಸಾದ್) ಎಂಬಾತ ತನ್ನ ಸಂಗಡಿಗರಾದ ಗಂಗಾಧರ್ ಹಾಗೂ ಚೇತನ್ ಅವರೊಂದಿಗೆ ಮದ್ದೂರು ವಲಯದ ಹುಲಿಕಟ್ಟೆ ಪ್ರದೇಶದಲ್ಲಿರುವ ಕಳ್ಳಬೇಟೆ ತಡೆ ಶಿಬಿರ ಸಮೀಪ ಮದ್ಯ ಸೇವಿಸಿ ಪಾರ್ಟಿ ನಡೆಸಿದ್ದಾನೆ ಎನ್ನಲಾಗಿದೆ. ಈ ಸಂಬಂಧದ ಕೆಲವು ಛಾಯಾಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿವೆ.

ಸಾಮಾನ್ಯವಾಗಿ ಸಾರ್ವಜನಿಕರ ಪ್ರವೇಶಕ್ಕೆ ನಿರ್ಬಂಧವಿರುವ ಅರಣ್ಯ ಪ್ರದೇಶದಲ್ಲಿ, ಅದರಲ್ಲೂ ಕಳ್ಳಬೇಟೆ ತಡೆ ಶಿಬಿರದ ಸಮೀಪ ಇಂತಹ ಚಟುವಟಿಕೆಗಳು ನಡೆದಿರುವುದು ಅರಣ್ಯ ಇಲಾಖೆಯ ಭದ್ರತಾ ವೈಫಲ್ಯವನ್ನು ಬಿಂಬಿಸುತ್ತದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ವನ್ಯಜೀವಿಗಳ ಮುಕ್ತ ಸಂಚಾರ ವಿರುವ ಸೂಕ್ಷ್ಮ ಪ್ರದೇಶಗಳಲ್ಲಿ ಕಟ್ಟುನಿಟ್ಟಿನ ನಿಗಾವಹಿಸ ಬೇಕಾದ ಅಧಿಕಾರಿಗಳು ಇಂತಹ ಘಟನೆಗಳನ್ನು ತಡೆಯು ವಲ್ಲಿ ವಿಫಲರಾಗಿದ್ದಾರೆ ಎಂಬ ಟೀಕೆಗಳು ವ್ಯಕ್ತವಾಗಿವೆ.

# ಓ ವಿಧಿಯೇ ನೀನೆಷ್ಟು ಕ್ರೂರಿ

**ನಮ್ಮೂರಿನ ಪುರೋಹಿತರ ಮಗಳು ಶ್ರದ್ಧಾ,**
**ಅಪ್ಪ ಅಮ್ಮನ ಮುದ್ದು ಜೀವ,**
**ಅಪ್ಪ ಶ್ರೀಧರ ಶಾಸ್ತ್ರೀ ಅಮ್ಮ ವಿಶಾಲಕ್ಷಿ,**
**ಅಪ್ಪ ವೃತ್ತಿಯಲ್ಲಿ ಪುರೋಹಿತರಾಗಿದ್ದರು ಶ್ರೀಮಂತ ಮನೆತನ, ಅಪ್ಪ ಎಂದರೆ ಮಗಳಿಗೆ**
**ಪಂಚ ಪ್ರಾಣ,**



ಶ್ರದ್ಧಾಳಿಗೆ ಸಣ್ಣ ವಯಸ್ಸಿನಿಂದಲೇ ಶಿಕ್ಷಣ, ನೃತ್ಯ, ಸಂಗೀತ, ಸಾಹಿತ್ಯ ಕ್ಷೇತ್ರದಲ್ಲಿ ಅಪಾರವಾದ ಆಸಕ್ತಿ, SSLC ಯಲ್ಲಿ ಜಿಲ್ಲೆಗೆ ಅತೀ ಹೆಚ್ಚು ಅಂಕ ಪಡೆದು ಉತ್ತೀರ್ಣಳಾಗಿದ್ದಳು, ನಂತರ puc ವಿದ್ಯಾಭ್ಯಾಸಕ್ಕೆ ಬೆಂಗಳೂರಿನ ತನ್ನ ತಂಗಿಯ ಮನೆಯಲ್ಲಿ ಇರಿಸಿ ಓದಿಸಲು ಶಾಸ್ತ್ರೀಗಳು ತೀರ್ಮಾನಿಸಿದರು.

ಅವರ ಆಣತಿಯಂತೆ ಅಪ್ಪನನ್ನು ಬಿಟ್ಟು ಒಂದು ದಿನವೂ ಬಿಟ್ಟಿರದಿದ್ದ ಶ್ರದ್ಧಾ,ಒಲ್ಲದ ಮನಸ್ಸಿನಿಂದ ಅಪ್ಪನ ಮೇಲಿನ ವಿಶ್ವಾಸಕ್ಕೆ ಬೆಲೆ ಕೊಟ್ಟು ಬೆಂಗಳೂರು ಸೇರಿದಳು,

PUCಯಲ್ಲಿ ಅತ್ಯುನ್ನತ ಅಂಕಗಳಿಸಿ ನಂತರ ಬಿಕಾಂ, ಎಂಕಾಂ ಮುಗಿಸಿ, ಪ್ರತಿಷ್ಠಿತ ಕಾಲೇಜಿನಲ್ಲಿ ಉಪನ್ಯಾಸಕಿಯಾದಳು, ನಂತರ ಶ್ರೀಧರ ಶಾಸ್ತ್ರೀಗಳಿಗೆ ಮಗಳಿಗೆ ಮದುವೆ ಮಾಡುವ ಚಿಂತೆ, ತನ್ನ ನೆಂಟರಿಷ್ಟರಿಗೆ ಹೇಳಿ ಬೆಂಗಳೂರಿನಲ್ಲಿ ಒಳ್ಳೇ ಕೆಲಸ ಮತ್ತು ಸ್ವಂತ ಮನೆ ಇರುವ ಹುಡುಗನ ನೋಡಲು ಹೇಳುದರು, ಆಗ ಸಿಕ್ಕಿದ್ದೇ ಶ್ರೀ ಹರ್ಷ ನೋಡಲು ಸ್ಫೂರದ್ರೂಪಿ ಒಳ್ಳೆಯ ವ್ಯಕ್ತಿತ್ವ ಒಳ್ಳೆಯ ಮನೆತನ ಹಾಗೂ ಪ್ರತಿಷ್ಠಿತ ಕಂಪನಿಯಲ್ಲಿ ಮ್ಯಾನೇಜರ್ ಕೆಲಸ ಮಾಡುತಿದ್ದ, ಜೊತೆಗೆ 2 ಸ್ವಂತ ಮನೆ ಇತ್ತು ಒಬ್ಬನೇ ಮಗ,

**ಆದರೂ ಯಾಕೋ**

ಶ್ರದ್ಧಾಳಿಗೆ ಒಳಗೊಳಗೇ ತಳಮಳ ಅಪ್ಪನಿಗೆ ಒಮ್ಮೆ ಕರೆದು ಈ ಹುಡುಗ ಬೇಡ ತನಗಿಂತ ತುಂಬ ಎತ್ತರ ಇರು ವರೆಂದು ಹೇಳಿದಳು, ಆದರೆ ಶಾಸ್ತ್ರೀಗಳು ಹುಡುಗನ ಮನೆ ಅಂತಸ್ತು ಕೆಲಸ ಹಾಗೂ ಮನೆತನ ನೋಡಿ ಮಗಳನ್ನು ಒಪ್ಪಿಸಿದರು,

**ದೇವರ ಅನುಗ್ರಹದಿಂದ ಒಳ್ಳೆಯ**

ಅಳಿಯ ಸಿಕ್ಕನೆಂದು ಶ್ರೀಧರ ಶಾಸ್ತ್ರೀಗಳು ತುಂಬ ಖುಷಿಪಟ್ಟರು, ಎಲ್ಲರ ಒಪ್ಪಿಗೆಯಂತೆ ಅದ್ದೂರಿಯಾಗಿ ಮದುವೆ ನಡೆ ಯಿತು,ಅವರಿಬ್ಬರ ಜೋಡಿ ರಾಮ– ಸೀತೆಯಂತೆ ಕಾಣುತ್ತಿ ದ್ದುದನ್ನು ನೋಡಿ ಕಣ್ಣುತುಂಬಿಕೊಂಡರು. ಮದುವೆಯ ನಂತರ ಇಬ್ಬರ ದಾಂಪತ್ಯ ತುಂಬ ಚೆನ್ನಾಗಿತ್ತು ಜೊತೆಗೆ ಶ್ರೀ ಹರ್ಷ ತುಂಬ ಪ್ರೀತಿ ವಿಶ್ವಾಸ ಹಾಗೂ ಕಾಳಜಿವಯಿಸುತಿದ್ದರು, ಶ್ರದ್ಧಾ ಕೂಡ ನಯ ವಿನಯದಿಂದ ಎಲ್ಲರೊಂದಿಗೆ ನಡೆದುಕೊಳ್ಳು ತ್ತಿದ್ದಳು ಜೊತೆಗೆ ಕೆಲಸಕ್ಕೂ ಹೋಗುತಿದ್ದಳು, ಮದುವೆಯಾಗಿ

ವರ್ಷ ತುಂಬುವಷ್ಟರಲ್ಲಿ ಚಂದಿರನಿಗೆ ಹೋಲುವಂತ ಗಂಡು ಮಗನಿಗೆ ಜನ್ಮವನು ಕೊಟ್ಟಳು, ಮಗನಿಗೆ ವಿಶಾಲ್ ಎಂದು ನಾಮಕರಣ ಮಾಡಿದರು.

ಮಗನಿಗೆ ಸಣ್ಣವನಿಂದಲೇ ಸಂಗೀತ,ನೃತ್ಯಕ್ಕೆ ಸೇರಿಸಿ ಅಭ್ಯಾಸ ಶುರುವಾಯಿತು, ನಂತರ ಶಾಲೆಗೆ ಹೋಗಲು ಪ್ರಾರಂಭಿಸಿದನು,

ಮಗಳ ಜೀವನ ನೋಡಿ ಶ್ರೀಧರ ಶಾಸ್ತ್ರೀಗಳು ಹೆಮ್ಮೆ ಪಡುತ್ತಿದ್ದರು, ಜೊತೆಗೆ ಶ್ರೀಹರ್ಷ ಮನೆಯಲ್ಲೂ ಶ್ರದ್ಧಾಳಿಗೆ ತುಂಬ ಪ್ರೀತಿ ಗೌರವ ಸಿಗುತ್ತಿತ್ತು, ಅತ್ತೆ ಮಾವ ತನ್ನ ಮಗಳಂತೆ ನೋಡಿ ಕೊಳ್ಳುತ್ತಾ ಮೊಮ್ಮಗನ ತುಂಟಾಟ ಸವಿಯುತ್ತ ನೆಮ್ಮದಿಯಾಗಿದ್ದರು!

ಆದರೆ ಆ ಒಂದು ದಿನ ಶ್ರೀಹರ್ಷ ತನ್ನ ಕಚೇರಿಯಲ್ಲಿ ಕೆಲಸಮಾಡುತ್ತಿರುವಾಗ ಪ್ರಜ್ಞೆ ತಪ್ಪಿ ಕುರ್ಚಿಯಿಂದ ಕೆಳಗೆ ಬಿದ್ದು ಬಿಡುತ್ತಾರೆ, ತಟ್ಟನೆ ಅವರನ್ನು ಹತ್ತಿರದ ಆಸ್ಪತ್ರೆಗೆ ಸೇರಿಸಿ ಎಲ್ಲ ಟೆಸ್ಟ್ ಸ್ಕ್ಯಾನಿಂಗ್ ಮಾಡಿಸಲಾಯಿತು, ಆಗ ಬಂದ ಸುದ್ದಿಯು ಶ್ರದ್ಧಾಳ ಬದುಕಿನ ನೆಮ್ಮದಿಗೆ ಕೊಳ್ಳಿಇಟ್ಟಂತಿತ್ತು,

ತನ್ನ ಪತಿಗೆ ಮೆದುಳಿನ ಕ್ಯಾನ್ಸರ್ ಕೊನೆಯ ಸ್ಟೇಜ್ ನಲ್ಲಿದೆ ಎಂದು ತಿಳಿಯಿತು, ಶ್ರದ್ಧಾಳಿಗೆ ನಿಂತಲ್ಲಿಯೇ ಬಂಡೆಕಲ್ಲು ಬಂದು ಅಪ್ಪಳಿಸಿದಂತಾಯಿತು, ಅಳಿಯ ಹಾಗೂ ಮಗಳ ಸ್ಥಿತಿ ನೋಡಿ ಶಾಸ್ತ್ರೀಗಳು ಮಾನಸಿಕ ವೇದನೆ ಅನುಭವಿಸಿದರು, ದಿನ ಕಳೆದಂತೆ ಶ್ರೀಹರ್ಷರ ಆರೋಗ್ಯ ಕ್ಷೀಣಿಸತೊಡಗಿತು, ಶ್ರದ್ಧಾ ಕೆಲಸ ಬಿಟ್ಟಳು, ಪತಿಯ ಸೇವೆಗೆಂದೇ ಪತಿಯು ದುಡಿದು ಸಂಪಾದಿಸಿದ್ದ ಹಣ, ತನ್ನಲಿದ್ದ ಆಭರಣ ಹಾಗೂ ಎರಡು ಮನೆಗಳಲ್ಲಿ ಒಂದು ಮನೆಯನ್ನು ಸಹ ಚಿಕಿತ್ಸೆಯ ವೆಚ್ಚ ಕ್ಕೆಂದು ಮಾರಿದಳು, ಸಣ್ಣ ವಯಸ್ಸಿನ ಮಗನನ್ನು ನೆನೆಯುತ್ತ

ಇನ್ನೊಂದೆಡೆ ದೇಹದ ಚಲನೆಯನ್ನು ಮರೆತ ಪತಿಯ ಸೇವೆ ಮಾಡುತ್ತ, ತಾನು ಕಂಡ ಕನಸ್ಸನ್ನೆಲ್ಲಾ ನೆನೆಯುತ್ತ ಅವಳು ಮಾನಸಿಕವಾಗಿ ಕುಗ್ಗಿಹೋದಳು, ಆ ಸಮಯಕ್ಕೆ ಸರಿಯಾಗಿ ಶ್ರೀಹರ್ಷ ಕೆಲಸ ಮಾಡುತಿದ್ದ ಕಂಪನಿಯ ಎಲ್ಲ ಸಹದ್ಯೋಗಿಗಳು ವಿಷಯ ತಿಳಿದು ಸಹಾ ಯ ಧನವನ್ನು ಕೊಟ್ಟು ಆಸರೆಯಾದರು, ಆದರೂ ಸಹ ಶ್ರೀಹರ್ಷ ಸತತವಾಗಿ 3ವರ್ಷಗಳ ನಂತರ ಚಿಕಿತ್ಸೆಯು ಫಲಕಾರಿಯಾಗದೇ ತೀರಿಕೊಂಡರು.

ಈ ವಿಷಯ ತಿಳಿದು ಶ್ರೀಧರ ಶಾಸ್ತ್ರೀಗಳು ಮೂಖ ವೇದನೆ ಅನುಭವಿಸುತ್ತ ಮಗಳಿಗೆ, ನಾನೂ ನಿನ್ನ ಮಾತು ಕೇಳದೆ ತಪ್ಪು ಮಾಡಿದೆ ಮಗಳೇ ಎಂದು ಪದೇ ಪದೇ ಹೇಳುತ್ತಿದ್ದರು, ಕ್ರಮೇಣ ಅನಾರೋಗ್ಯ ಪೀಡಿತರಾದರೂ 6 ತಿಂಗಳ ನಂತರ ಅವರು ತೀರಿಕೊಂಡರು, ತದನಂತರ ಶ್ರದ್ಧಾಳ ಅರೋಗ್ಯವು ಕೆಟ್ಟಿತು, ಮುಂದಿನ ದಾರಿ ಏನು ಎಂದು ಯೋಚಿಸುತ್ತ ಶ್ರದ್ಧಾಳು ಮಾನ ಸಿಕ ಅರೋಗ್ಯ ಸಮಸ್ಯೆಗೆ ಎದುರಿಸುತ್ತಿದ್ದಳು ರಾತ್ರಿಯಾದರೆ ಸಾಕು ಕಣ್ಣ ಮುಂದೆ ನಡೆದ ಘಟನೆಗಳು ಕಾಡಿಸುತಿದ್ದವು ನಿದಿರೆಯು ಬರುತ್ತಿರಲಿಲ್ಲ,ನಿದ್ರೆ ಮಾತ್ರೆಯ ಸೇವನೆ ರೂಢಿಸಿಕೊಂಡಳು,


ತನ್ನ ಸುತ್ತ ಮುತ್ತ ಏನು ನಡೆಯುತ್ತಿದೆ ಎಂದು ತಿಳಿಯ ದಂತಾದಳು, ಇನ್ನೊಂದೆಡೆ ಶ್ರೀಹರ್ಷ ಕೆಲಸ ಮಾಡುತಿದ್ದ ಕಂಪನಿಯವರು ತಾಯಿ ಮಗನ ಸಹಾಯಕ್ಕೆ ಆಸರೆಯಾಗಲು ಸಹಾಯದ ಹಣವನ್ನು ಶ್ರದ್ಧಾಳ ಅಕೌಂಟ್ ಗೆ ಡೆಪಾಸಿಟ್ ಮಾಡಿದರು ನಂತರ ಶ್ರದ್ಧಾಳು ಎಲ್ಲ ಘಟನೆಯನ್ನು ನೆನೆಯುತ್ತ ಆತ್ಮಹತ್ಯೆ ಮಾಡಿಕೊಳ್ಳಲು ಯೋಚಿಸುತ್ತಿರುವಾಗ 9 ನೇ ತರಗತಿಯಲ್ಲಿ ಓದುತಿದ್ದ ಮಗನಿಗೆ ಹೇಗೋ ತಿಳಿಯುತ್ತದೆ! ಅವನು ತಾಯಿಯ ಕಣ್ಣನ್ನು ದಿಟ್ಟಿಸಿ ನೋಡುತ್ತ "ನೀನು ಸಹ ಸಾಯುವ ಯೋಚನೆ ಮಾಡುವುದಾದರೆ ನನಗೇಕೆ ಜನುಮ ಕೊಟ್ಟೆ" ಎಂದು ಪ್ರಶ್ನಿಸುತ್ತಾನೆ.

ಶ್ರದ್ಧಾಳಿಗೆ ಆ ಮಾತು ಕೇಳಿ ನಾನಿನ್ನು ಬದುಕಬೇಕು ನನಗಲ್ಲದಿದ್ದರೂ ನನ್ನ ಮಗನಿಗಾಗಿ ಎಂದೇನಿಸಿತು, ನಂತರ ಶ್ರದ್ಧಾಳ ಮಾನಸಿಕ ಸ್ಥಿತಿ ಸುಧಾರಿಸಲೆಂದು ಶ್ರದ್ಧಾಳ ತಾಯಿ ವಿಶಾಲಾಕ್ಷಿಯವರು ಹಳ್ಳಿಗೆ ಕರೆದುಕೊಂಡು ಹೋದರು ಅಲ್ಲಿ ಸುಮಾರು 15 ತಿಂಗಳುಗಳ ಕಾಲ ತಾಯಿಯ ಆರೈಕೆಯಲ್ಲಿ ಚೇತರಿಸಿಕೊಂಡು ಮಾತ್ತೆ ಬೆಂಗಳೂರಿಗೆ ಬಂದಳು,

ಮತ್ತು ಶ್ರದ್ಧಾ ತನ್ನ ವಯಕ್ತಿಕ ಆಸೆ ಸುಖವನ್ನು ಮರೆತು ಮಗನ ಶ್ರೇಯಾಭಿವೃದ್ಧಿಗೆ ಪ್ರೇರಣೆಯಾಗಿ ಜೊತೆ ನಿಂತ ಕಾರಣ ಇಂದು ವಿಶಾಲ್ ತಾಂತ್ರಿಕ ಶಿಕ್ಷಣ ಮುಗಿಸಿ ಅಪ್ಪ ಹೋಗುತಿದ್ದ ಕಂಪನಿ ಯಲ್ಲೇ ಕೆಲಸಕ್ಕೆ ಸೇರಿಕೊಂಡಿದ್ದಾನೆ. ಶ್ರದ್ಧಾ ಮೊದಲಿನಂತಾಗಲು ಸಾಧ್ಯವಾಗದಿದ್ದರೂ ಗೌರವಯುತ ಜೀವನ ಸಾಗಿಸುತ್ತಿದ್ದಾಳೆ ನಮ್ಮೆಲರಿಗೂ ಈಗ ಶ್ರದ್ಧಾಳಿಂದ ಬರುವ ಒಂದೇ ಉತ್ತರ ನಮ್ಮ ನಿಮ್ಮನೆಲ್ಲರನ್ನು ಮೌನಕ್ಕೆ ಜಾರಿಸುತ್ತದೆ ಅದೇ ನನ್ನಲಿರುವ ಆಸೆಗಳು ಅರ್ಥವಿಲ್ಲದ ಶಬ್ದಗಳು ಎನ್ನುವುದು.

▶▶ **ಸೋಮೇಶ್ ಕಣದೂರ್** ಬೆಂಗಳೂರು

# ಎಲ್ಲಿಹೋದರು ಹೀಗೆ ಪಾಠ ಮಾಡುವ ಗುರುಗಳು



ಸಾಕ್ಷಿ ಶ್ರೀಕಾಂತ ತಿಕೋಟಿಕರ
ಕೊಪ್ಪಳ.

ಅವು ಶಾಲಾ ದಿನಗಳು. ಮಧ್ಯಾಹ್ನದ ಊಟದ ವಿರಾಮದ ನಂತರ ಶುರುವಾಗುವ ತರಗತಿಗಳು ಬೇಸರವೇ ಸರಿ. ಕಿಟಕಿಯಿಂದ ಬರುವ ತಂಗಾಳಿ ಆಗಾಗ ತೀಡಿ ಹಿತವೆನಿಸುತ್ತಿತ್ತು. ನಿದ್ದೆಯೂ ಅಲ್ಲದ ಎಚ್ಚರುವ ಇಲ್ಲದ ಅಸಮ ಮನಸ್ಥಿತಿಯಲ್ಲಿ ಇರುವಾಗ ತಮ್ಮ ಪಾಠದ ಮತ್ತು ಸಾಹಿತ್ಯ ಅನುಭವದಿಂದ ನವರಸಗಳನ್ನು ಉಣಿಸುವ ಕನ್ನಡ ಗುರುಗಳು ತರಗ ತಿಗೆ ಬಂದರು. 90, ಇಝ ನಾವು!! ನಮಗೆ " ಗೂಗಲ್ "ಯೂಟ್ಯೂಬ್" ನಿಂದ ತ್ವರಿತ ಮಾಹಿತಿ ಸಿಗುವ ಸುಖ ಇರಲಿಲ್ಲ. ಕಂಡ ಪುಸ್ತಕ ಕೊಂಡು ಓದುವದು ಸುಲ ಭದ ಮಾತಲ್ಲ!! ಮಕ್ಕಳಿಗೆ ಶಾಲಾ ಪುಸ್ತಕ ಸಾಕು ಎನ್ನುವ ಹಿರಿಯರ ಮಾತು, " ಓದುವದು ಓದರೀ... ಅದ ಬಿಟ್ಟ ಮತ್ತೆ ಕತೆ ಪುಸ್ತಕ ಬ್ಯಾರೆ.. ಹಿಂಗಾದರೆ ಓದು ಗೋವಿಂದ!!! " ಅಲ್ಲದೇ ಕತೆ ಕಾದಂಬರಿ ಓದುವ ಗೀಳು ಹತ್ತಿದರೆ ಶಾಲಾ ಮಕ್ಕಳು ಹಾಳಾಗುವರು ಎಂಬ ಅನಿಸಿಕೆ. ಇಂತಹದರಲಿ ನಮಗೇನಾದರೂ

ಗ್ಟುಚಿಥಿಚಿಂಚಿಟಣ ಹೊಸ ವಿಷಯಗಳು ತಿಳಿಯಬೇ ಕೆಂದರೆ ಅದು ಗುರುಗಳ ಮತಿಯಿಂದ ಮಾತ್ರ ಹಾಗೆಲ್ಲ ನಮಗೆ ಗುರುಗಳು ಹೇಳಿದ್ದೇನೆ ಆಗಿನ ಗುರುಗಳು ಹಾಗೆ ಮಕ್ಕಳನ್ನು ತಮ್ಮ ಮಕ್ಕಳ ಎಂಬಂತೆ ಪ್ರೀತಿಸುತ್ತಿದ್ದರು. ಪಾಠ ಹೇಳುವುದಕ್ಕಾಗಿಯೇ ತಮ್ಮನ್ನೇ ತಾವು ಮುಡುಪಾಗಿಟ್ಟ ಗುರುಗಳು "ಒಮ್ಮೆ ಮಾಸ್ತರಾದರೆ ಕಡೆತನ ಮಾಸ್ತರ!!"ಎಂದು ಇದ್ದವರು. ಹೇಳುವ ಕಲೆ ಎನ್ನುವದೊಂದಿದ್ದರೆ ನೀರಸವೆನಿಸುವ ಗಳಿಗೆಗಳು ಕೂಡ ರಸನಿಮಿಷಗಳು ಆದಾವು.

ಮಧ್ಯಾಹ್ನ ತರಗತಿಗೆ ಬಂದ ಗುರುಗಳು ಅರೆ ನಿದ್ದೆಯಲ್ಲಿದ್ದ ನಮ್ಮ ಮುಖಗಳು ದೇವರಿಗೆರೆಸಿ ಮಧ್ಯಾಹ್ನಕಾಲಕ್ಕೆ ಮಾಗಿದ ಹೂವುಗಳಂತಾಗಿದ್ದನ್ನು ಗಮನಿಸಿ "ವಿಶೇಷವೊಂದನ್ನು ಹೇಳುತ್ತೇನೆ "ಎಂದು ನಮ್ಮ ಕುತೂಹಲವನ್ನೇ ಮೀಟಿದರು. ಕುಮಾರವ್ಯಾಸ ಬರೆದ ಭಾರತ ಪಾಂಡವರ ದಿಗ್ವಿಜಯವಾದರೇ ಕುರುಕ್ಷೇತ್ರ ಎನ್ನುವುದೇ ಮಹಾ ಯುದ್ಧ ಭೂಮಿ ಆಯಿತು. ಬರೆದಿದ್ದನ್ನೇ ಮತ್ತೆ ತಿರಿದು ಬರೆಯುವ ಸೊಗೆ ಬೇಡ ಎಂದು ಕವಿವೊಬ್ಬನು ಯುದ್ಧದ ನಂತರ ಏನಾಯಿತು ಎಂದು ಸವಾಲು ಸ್ವೀಕರಿಸುವಂತೆ ಮಹಾಕಾವ್ಯವನ್ನು ಬರೆದನು ಎಂದು ಉತ್ಸಾಹದ ಬುಗ್ಗೆಯನ್ನು ನಿಧಾನವಾಗಿ ಮೀಟಿದರು. ಯಾರವನು ಗೊತ್ತೇ ಎಂದು ಕೇಳಿದರು....ವಿದ್ಯಾರ್ಥಿಗಳು ಮುಖ ಮುಖವನ್ನು ನೋಡಿಕೊಂಡೆವು. ಆ ಮಹಾ ಕವಿ ಯುದ್ಧ ಗೆದ್ದ ಮೇಲೆ ಯುದ್ಧದಲ್ಲಿರುವ ಸನ್ನಿವೇಶಗಳನ್ನು ನೋಡಿ ಹಿಂಸೆ ಮತ್ತು ದ್ವೇಷದಿಂದ ವಿಜಯ ಸಾಧ್ಯವಿಲ್ಲ ಗೆದ್ದವರು ಸೋತಿದ್ದರು, ಶಾಂತಿ ಪ್ರೇಮ ಮತ್ತು ಕ್ಷಮೆ ಶಾಶ್ವತವಾಗಿದ್ದು ಎಂಬ ಮರ್ಮವನ್ನು ತನ್ನ ಕಾವ್ಯದಲ್ಲಿ ಹೇಳಿದ. ಆ ಕವಿಯ ಹೆಸರು ಶ್ರೀನಾಥ. ತಾನು ಬರೆಯುವ ಕೃತಿಗಳನ್ನೆಲ್ಲ ಮನೆಯ ಪಕ್ಕದಲ್ಲಿರುವ ಸಣ್ಣ ಗುಡಿಸಲಿನೊಳಗೆ ಕುಳಿತುಕೊಂಡು ರಾತ್ರಿ ಈಡೀ ತಲ್ಲೀನತೆಯಲಿ ಬರೆಯುತ್ತಿದ್ದ. ಉರಿಯುವ ಎಣ್ಣೆ ದೀಪದಡಿ ತಾಳೆಯ ಗರಿಯ ಮೇಲೆ ತನ್ನ ಕೃತಿಗಳ ರಚಿಸುತ್ತಿದ್ದ. ಹೀಗೆ ತನ್ನ ಸುಂದರರಾತ್ರಿಗಳನು ಅವನು ಸಾಹಿತ್ಯಕೆ ಮುಡುಪಾಗಿಟ್ಟ!! ಅವನು ಆ ಗುಡಿಸಲಿನಿಂದ ಹೊರಗೆ ಹೋದಾಗ ಅದು ಯಾವದೋ ಮಾಯಕದಲ್ಲಿ ಆ ಎಣ್ಣೆ ಬತ್ತಿಯ ದೀಪ ಕೆಳಗುರಳಿ ಈಡೀ ಗುಡಿಸಲೇ ಬೆಂಕಿಗೆ ಆಹುತಿಯಾಯಿತು. ಅದರೊಟ್ಟಿಗೆ ಆ ಮಹಾ ಕವಿ ಬರೆದ ಕೃತಿಗಳು ಕೂಡ. "ಕೃತಿ" ಎಂದರೆ ಅವನ ಜೀವಾಳ ಅದನ್ನು ಕಂಡು ಆ ಮಹಾ ಕವಿ ಜೀವವೇ ಹೋದಂತೆ ಬೊಬ್ಬೆಇಡಲಾರಂಭಿಸಿದ. ತನ್ನ ಎದೆಯನ್ನು ಎರಡು ಕೈಗಳಿಂದ ಬಡೆದುಕೊಳ್ಳುತ್ತಾ "ನನ್ನ ಕೃತಿಗಳೇ ಹೋದ ಮೇಲೆ ನಾನಿನ್ನು ಬದುಕಿ ಪ್ರಯೋ ಜನವಿಲ್ಲ ನಾನು ಅದೇ ಅಗ್ನಿಗೆ ಆಗುತಿ ಯಾಗುವೆ!!" ಎಂದು ಸಾಯಲು ಸಿದ್ದನಾದ. ತಕ್ಷಣ ಅವನ ಹೆಂಡತಿ ಬಂದು ಅವನನ್ನು ತಡೆದು ಕೈಹಿಡಿದು ಮನೆ ಒಳಗೆ ಕರೆದು ಕೊಂಡು ಹೋಗಿ ಅವನ ಕೃತಿಯ ಕೆಲವು ಭಾಗ ಗಳನ್ನು ಆ ಕವಿಯ ಕೈಗಿಟ್ಟಳಂತೆ, "ನೀವು ಬರೆದಿದ್ದ ನ್ನೆಲ್ಲವನ್ನು ಆಗಾಗ ಓದಬೇಕು ಎನ್ನುವ ಹಂಬಲ ದಿಂದ ನಾನು ಕೆಲವು ಭಾಗಗಳನ್ನು ತಂದುಕೊಂಡು ಇಟ್ಟುಕೊಂಡು ರಾತ್ರಿ ಅವುಗಳನ್ನು ಓದುತ್ತಿದ್ದೆ. ನಿಮಗೆ ಗೊತ್ತಾದರೆ ಭಯ ಬಹುದು ಎಂಬ ಭಯದಿಂದ ಮುಚ್ಚಿ ಇಟ್ಟುಕೊಂಡು ಓದುತ್ತಿದ್ದೆ!!ಎಲ್ಲವೂ ಸುಟ್ಟು ಹೋಗಿಲ್ಲ ಇಲ್ಲಿ ಇನ್ನೂ ಸ್ವಲ್ಪ ಇದೆ, ಇವುಗಳನ್ನು ಮತ್ತೆ ಮುಂದುವರಿಸಿ ನೀವು ಬರೆಯಿರಿ" ಎಂದು ಧೈರ್ಯ ತುಂಬಿದಳು. ಅದನ್ನು ನೋಡಿ ಅವನ ಕಣ್ಣಿನಲ್ಲಿ ಹರ್ಷೋದ್ಗಾರದಿಂದ ನೀರು ಚಿಮ್ಮಿತು. ಆಗ ಆ ಮಹಾ ಕವಿ ನೀನಿಲ್ಲದಿದ್ದರೆ ನಾನು ಬದುಕಿ ಇರುತ್ತಿರಲಿಲ್ಲ. ಮುಂದೆ ಮಹಾ ಕಾವ್ಯವನ್ನು ಬರೆ ಯಲು ಆಗುತ್ತಿರಲಿಲ್ಲ, ಎಂದು ಹೆಂಡತಿಯ ಪ್ರೇಮ ಮತ್ತು ಅಭಿಮಾನದ ಸಂಕೇತವಾಗಿ ತಾನು ಬರೆದ ಮಹಾಕಾವ್ಯ "ಜೈಮಿನಿ ಭಾರತ"ಕ್ಕೆ ತನ್ನ ಕಾವ್ಯ ನಾಮವನ್ನು ಲಕ್ಷ್ಮೀಶ ಇಟ್ಟನು. ಹೀಗೆ ಅವನ ಪತ್ನಿ ಪ್ರೇಮ ಮತ್ತು ಕೃತಿ ವಾತ್ಸಲ್ಯವನ್ನು ಹೇಳಿದ್ದು, ಇದು ನಮಗೆ ಕನ್ನಡದ ಗುರುಗಳು ಲಕ್ಷ್ಮೀಶನ ಬಗ್ಗೆ ಹೇಳಿದ ಕಥೆ. ಇನ್ನೊಂದು ಪ್ರಕಾರ ಹೇಳುವುದಾದರೆ ಲಕ್ಷ್ಮೀಶ ಅವರ ಊರಿನಲ್ಲಿರುವ ಲಕ್ಷ್ಮೀನಾರಾಯಣ ಗುಡಿಯಲ್ಲಿ ಕುಳಿತುಕೊಂಡು ತನ್ನ ಕೃತಿ ಗಳನ್ನು ಬರೆದ ಎಂಬ ಪ್ರತೀತಿ ಕೂಡ ಇದೆ. ಆ ಗುಡಿಸಲು ಸುಡುವಾಗ, ಅವನು ಅಳುವಾಗ,ಹೆಂಡತಿ ರಮಿಸಿ ಅವನ ಕೈಯಲ್ಲಿ ತಾಳೆಗರಿಯನ್ನು ಇಡುವಾಗ.... ನಾವು ಅಲ್ಲಿಯೇ ಇದ್ದು ನೋಡುತ್ತಿದ್ದೇವೆ ಎಂದು ಭಾಸವಾಗುವಷ್ಟು ಚಂದವಾಗಿ ವಿವರಿಸಿದರು. ಇದನ್ನು ಹೇಳಿ ಸುಮಾರು 35 ರಿಂದ 38 ವರ್ಷ ಕಳೆದು ಹೋಗಿದೆ. ಆದರೂ ಶಾಲಾ ದಿನದ ನೆನಪಿನಲ್ಲಿ ಹಸಿ ಗೋಡೆಗೆ ನೆಟ್ಟ ಹರಳಿನಂತೆ ಇನ್ನೂ ಮನಸ್ಸಿನಲ್ಲಿ ಉಳಿದಿದೆ.

16ನೆಯ(1550) ಶತಮಾನದಲ್ಲಿದ್ದ ಕವಿ ಎಂದು ಭಾವಿಸಲಾಗಿದೆ. ಈತನ ಊರು ಚಿಕ್ಕಮಂಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ದೇವನೂರು. ಅಲ್ಲಿಯ ಲಕ್ಷ್ಮೀಕಾಂತ ದೇವಾಲಯದಲ್ಲಿ ಲಕ್ಷ್ಮೀಶನ ವಿಗ್ರಹವನ್ನು ಸ್ಥಾಪಿಸಲಾಗಿದೆ. ಜೈಮಿನಿ ಭಾರತ ಲಕ್ಷ್ಮೀಶನ ಪ್ರಸಿದ್ಧ ಕಾವ್ಯ. ಇದು ಸಂಸ್ಕೃತ ಜೈಮಿನಿ ಭಾರತದ ಕನ್ನಡ ರೂಪವಾಗಿದ್ದು ವಾರ್ಧಕ ಷಟ್ಪದಿಯಲ್ಲಿದೆ. ಈತನಿಗೆ 'ಕರ್ನಾಟಕ ಕವಿಚೂತವನ ಚೈತ್ರ' ಎಂಬ ಬಿರುದಿತ್ತು.

ಕಥೆಯು 32 ಸಂಧಿಗಳಲ್ಲಿ ಇದೆ.

ಯುದ್ಧದ ನಂತರ ಅಶ್ವಮೇಧ ಯಾಗ ಮಾಡಲು ಧರ್ಮರಾಯ ನಿರ್ಧರಿಸುತ್ತಾನೆ.ಇದು ಮಹಾಭಾರತದ ಆಶ್ರಮವಾಸ ಪರ್ವದ ಆಧಾರಿತ ಕಥೆ □ ಆದರೆ ಕವಿ ಅದನ್ನು ತನ್ನದೇ ಶೈಲಿಯಲ್ಲಿ, ಕನ್ನಡ ಜನರ ಮನಸ್ಸಿಗೆ ತಕ್ಕಂತೆ ಕಾವ್ಯ ರೂಪದಲ್ಲಿ ಬರೆದಿದ್ದಾರೆ.

ಕೃತಿಯಲ್ಲಿ ಧರ್ಮ, ನೀತಿ, ಭಕ್ತಿ ಮತ್ತು ಶೌರ್ಯ ಇವುಗಳ ಸುಂದರ ಮಿಶ್ರಣವಿದೆ. ಯುದ್ಧದ ರಣ ಭೀಕರ ಪರಿಣಾಮ ಜೀವನದ ನಶ್ವರತೆಯನು ಇವು ತೋರುವವು. ಇಲ್ಲಿ ಅರ್ಜುನಗಿಂತ ಹಲವು ವೀರರು ಇದ್ದರು ಆದರೆ ಕೃಷ್ಣನ ಬಲದಿಂದ ಅರ್ಜುನ ಯುದ್ಧ ಗೆಲ್ಲುತ್ತಾನೆ. ಕೃಷ್ಣನೆ ಈ ಕೃತಿಯ ನಾಯಕ. ಭಕ್ತಿ, ಕ್ಷಮೆ, ದಯಾ ಗುಣಗಳೇ ಶ್ರೇಷ್ಠ ಎಂದು ಹಲವು ಕಥೆಗಳರೂಪಕಗಳಲ್ಲಿ ತುಂಬಾ ಪರಿಣಾಮಕಾರಿಯಾಗಿ ಕವಿ ನವರಸ ಬಳಸಿಕೊಂಡು ಉಪಮಾಲೋಲನಾಗಿ ಹೇಳುತ್ತಾ ಹೋಗುವನು. ಯುದ್ಧ ಗೆದ್ದವರ ಬಳಿ ನೆಮ್ಮದಿ ಇರಲಿಲ್ಲ ಯುದ್ಧ ನೆಮ್ಮದಿಯ ತರಲಿಲ್ಲ. ಇಲ್ಲಿ ಕವಿ ಅಹಿಂಸೆ ಮತ್ತು ಕ್ಷಮಾ ಗುಣಗಳ ತತ್ವ ಎತ್ತಿ ಹಿಡಿಯುತ್ತಾನೆ. ಇದು ಹಲವು ಕಥೆಗಳ ಸ್ವರೂಪದಲ್ಲಿ ಇರುವ ಜೀವನತತ್ವದ ವ□ಭವೀಕರಣ. ಅಲ್ಲದೇ ಜಿನ ಧರ್ಮದ ಹಲವು ಅಹಿಂಸೆ, ಧರ್ಮ, ಕರ್ಮಮಾರ್ಗ ಮತ್ತು ಸತ್ಯ ತತ್ವದರ್ಶನ ಮಾರ್ಗದ ಬೋಧನೆ ಈ ಗ್ರಂಥದಲಿ ಕಾಣಬಹುದು.

ಶುದ್ಧ ಕನ್ನಡ ಪದಪ್ರಯೋಗ, ಶ್ಲೇಷ, ಅಲಂಕಾರಗಳ ಸಮೃದ್ಧ ಕೃತಿ. ಕನ್ನಡಲೋಕ ಕಂಡ ಮಹಾಕವಿ ಲಕ್ಷ್ಮೀಶ.

ಲಕ್ಷ್ಮೀಶನಿಗೆ, ಧರ್ಮಮೂರ್ತಿ, ಭಾರತ ಕವಿರಾಜ, ನತಿಕತಾಪ್ರದಾಯಕ ಹೀಗೆ ಹಲವು ಬಿರುದುಗಳಿಂದ ಹೊಗಳಿದ್ದಾರೆ.ಜನರ ಹೃದಯದಲ್ಲಿ ಅವನ ಗುರುತು ಧರ್ಮ, ನೈತಿಕತೆ, ಭಕ್ತಿ ಪಾಠಗಾರ ಎಂಬಂತೆ ನೆರೆದಿದೆ.




### 1. ದ್ರೌಪದಿಯ ಅವಮಾನ ಮತ್ತು ಪಾಂಡವರ ಅರಣ್ಯವಾಸ

"ಹೇಳು ಧರ್ಮರಾಜಾ! ನಿನ್ನ ನ್ಯಾಯವೇನು?
ತಾನೆ ಪಣಕ್ಕಿಟ್ಟೆ ನೀನೆಂದು ಸೋತೆಯಾ;
ಹೀಗಿರಲು ನನ್ನ ಪಣಕ್ಕೆ ಬರುವ ಹಕ್ಕು
ನಿನಗೆ ಹೇಗೆ ಬಂತು ನುಡಿ?"

ಕಾವ್ಯ ಆರಂಭದಲ್ಲೇ ದ್ರೌಪದಿಯ ಅವಮಾನದಿಂದ ಉಂಟಾದ ಪಾಂಡವರ ದುಃಖವನ್ನು ಹಾಗು ಗೌರವಭಂಗ ಕವಿ ಸ್ಪಷ್ಟವಾಗಿ ವರ್ಣಿಸುತ್ತಾರೆ. ಸ್ತ್ರೀ ಸಂವೇದನಾಶೀಲಗುಣ ಕಾವ್ಯದಲಿ ಕಾಣುವದು.

"ಹೆಂಗಸನ ನಾಚಿಕೆ ದೇವರ ತೇಜಸ್ಸು,
ಅವಳ ಶುದ್ಧತೆಯೇ ಪರಮ ಪ್ರಕಾಶ;
ಸ್ತ್ರೀಯ ಗೌರವವು ಧರ್ಮದ ಸಂಕೇತ,
ರಾಜ್ಯದ ಸ್ಥಿತಿ ಧರ್ಮದ ಮೇಲೆಯೇ ನಿರ್ಭರ."

### 2. ಮಾರ್ಕಂಡೇಯ ಮಹರ್ಷಿಯ ಉಪದೇಶಗಳು

ಪಾಂಡವರಿಗೆ ಮಹರ್ಷಿ ಮಾರ್ಕಂಡೇಯರು ಧರ್ಮ, ಶೌರ್ಯ ಮತ್ತು ಭಕ್ತಿಯ ಕುರಿತು ಉಪದೇಶಿಸುತ್ತಾರೆ.

"ಧರ್ಮಸ್ಥನಿಗೆ ಬಂದ ದುಃಖ, ಪಾಪಫಲವಲ್ಲ;
ಅದು ಭವಿಷ್ಯದ ಸುಖದ ಬೀಜವಯ್ಯಾ."
"ಸಹನೆಯೆ ಧರ್ಮದ ತಾಯಿಯು,
ಕೋಪವು ಅಧರ್ಮದ ಮೂಲ."
"ಸತ್ಯವೆ ದೇವರು, ಧರ್ಮವೆ ದಾರಿ,
ಸುಳ್ಳು ಹಾದಿ ನಾಶದಲಿ ಮುಳುಗುವುದು."

### 3. ಕೃಷ್ಣನ ಮಹಿಮೆ

ಎಲ್ಲ ದೇವತೆಗಳೂ ಕೃಷ್ಣನಲ್ಲೇ ಲೀನವಾಗಿವೆ ಎಂಬ ಭಾವನೆ ಕೃತಿಯ ಕೇಂದ್ರ ವಿಷಯ.

"ಅಜ್ಞಾನವೆ ಬಂಧನ, ಜ್ಞಾನವೆ ವಿಮೋಚನೆ;
ಬೆಳಕು ಕಂಡು ಹೋಗುವನೆ ಸತ್ಯದ
ಹಾದಿಯಲಿ."

### 4. ಧರ್ಮದ ಸಾರ:

ಸತ್ಯ, ಭಕ್ತಿ, ಸೇವೆ ಮತ್ತು ಕ್ಷಮೆ–ಇವು ಜೀವನದ ಆಧಾರ.

ದ್ರೋಹ, ದ್ವೇಷ ಮತ್ತು ಅಹಂಕಾರ ನಾಶದ ಮೂಲ ಎಂದು ಕವಿ ಬೋಧಿಸುತ್ತಾರೆ.

**ಮನದ ಮಾತು**

### ಪ್ರಮುಖ ಘಟನೆಗಳು

ಜೀವನದ ತಾತ್ವಿಕ ಸತ್ಯ ಹೇಳುವ ಸಾಲುಗಳು.

"ಬಾಳು ಬಾಳೆಹಣ್ಣಿನ ಚಿಪ್ಪೆ,
ಸರಿ ಹಿಡಿದರೆ ಸಿಹಿ, ತಪ್ಪಾದರೆ ಸೊರಗು

ಕರ್ಮದ ತಾತ್ವಿಕತೆ

"ಕರ್ಮವಿಲ್ಲದ ಜೀವನವು ಮರಳಿನ ತೋಟ."
"ಸಹನೆಯು ಧರ್ಮದ ತಾಯಿಯು, ಕೋಪವು ಪಾತಕದ ಬೀಜ."
"ಸತ್ಯವೆ ದೇವರು, ಸುಳ್ಳು ಪಾತಕದ ಬಿತ್ತನೆ."

ಭಾವನಾತ್ಮಕ ಕಾವ್ಯಶೈಲಿ–ವ್ಯಾಸಭಾರತಕ್ಕಿಂತ ಹೆಚ್ಚು ಭಾವನಾತ್ಮಕ, ಮಾನವೀಯ ಮತ್ತು ಕಾವ್ಯೋಚಿತ ವರ್ಣನೆ. ಕನ್ನಡದ ವ್ಯಾಸ ಎಂದು ಲಕ್ಷ್ಮೀಶ ಬಿರುದಾಂಕಿತ.

# ನೆವರ್ ಗಿವ್ ಅಪ್: ಜಾನ್ ಸೀನಾ



ಡಾ.ಸುಧಾಕರ ಜಿ. ಲಕ್ಕವಳ್ಳಿ

ಡಬ್ಲ್ಯೂಡಬ್ಲ್ಯೂಈ ರಣರಂಗದ ಅಜೇಯ ಚಕ್ರವರ್ತಿ ಜಾನ್ ಸೀನಾ ಅವರ ಬದುಕು ಶೂನ್ಯದಿಂದ ಶಿಖರಕ್ಕೇರಿದ ಮಹಾಕಾವ್ಯ. ಕೋಟಿ ಹೃದಯಗಳ ಸಿಂಹಾಸನ ಏರುವ ಮುನ್ನ ಅವರು ಕಂಡದ್ದು ಕಣ್ಣೀರಿನ ಕಡಲು.

ಕನಸು ಹೊತ್ತು ಕ್ಯಾಲಿಫೋರ್ನಿಯಾಕ್ಕಿಳಿದ ಸೀನಾ ಅವರಿಗೆ ಬಡತನವೇ ಮೊದಲ ಎದುರಾಳಿ. ಸೂರು ಇಲ್ಲದೆ ಕಾರನ್ನೇ ಮನೆಯಾಗಿಸಿಕೊಂಡರು. ಹೊಟ್ಟೆಯ ಬೆಂಕಿ ಆರಿಸಲು ಹೋಟೆಲ್‌ನ ಎಂಜಲು ತುತ್ತಿಗೆ ಕಾದ ಆ ದಿನಗಳೂ ಅವರ ಛಲವನ್ನು ಕರಗಿಸಲಿಲ್ಲ. ಬದುಕಿನ ಬಂಡಿ ಎಳೆಯಲು ಜಿಮ್‌ನಲ್ಲಿ ಕಸ ಗುಡಿಸಿದರು, ಶೌಚಾ ಲಯ ತೊಳೆದರು. ಅಪ್ರತಿಮ ಮೈಕಟ್ಟಿದ್ದರೂ ದುಡಿಮೆಗೆ ನಾಚಲಿಲ್ಲ. ಅದೇ ಜಿಮ್‌ನಲ್ಲಿ ಬೆವರಿಳಿಸಿ ದೇಹದೊಂದಿಗೆ ಭವಿಷ್ಯವನ್ನೂ ಕಟ್ಟಿಕೊಂಡರು.

**ಸ್ಫೂರ್ತಿ ಸುಧೆ–38**

ರಿಂಗ್‌ನ ಹೀರೊ ಸೀನಾ ನಿಜಜೀವನದಲ್ಲೂ ದೇವದೂತ. 'ಮೇಕ್ ಎ ವಿಶ್' ಮೂಲಕ ಕ್ಯಾನ್ಸರ್‌ಪೀಡಿತ 650ಕ್ಕೂ ಹೆಚ್ಚು ಮಕ್ಕಳ ಕೊನೆ ಯಾಸೆ ಈಡೇರಿಸಿ ವಿಶ್ವದಾಖಲೆ ಬರೆದಿದ್ದಾರೆ. ಸಾವಿನ ಅಂಚಿನಲ್ಲಿದ್ದ ಕಂದಮ್ಮಗಳ ತುಟಿಯಲ್ಲಿ ನಗು ಅರಳಿಸಿದ್ದೇ ಅವರ ಪದಕ.

ಯಾವ ಕಾಯಕವೂ ಕೀಳಲ್ಲ, ಹಂಬಲವಿದ್ದರೆ ಅವಮಾನವೇ ಸನ್ಮಾನವಾಗುತ್ತದೆ ಎಂಬುದಕ್ಕೆ ಸೀನಾ ಸಾಕ್ಷಿ. 'ನೆವರ್ ಗಿವ್ ಅಪ್' ಮಂತ್ರ ಸೋತವರಿಗೆ ದೀವಿಗೆ. ಶೌಚಾಲಯ ತೊಳೆದ ಕೈಗಳೇ ಚಾಂಪಿಯನ್ ಪಟ್ಟ ಎತ್ತಬಲ್ಲವು ಎಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ.



# ಬೆಳ್ಳಿತೆರೆಯ ಪ್ರಭಾವ ಮತ್ತು ಬದಲಾದ ಹಾದಿ

ಸಿನಿಮಾ ಎನ್ನುವುದು ಕೇವಲ ಕತ್ತಲೆ ಕೋಣೆಯ ಒಳಗಿನ ಎರಡು ವರೆ ಗಂಟೆಗಳ ಕಾಲಕ್ಷೇಪವಲ್ಲ; ಅದು ಒಂದು ಕಾಲಘಟ್ಟದ ಸಂಸ್ಕೃತಿ, ನಾಗರಿಕತೆ ಮತ್ತು ಸಮಾಜದ ನಾಡಿಮಿಡಿತವನ್ನು ಹಿಡಿದಿಡುವ ಪ್ರಬಲ ಮಾಧ್ಯಮ. ವಿಶ್ವದ ಯಾವುದೇ ಸಮೂಹ ಸಂವಹನ ಮಾಧ್ಯಮಕ್ಕೆ ಇಲ್ಲದ ಶಕ್ತಿ ಸಿನಿಮಾಕ್ಕಿದೆ, ಏಕೆಂದರೆ ಇದು ಕಣ್ಣಿಗೆ ದೃಶ್ಯವನ್ನು, ಕಿವಿಗೆ ಶಬ್ದವನ್ನು ಮತ್ತು ಮನಸ್ಸಿಗೆ ಭಾವನೆಯನ್ನು ಏಕಕಾಲದಲ್ಲಿ ದಾಟಿಸುತ್ತದೆ. ಅಂದಿನ ಕಾಲದ ಕನ್ನಡ ಚಿತ್ರರಂಗವನ್ನು ನಾವು ಒಮ್ಮೆ ಹಿಂತಿರುಗಿ ನೋಡಿದರೆ, ಅಲ್ಲಿ ಕಲೆ ಎನ್ನುವುದು ಸಮಾಜವನ್ನು ತಿದ್ದುವ ಒಂದು ದಿವ್ಯ ಅಸ್ತ್ರವಾಗಿತ್ತು. ನಮ್ಮ ಹಿರಿಯರು ಬೆಳ್ಳಿತೆರೆಯನ್ನು 'ಬೆಳ್ಳಿ ಚುಕ್ಕೆ'ಯಂತೆ ಪೂಜಿಸುತ್ತಿದ್ದರು. ಅದಕ್ಕೆ ಕಾರಣ ಅಂದಿನ ಸಿನಿಮಾಗಳು ಒಬ್ಬ ಸಾಮಾನ್ಯ ಮನುಷ್ಯನ ಅಂತರಂಗವನ್ನು ತಟ್ಟುತ್ತಿದ್ದವು, ಬದುಕಿನ ಕಷ್ಟಗಳಿಗೆ ಹೆಗಲಾಗುತ್ತಿದ್ದವು ಮತ್ತು ವ್ಯಕ್ತಿತ್ವವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದವು. ಅಂದಿನ ಸಿನಿಮಾಗಳಲ್ಲಿ ನಾಯಕನೆಂದರೆ ಕೇವಲ ಅತಿಮಾನುಷ ಶಕ್ತಿಯಲ್ಲ, ಅವನು ಒಬ್ಬ ಆದರ್ಶ ಮಗ, ಜವಾಬ್ದಾರಿಯುತ ಪತಿ ಅಥವಾ ಸಮಾಜದ ಹಿತ ಬಯಸುವ ಕಳಕಳಿಯುಳ್ಳ ವ್ಯಕ್ತಿಯಾಗಿದ್ದ. ಅಂತಹ ಕಥೆಗಳನ್ನು ನೋಡಿ ಬೆಳೆದ ತಲೆಮಾರು ಇಂದು ಸಮಾಜದಲ್ಲಿ ನೈತಿಕ ಮೌಲ್ಯಗಳನ್ನು ಉಳಿಸಿಕೊಂಡಿದೆ ಎಂದರೆ ಅದಕ್ಕೆ ಅಂದಿನ ಬೆಳ್ಳಿತೆರೆಯ ಪ್ರಭಾವವೂ ಒಂದು ಕಾರಣ.

ಒಮ್ಮೆ ನೆನಪಿಸಿಕೊಳ್ಳಿ, ಡಾ. ರಾಜ್‌ಕುಮಾರ್ ಅವರ 'ಬಂಗಾರದ ಮನುಷ್ಯ' ಚಿತ್ರ ತೆರೆಕಂಡಾಗ ಕರ್ನಾಟಕದಲ್ಲಿ ಯಾವ ರೀತಿಯ ಕ್ರಾಂತಿಯಾಯಿತು ಎಂಬುದು ಇತಿಹಾಸದಲ್ಲಿ ದಾಖಲಾಗಿದೆ. ಒಬ್ಬ ಸುಶಿಕ್ಷಿತ ಯುವಕ ನಗರದ ಸುಖಭೋಗಗಳನ್ನು ಬಿಟ್ಟು ಹಳ್ಳಿಗೆ ಬಂದು, ಮಣ್ಣಿನ ಮಗನಾಗಿ ಭೂಮಿಯನ್ನು ನಂದನವನವನ್ನಾಗಿ ಮಾಡುವ ಆ ಕಥೆ ಕೇವಲ ಮನರಂಜನೆಯಾಗಿ ಉಳಿಯಲಿಲ್ಲ. ಆ ಚಿತ್ರವನ್ನು ನೋಡಿ ಪ್ರೇರಿತರಾದ ಸಾವಿರಾರು ಯುವಕರು ಬೆಂಗಳೂರಿನಂತಹ ನಗರಗಳನ್ನು ಬಿಟ್ಟು ತಮ್ಮ ಹಳ್ಳಿಗಳಿಗೆ ಮರಳಿ ವ್ಯವಸಾಯ ಆರಂಭಿಸಿದರು. ಸಿನಿಮಾ ಎನ್ನುವ ಸಂವಹನ ಮಾಧ್ಯಮ ಒಬ್ಬ ಮನುಷ್ಯನ ವೃತ್ತಿ ಮತ್ತು ಬದುಕಿನ ದಾರಿಯನ್ನೇ ಬದಲಿಸಬಲ್ಲದು ಎನ್ನುವುದಕ್ಕೆ ಇದಕ್ಕಿಂತ ದೊಡ್ಡ ಉದಾಹರಣೆ ಬೇಕಿಲ್ಲ. ಅದೇ ರೀತಿ 'ಕಸ್ತೂರಿ ನಿವಾಸ' ಚಿತ್ರದಲ್ಲಿನ ನಾಯಕನ ತ್ಯಾಗದ ಮನೋಭಾವ ಪ್ರತಿಯೊಬ್ಬ ಕನ್ನಡಿಗನ ಮನೆಯ ಮಾತುಗಳಾದವು. ಅಂದಿನ ಸಿನಿಮಾಗಳಲ್ಲಿ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಹಂಬಲವಿತ್ತು. 'ಸಂಸ್ಕಾರ', 'ಚೋಮನ ದುಡಿ'ಯಂತಹ ಚಿತ್ರಗಳು ಕೇವಲ ಪ್ರಶಸ್ತಿಗಾಗಿ ಇರಲಿಲ್ಲ, ಅವು ಸಮಾಜದ ತಳಮಟ್ಟದ ನೋವುಗಳನ್ನು ಮತ್ತು ಮನುಷ್ಯನ ವಿಕೃತ ಮನಸ್ಥಿತಿಗಳನ್ನು ತೆರೆದಿಟ್ಟು ನಮ್ಮನ್ನು ನಾವು ವಿಮರ್ಶಿಸಿಕೊಳ್ಳುವಂತೆ ಮಾಡುತ್ತಿದ್ದವು. ಸಿನಿಮಾ ಮಂದಿರದಿಂದ ಹೊರಬರುವ ಪ್ರೇಕ್ಷಕ ಕಣ್ಣೀರು ಹಾಕುತ್ತಿದ್ದನಾದರೂ, ಅವನ ಮನಸ್ಸಿನಲ್ಲಿ ಏನೋ ಒಂದು ಸಾಧಿಸುವ, ಸಮಾಜಕ್ಕೆ ಒಳ್ಳೆಯದನ್ನು ಮಾಡುವ ಹಂಬಲ ಮೊಳೆತಿರುತ್ತಿತ್ತು.



ಆದರೆ ಇಂದಿನ ಕಾಲಘಟ್ಟದಲ್ಲಿ ನಾವು ಎತ್ತ ಸಾಗುತ್ತಿದ್ದೇವೆ ಎಂಬುದು ಗಂಭೀರವಾದ ಆತಂಕವನ್ನು ಮೂಡಿಸುತ್ತದೆ. ಇಂದಿನ ಕನ್ನಡ ಸಿನಿಮಾಗಳು ತಾಂತ್ರಿಕವಾಗಿ ವಿಶ್ವದ ಎತ್ತರಕ್ಕೆ ಬೆಳೆದಿರಬಹುದು, ನೂರಾರು ಕೋಟಿ ರೂಪಾಯಿಗಳ ವ್ಯವಹಾರ ಮಾಡುತ್ತಿರಬಹುದು, ಆದರೆ ವಿಷಯದ ಗುಣಮಟ್ಟ ಮತ್ತು ನೈತಿಕ ಜವಾಬ್ದಾರಿಯ ವಿಷಯದಲ್ಲಿ ನಾವು ಪಾತಾಳಕ್ಕೆ ಕುಸಿಯುತ್ತಿದ್ದೇವೆ ಎನಿಸುವುದರಲ್ಲಿ ಸುಳ್ಳಿಲ್ಲ. ಇಂದಿನ ಸಿನಿಮಾಗಳು 'ಹಿಂಸೆ'ಯನ್ನೇ ಬಂಡವಾಳ ಮಾಡಿಕೊಂಡಿವೆ. ಮಾಸ್ ಸಿನಿಮಾ ಎನ್ನುವ ಹೆಸರಿನಲ್ಲಿ ಪರದೆಯ ಮೇಲೆ ರಕ್ತಪಾತವನ್ನು ವೈಭವೀಕರಿಸಲಾಗುತ್ತಿದೆ. ಲಾಂಗು, ಮಚ್ಚು, ಗನ್ ಮತ್ತು ಬಾಂಬುಗಳ ಸದ್ದಿನ ನಡುವೆ ಮಾನವೀಯ ಸಂಬಂಧಗಳ ಮೃದುವಾದ ದನಿ ಅಡಗಿಹೋಗುತ್ತಿದೆ. ಉದಾಹರಣೆಗೆ, ಇತ್ತೀಚಿನ ವರ್ಷಗಳಲ್ಲಿ ಬಂದ ಕೆಲವು ಅತೀ ಹಿಂಸಾತ್ಮಕ ಗ್ಯಾಂಗ್‌ಸ್ಟರ್ ಸಿನಿಮಾಗಳನ್ನು ಗಮನಿಸಿ. ಅಲ್ಲಿ ಅಪರಾಧ ಲೋಕದ ಕರಾಳತೆಯನ್ನು ತೋರಿಸುವ ಬದಲು, ಅಪರಾಧವನ್ನೇ ಒಂದು ಸುಂದರ ಲೋಕವನ್ನಾಗಿ, ರೌಡಿಸಂ ಮಾಡುವುದೇ ಒಂದು ದೊಡ್ಡ ಶೌರ್ಯವೆಂಬಂತೆ ಬಿಂಬಿಸಲಾಗುತ್ತಿದೆ. ಈ ಚಿತ್ರಗಳ ಪ್ರಭಾವಕ್ಕೆ ಒಳಗಾಗುತ್ತಿರುವ ಹದಿಹರೆಯದ ಯುವಕರು, ತಮ್ಮ ಬದುಕಿನ ಗುರಿಯನ್ನು ಮರೆತು ವಿಕೃತ ನಡವಳಿಕೆಗಳಲ್ಲಿ ತೊಡಗುತ್ತಿದ್ದಾರೆ. ಕಾಲೇಜು ಹುಡುಗರು ತಮ್ಮ ಬೈಕುಗಳ ಮೇಲೆ ರೌಡಿಗಳ ಲೋಗೋ ಹಾಕಿಕೊಳ್ಳುವುದು, ಸಣ್ಣ ಪುಟ್ಟ ವಿಚಾರಗಳಿಗೆ ಬೀದಿಗಳಲ್ಲಿ ಹೊಡೆದಾಡುವುದು ಇವೆಲ್ಲವೂ ಈ ತಪ್ಪು ಮಾಧ್ಯಮ ಪ್ರಭಾವದ ಫಲವೇ ಆಗಿದೆ.

ಅಂದಿನ ಸಿನಿಮಾಗಳಲ್ಲಿ ನಾಯಕ ಗೆಲ್ಲುತ್ತಿದ್ದದ್ದು ತನ್ನ ಬುದ್ಧಿವಂತಿಕೆಯಿಂದ ಮತ್ತು ಧರ್ಮದ ದಾರಿಯಿಂದ. ಆದರೆ ಇಂದಿನ ಸಿನಿಮಾಗಳಲ್ಲಿ ನಾಯಕ ಗೆಲ್ಲುವುದು ಅತಿರೇಕದ ಹಿಂಸೆಯಿಂದ ಮತ್ತು ಕಾನೂನನ್ನು ಕೈಗೆತ್ತಿಕೊಳ್ಳುವುದರಿಂದ. ಇದು ಸಮಾಜಕ್ಕೆ ಯಾವ ರೀತಿಯ ಸಂದೇಶವನ್ನು ನೀಡುತ್ತಿದೆ? 'ಒಬ್ಬ ಮನುಷ್ಯನನ್ನು ನೂರು ಜನ ಹೊಡೆಯುವುದೇ ಮಾಸ್' ಎಂಬ ತಪ್ಪು ವ್ಯಾಖ್ಯಾನವನ್ನು ನಾವು ಜನಸಾಮಾನ್ಯರ ತಲೆಗೆ ತುರುಕುತ್ತಿದ್ದೇವೆ. ಇಂತಹ ಚಿತ್ರಗಳು ಯುವಜನತೆಯ ಮನಸ್ಸನ್ನು ಎಷ್ಟು ವಿಕೃತಗೊಳಿಸುತ್ತಿವೆ ಎಂದರೆ, ಅವರಿಗೆ ತಾಳ್ಮೆ ಮತ್ತು ಸೌಜನ್ಯ ಎನ್ನುವುದು ದುರ್ಬಲತೆ ಎಂಬಂತೆ ಭಾಸವಾಗುತ್ತಿದೆ. ಅಂದು 'ಸ್ಕೂಲ್ ಮಾಸ್ಟರ್' ಅಥವಾ 'ಹೊಸ ಬೆಳಕು' ಸಿನಿಮಾಗಳನ್ನು ನೋಡಿದಾಗ ಮನುಷ್ಯನ ವ್ಯಕ್ತಿತ್ವದ ವಿಕಸನವಾಗುತ್ತಿತ್ತು, ಅಕ್ಷರದ ಮಹತ್ವ ತಿಳಿಯುತ್ತಿತ್ತು. ಆದರೆ ಇಂದು ಅಬ್ಬರದ ಸಂಗೀತ ಮತ್ತು ಪ್ರಚೋದನಕಾರಿ ಸಂಭಾಷಣೆಗಳ ನಡುವೆ ಬದುಕಿನ ಮೌಲ್ಯಗಳು ಕಳೆದುಹೋಗಿವೆ. ಅತೀ ಹೆಚ್ಚು ಹಿಂಸೆ ಇರುವ ಚಿತ್ರಗಳೇ ಬಾಕ್ಸ್ ಆಫೀಸ್‌ನಲ್ಲಿ ಸದ್ದು ಮಾಡುತ್ತಿವೆ ಎಂಬುದು ಸಮಾಜದ ಅಭಿರುಚಿ ಎಷ್ಟು ಕೆಟ್ಟದಾಗಿ ಬದಲಾಗುತ್ತಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಇದು ಕೇವಲ ಚಿತ್ರರಂಗದ ಸೋಲಲ್ಲ, ಇದು ಸಮಗ್ರ ಸಮಾಜದ ಸೋಲು.

ಭಾವನಾತ್ಮಕವಾಗಿ ನೋಡುವುದಾದರೆ, ಸಿನಿಮಾ ಎನ್ನುವುದು ನಮಗೆ ಸಂಬಂಧಗಳನ್ನು ಕಲಿಸಿಕೊಡುವ ಒಂದು ಮಾಧ್ಯಮವಾಗಬೇಕಿತ್ತು. ಅಂದಿನ ಸಿನಿಮಾಗಳಲ್ಲಿ ಅಣ್ಣ–ತಂಗಿ, ತಂದೆ–ಮಗ, ತಾಯಿ–ಮಗಳ ನಡುವಿನ ಬಾಂಧವ್ಯದ ಎಳೆಗಳು ಎಷ್ಟು ನಾಜೂಕಾಗಿರುತ್ತಿದ್ದವು ಎಂದರೆ, ಆ ಚಿತ್ರಗಳನ್ನು ಇಡೀ ಕುಟುಂಬ ಕುಳಿತು ಒಟ್ಟಿಗೆ ನೋಡಬಹುದಿತ್ತು. ಆದರೆ ಇಂದಿನ ಸಿನಿಮಾಗಳು ಕುಟುಂಬದಿಂದ ದೂರವಾಗಿ ಕೇವಲ ಒಂದು ನಿರ್ದಿಷ್ಟ ವರ್ಗದ ಯುವಜನತೆಯನ್ನು ಗುರಿಯಾಗಿಸಿಕೊಂಡು ತಯಾರಾಗುತ್ತಿವೆ. ಚಿತ್ರಗಳಲ್ಲಿನ ಸಂಭಾಷಣೆಗಳಲ್ಲಿ ಬಳಕೆಯಾಗುವ ದ್ವಂದ್ವಾರ್ಥದ ಪದಗಳು ಮತ್ತು ಅಸಭ್ಯ ವರ್ತನೆಗಳು ಸಮಾಜದ ಘನತೆಯನ್ನು ಕುಂದಿಸುತ್ತಿವೆ. ಅಂದು ಪುಟ್ಟಣ್ಣ ಕಣಗಾಲ್ ಅವರಂತಹ ದಾರ್ಶನಿಕ ನಿರ್ದೇಶಕರು ಹೆಣ್ಣಿನ ಮನಸ್ಸಿನ ಆಳವನ್ನು, ಸಂಸಾರದ ಒಳಗಿನ ತೊಳಲಾಟಗಳನ್ನು ಕಾವ್ಯಾತ್ಮಕವಾಗಿ ಚಿತ್ರಿಸುತ್ತಿದ್ದರು. ಅವರ 'ಶರಪಂಜರ' ಅಥವಾ 'ನಾಗರಹಾವು' ಚಿತ್ರಗಳನ್ನು ಇಂದಿಗೂ ನೋಡಿದಾಗ ನಮಗೆ ಬದುಕಿನ ಸತ್ಯಗಳು ದರ್ಶನವಾಗುತ್ತವೆ. ಆದರೆ ಇಂದಿನ ಸಿನಿಮಾಗಳಲ್ಲಿ ನಾಯಕಿಯ ಪಾತ್ರ ಕೇವಲ ಗ್ಲಾಮರ್ ಅನಿವಾರ್ಯತೆಗೆ ಸೀಮಿತವಾಗಿದೆ. ಮನುಷ್ಯನ ಭಾವನೆಗಳಿಗಿಂತ ಇಲ್ಲಿ ಮಾಂಸಖಂಡಗಳ ಪ್ರದರ್ಶನಕ್ಕೇ ಹೆಚ್ಚಿನ ಒತ್ತು ನೀಡಲಾಗುತ್ತಿದೆ.

ಯುವಜನತೆಯೇ ದೇಶದ ಭವಿಷ್ಯ ಎಂದು ನಾವು ಹೇಳುತ್ತೇವೆ. ಅಂತಹ ಯುವಜನತೆಯ ಮನಸ್ಸನ್ನು ರೂಪಿಸುವ ಜವಾಬ್ದಾರಿ ಕಲಾವಿದರ ಮೇಲಿದೆ. ಒಬ್ಬ ನಟನನ್ನು ಲಕ್ಷಾಂತರ ಜನರು ಆರಾಧಿಸುತ್ತಾರೆ ಎಂದಾಗ, ಆ ನಟ ತಾನು ಮಾಡುತ್ತಿರುವ ಪಾತ್ರದ ಪರಿಣಾಮ ಸಮಾಜದ ಮೇಲೆ ಏನಾಗಬಹುದು ಎಂದು ಯೋಚಿಸುವುದು ಅವನ ಧರ್ಮ. ಕೇವಲ ಹಣಕ್ಕಾಗಿ ಅಥವಾ ಖ್ಯಾತಿಗಾಗಿ ಹಿಂಸೆಯನ್ನು ವೈಭವೀಕರಿಸುವುದು ಸಮಾಜಕ್ಕೆ ಮಾಡುತ್ತಿರುವ ದ್ರೋಹ. ಸಿನಿಮಾ ಒಂದು ಸಮಾಜವನ್ನು ಬದಲಿಸಬಲ್ಲದು ಎಂದಾದ ಮೇಲೆ, ಅದನ್ನು ಧನಾತ್ಮಕವಾಗಿ ಬಳಸಬಾರದೇ? ಬದುಕಿನಲ್ಲಿ ಸೋತು ಹತಾಶರಾದವರಿಗೆ, ದಾರಿ ಕಾಣದೆ ತತ್ತರಿಸುತ್ತಿರುವವರಿಗೆ 'ನೀನು ಗೆಲ್ಲಬಲ್ಲೆ' ಎಂಬ ಭರವಸೆ ನೀಡುವ ಕಥೆಗಳು ಇಂದು ಎಲ್ಲಿವೆ? ಅಂದು ಶಂಕರ್ ನಾಗ್ ಅವರ ಚಿತ್ರಗಳು ಸಮಾಜದ ವ್ಯವಸ್ಥೆಯ ವಿರುದ್ಧ ಕೆರಳುತ್ತಿದ್ದವೋ ಹೊರತು, ಅವು ವೈಯಕ್ತಿಕ ದ್ವೇಷದ ರಕ್ತಪಾತವಾಗಿರಲಿಲ್ಲ. ಅವರ ಚಿತ್ರಗಳಲ್ಲಿ ಒಂದು ಸಾಮಾಜಿಕ ಕಳಕಳಿಯಿತ್ತು, ಜನರಿಗೆ ಏನಾದರೂ ಹೊಸತನ್ನು ನೀಡಬೇಕೆಂಬ ಹಂಬಲವಿತ್ತು. ಇಂದಿನ ತಾಂತ್ರಿಕತೆ ಮತ್ತು ಸಂಪನ್ಮೂಲಗಳನ್ನು ಬಳಸಿಕೊಂಡು ಅಂತಹದ್ದೇ ಗುಣಮಟ್ಟದ, ಮೌಲ್ಯಯುತ ಚಿತ್ರಗಳನ್ನು ನೀಡಲು ಸಾಧ್ಯವಿಲ್ಲವೇ? ಖಂಡಿತಾ ಸಾಧ್ಯವಿದೆ, ಆದರೆ ಅದಕ್ಕೆ ಬೇಕಿರುವುದು ಹಣವಲ್ಲ, ಬದಲಾಗಿ ಸಮಾಜದ ಬಗ್ಗೆ ಇರುವ ಬದ್ಧತೆ.

ಕೊನೆಯದಾಗಿ, ಪ್ರೇಕ್ಷಕರಾದ ನಮ್ಮ ಮೇಲೂ ಒಂದು ಜವಾಬ್ದಾರಿಯಿದೆ. ನಾವು ಯಾವ ರೀತಿಯ ಚಿತ್ರಗಳನ್ನು ಪ್ರೋತ್ಸಾಹಿಸುತ್ತೇವೆಯೋ ಅಂತಹದ್ದೇ ಚಿತ್ರಗಳು ಮುಂದಿನ ದಿನಗಳಲ್ಲಿ ಬರಲಿವೆ. ನಾವು ಹಿಂಸೆಯನ್ನು ಸಂಭ್ರಮಿಸುವುದನ್ನು ನಿಲ್ಲಿಸಿ, ಮೌಲ್ಯಯುತ ಚಿತ್ರಗಳನ್ನು ಬೆಂಬಲಿಸಬೇಕಿದೆ. ಸಿನಿಮಾ ಎನ್ನುವ ಈ ಅದ್ಭುತ ಸಂವಹನ ಮಾಧ್ಯಮ ಮತ್ತೆ ತನ್ನ ಹಳೆಯ ಘನತೆಯನ್ನು ಮರಳಿ ಪಡೆಯಬೇಕಿದೆ. ಪರದೆಯ ಮೇಲಿನ ನಾಯಕ ಕೇವಲ ಲಾಂಗು ಮಚ್ಚು ಹಿಡಿಯುವ ರೌಡಿಯಾಗದೆ, ಒಬ್ಬ ತತ್ವಜ್ಞಾನಿಯಾಗಿ, ಒಬ್ಬ ಹೋರಾಟಗಾರನಾಗಿ ಅಥವಾ ಒಬ್ಬ ಮಾನವತಾವಾದಿಯಾಗಿ ಕಾಣಿಸಿಕೊಳ್ಳಬೇಕಿದೆ. ಅಂದಿನ ಕಾಲದ ಆ ಸೌಮ್ಯತೆ, ಆ ನೈತಿಕತೆ ಮತ್ತು ಆ ಬದುಕಿನ ಪಾಠಗಳು ಇಂದಿನ ತಾಂತ್ರಿಕತೆಯೊಂದಿಗೆ ಹದವಾಗಿ ಬೆರೆತರೆ ಕನ್ನಡ ಚಿತ್ರರಂಗದ ಭವಿಷ್ಯ ನಿಜಕ್ಕೂ ಉಜ್ವಲವಾಗುತ್ತದೆ. ಸಿನಿಮಾ ಮಂದಿರದಿಂದ ಹೊರಬಂದ ಪ್ರೇಕ್ಷಕ 'ನಾನು ಇಂದಿನಿಂದ ಒಬ್ಬ ಉತ್ತಮ ಮನುಷ್ಯನಾಗಿ ಬದುಕುತ್ತೇನೆ' ಎಂಬ ನಿರ್ಧಾರವನ್ನು ಮಾಡುವಂತಾದಾಗ ಮಾತ್ರ ಚಿತ್ರರಂಗ ಸಾರ್ಥಕತೆಯನ್ನು ಕಾಣುತ್ತದೆ. ರಕ್ತದ ಕೆಸರಿನಲ್ಲಿ ಬದುಕನ್ನು ಹುಡುಕುವ ಬದಲು, ಪ್ರೀತಿ ಮತ್ತು ಆದರ್ಶದ ಹಾದಿಯಲ್ಲಿ ಬದುಕನ್ನು ಕಟ್ಟಿಕೊಡುವ ಕೆಲಸ ಚಿತ್ರರಂಗದಿಂದ ಆಗಲಿ.

ಶ್ರೀರಾಮ್. ಎಸ್ ಬೆಳವಾಡಿ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,